24-03-2017

ದಿನಾಂಕ: 24-03-2017-10.50(3)-ಜೆ.ಎಲ್&ಹೆಚ್.ಎಸ್

# ಕರ್ನಾಟಕ ವಿಧಾನ ಸಭೆ

## ಶುಕ್ರವಾರ, 24ನೇ ಮಾರ್ಚ್ 2017

## ವಿಷಯಾನುಕ್ರಮಣಿಕೆ

## (INDEX)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

**1.ಪ್ರಶ್ನೋತ್ತರ.**

ಅ.ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀಯುತರುಗಳಾದ
ಕೆ.ಎಂ.ತಿಮ್ಮರಾಯಪ್ಪ (152/2319)
ಈಶ್ವರ್ ಬಿ. ಖಂಡ್ರೆ (ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು)
ಎಸ್.ಎನ್.ನಾರಾಯಣಸ್ವಾಮಿ (156/2206)
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ತೋಟಗಾರಿಕೆ ಕೃಷಿ ಮಾರುಕಟ್ಟೆ ಸಚಿವರ ಪರವಾಗಿ)
ಶ್ರೀ ಬಸವರಾಜ ಬೊಮ್ಮಾಯಿ (160/808)
ಈಶ್ವರ್ ಬಿ. ಖಂಡ್ರೆ (ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು)
ಅರವಿಂದ ಲಿಂಬಾವಳಿ (162/2214)
ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)
ಮಾನಪ್ಪ ಡಿ.ವಜ್ಜಲ್ (163/2383)
ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಲೋಕೋಪಯೋ ಸಚಿವರ ಪರವಾಗಿ)
ಡಾ:ಕೆ.ಶ್ರೀನಿವಾಸಮೂರ್ತಿ (164/1755)
ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಲೋಕೋಪಯೋ ಸಚಿವರ ಪರವಾಗಿ)
ವಿಶ್ವೇಶ್ವರ ಹೆಗಡೆ ಕಾಗೇರಿ (165/1706)
ಈಶ್ವರ್ ಬಿ. ಖಂಡ್ರೆ (ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು)
ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)
ಎಸ್.ಟಿ.ಸೋಮಶೇಖರ್ (155/821)
ಕೃಷ್ಣ ಬೈರೇಗೌಡ (ಕೃಷಿ ಸಚಿವರು)
ಬಿ.ಆರ್.ಯಾವಗಲ್ (158/17140)
ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)

ಆ.ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

24-03-2017

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ದಿನಾಂಕ: 24.03.2017ರ ಹನ್ನೊಂದನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 213 ಪ್ರಶ್ನೆಗಳ ಪೈಕಿ 108 ಪ್ರಶ್ನೆಗಳಿಗೆ ಸದನದಲ್ಲಿ ಮಂಡಿಸಲಾಯಿತು

(ಅನುಬಂಧ-1)

(1-11)

**2.ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.**

ವಿಷಯ:ರಾಯಚೂರು ಜಿಲ್ಲೆಯ ಸಿಇಒ ರವರು ರೈತರ ಬಗ್ಗೆ ಅಮಾನುಷವಾಗಿ ನಡೆದುಕೊಂಡಿರುವ ಬಗ್ಗೆ.

ಶ್ರೀ ಮಾನಪ್ಪ ಡಿ. ಮಜ್ಜಲ್

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

**3.ಸಭೆಯ ಮುಂದಿಡಲಾದ ಕಾಗದ ಪತ್ರಗಳು.**

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)

**4.ವರದಿಯನ್ನೊಪ್ಪಿಸುವುದು.**

ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ (ಉಪಾಧ್ಯಕ್ಷರು ಹಾಗೂ ಅಧ್ಯಕ್ಷರು, ಅರ್ಜಿಗಳ ಸಮಿತಿ)

2016-17ನೇ ಸಾಲಿನ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿಯ 7ನೇ ವರದಿ.

ಶ್ರೀ ಎನ್.ಕ್ಯಾತಸಂದ್ರ ರಾಜಣ್ಣ (ಅಧ್ಯಕ್ಷರು, ಸರ್ಕಾರಿ ಭರವಸೆಗಳ ಸಮಿತಿ)

2016-17ನೇ ಸಾಲಿನ ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯ 7 ಮತ್ತು 8ನೇ ವರದಿ.

**5.ವಿತ್ತೀಯ ಕಾರ್ಯಕಲಾಪಗಳು.**

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)

ವಿಷಯ:2016-17ನೇ ಸಾಲಿನ ಪೂರಕ ಅಂದಾಜುಗಳ (ಮೂರನೇ ಹಾಗೂ ಅಂತಿಮ ಕಂತು)

ಮಂಡಿಸಲಾಯಿತು

**6.ವಿದ್ಯುತ್ ಖರೀದಿಯಲ್ಲಾದ ಅವ್ಯವಹಾರಗಳ ಬಗ್ಗೆ ರಚಿಸಿದ ಸದನದ ಸಮಿತಿಯ ವರದಿಯ ಬಗ್ಗೆ.**

ಶ್ರೀ ಹೆಚ್.ಕೆ.ಕುಮಾರಸ್ವಾಮಿ

ಶ್ರೀ ಬಿ.ಬಿ.ನಿಂಗಯ್ಯ

ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)

ಶ್ರೀ ಹೆಚ್.ಡಿ.ರೇವಣ್ಣ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

## 7.ಶಾಸನ ರಚನೆ.

ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ (ಮುಂದುವರೆದು..)

**2016ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ**

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)

ವಿಧೇಯಕವು ತಿದ್ದುಪಡಿಯೊಂದಿಗೆ ಅಂಗೀಕರಿಸಲ್ಪಟ್ಟಿತು

(ಅನುಬಂಧ-2)

ಶ್ರೀ ಪಿ.ರಾಜೀವ್
ಶ್ರೀ ಕೆ.ಶಿವಮೂರ್ತಿ
ಶ್ರೀ ಪಿ.ಟಿ.ಪರಮೇಶ್ವರ ನಾಯಕ್
ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ
ಶ್ರೀ ಅಶೋಕ್ ಖೇಣಿ
ಶ್ರೀ ಬಿ.ಬಿ.ನಿಂಗಯ್ಯ
ಶ್ರೀ ಮಾನಪ್ಪ ಡಿ.ವಜ್ಜಲ್
ಶ್ರೀ ಈ.ತುಕಾರಾಂ
ಶ್ರೀ ಕೆ.ಎನ್.ರಾಜಣ್ಣ
ಶ್ರೀ ಪ್ರತಾಪ್‌ಗೌಡ ಪಾಟೀಲ್
ಶ್ರೀ ಎಂ.ಪಿ.ರವೀಂದ್ರ
ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ದಲಿಂಗಪ್ಪ
ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)
ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)
ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ ಸಚಿವರು)

## 8.ವಿತ್ತೀಯ ಕಾರ್ಯಕಲಾಪಗಳು.

2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ

ಡಾ:ಖಮರುಲ್ ಇಸ್ಲಾಂ (ಮುಂದುವರೆದು..)
ಶ್ರೀ ಬಸವರಾಜ ಬೊಮ್ಮಾಯಿ

## 9.ಅನುಬಂಧಗಳು-2.

**********

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

**ಕರ್ನಾಟಕ ವಿಧಾನ ಸಭೆ**

ಶುಕ್ರವಾರ, 24ನೇ ಮಾರ್ಚ್ 2017ರ ಅಂದು ಸದನವು

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 58 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರಾದ **ಶ್ರೀ ಕೆ.ಬಿ.ಕೋಳಿವಾಡ** ರವರು ಪೀಠವನ್ನು ಅಲಂಕರಿಸಿದರು

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

**ಹುಟ್ಟು ಹಬ್ಬದ ಶುಭಾಶಯಗಳು**

ಅಧ್ಯಕ್ಷರು: ದಿನಾಂಕ:24-3-2017 ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಮಾನ್ಯ ಸದಸ್ಯರಾದ ಡಾ: ಉಮೇಶ್ ಜಿ.ಜಾಧವ್ ರವರಿಗೆ ಜನ್ಮದಿನದ ಶುಭಾಶಯಗಳು, ಈ ಸಂದರ್ಭದಲ್ಲಿ ಭಗವಂತನು ತಮಗೆ ಆಯುರಾರೋಗ್ಯ ಐಶ್ವರ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ. ಈಗ ಪ್ರಶ್ನೋತ್ತರ ವೇಳೆ.

ಶ್ರೀ ಮಾನಪ್ಪ ಡಿ.ವಜ್ಜಲ್: ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ರಾಯಚೂರು ಜಿಲ್ಲಾ ಪಂಚಾಯಿತಿ ಸಿ.ಇ.ಓ ರವರು ......

ಅಧ್ಯಕ್ಷರು: ಇವರೇನು ನೋಟೀಸ್ ಕೊಟ್ಟಿದ್ದಾರೆಯೇ? ಸುಮ್ಮನೆ ಹಾಗೆಯೇ ಎದ್ದು ಏನು ಬೇಕಾದರೂ ಮಾತನಾಡುವುದಲ್ಲ. ನೀವು ನೋಟೀಸ್ ಕೊಡಿ.

ಶ್ರೀ ಮಾನಪ್ಪ ಡಿ.ವಜ್ಜಲ್: ಸಮಸ್ಯೆ ನಿನ್ನೆ ರಾತ್ರಿ ಉದ್ಭವಿಸಿದೆ ಇವತ್ತು ಬೆಳಿಗ್ಗೆ ಟಿ.ವಿ ಮಾಧ್ಯಮದಲ್ಲಿ ನೋಡಿದ್ದು, ನಿಮ್ಮ ಮುಂದೆ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಅಧ್ಯಕ್ಷರು: ವಿಷಯ ಏನು?

ಶ್ರೀ ಮಾನಪ್ಪ ಡಿ.ವಜ್ಜಲ್: ರಾಯಚೂರು ಜಿಲ್ಲಾ ಪಂಚಾಯಿತಿ ಸಿ.ಇ.ಓ ರವರು ರಾಯಚೂರು ಜಿಲ್ಲೆಯಲ್ಲಿ ಕುಡಿಯುವ ನೀರನ್ನು ವೀಕ್ಷಣೆ ಮಾಡುವುದಕ್ಕೆ ಹೋದಾಗ ರೈತರ ಹೆಗಲ ಮೇಲೆ ಕುಳಿತು ವೀಕ್ಷಣೆ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು: ಇದು ವಿಧಾನಸಭೆ, ಇದರಲ್ಲಿ ನಿಯಮಗಳಿವೆ ನಿಯಮಗಳ ಪ್ರಕಾರ ನೋಟಿಸ್ ಕೊಡಿ. ಇದ್ದಕ್ಕಿದ್ದಂತೆ ಒಮ್ಮೆಗೆ ಎದ್ದು ಮಾತನಾಡುವುದಕ್ಕೆ ಆಗುತ್ತದೆಯೇ?

(ಗೊಂದಲ)

ಶ್ರೀ ಮಾನಪ್ಪ ಡಿ.ವಜ್ಜಲ್: ಇದರಿಂದ ನಮ್ಮ ರಾಜ್ಯದ ಜನತೆಗೆ ಅವಮಾನವಾಗಿದೆ. ಇವತ್ತು ಬೆಳಿಗ್ಗೆ ಟಿ.ವಿ ಮಾಧ್ಯಮದಲ್ಲಿ ನೋಡಿ ಈ ವಿಷಯ ತಿಳಿದುಕೊಂಡಿದ್ದೇವೆ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು: ಇದು ಮುಗಿಯಲ್ಲಿ ಶೂನ್ಯ ವೇಳೆಯಲ್ಲಿ ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಾನಪ್ಪ ಡಿ.ವಜ್ಜಲ್: ಇದು ಬಹಳ ಗಂಭೀರವಾದ ವಿಷಯ. ಕರ್ನಾಟಕದ ಜನತೆಗೆ ಅವಮಾನವಾಗಿದೆ. ಇದರ ಬಗ್ಗೆ step ತೆಗೆದುಕೊಳ್ಳಬೇಕು. ಇಂತಹ ಅಧಿಕಾರಿಗಳು ನಮ್ಮ ರಾಜ್ಯದಲ್ಲಿ ಅವಶ್ಯಕತೆಯಿಲ್ಲ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿದ ಕೂಡಲೇ ಶೂನ್ಯವೇಳೆ ಬರುತ್ತದೆ. ಅದರಲ್ಲಿ ಅವಕಾಶ ಕೊಡುತ್ತೇನೆ.

(ಮುಂದುವರೆದಿದೆ)

ದಿನಾಂಕ: 24.03.2017.11.00.(04).ಜಿಎಂ.ಹೆಚ್ಎಸ್.

**<u>ಪ್ರಶ್ನೋತ್ತರ</u>**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು**

ಅಧ್ಯಕ್ಷರು: ನಾಗೇಂದ್ರ.ಬಿ. ಬಂದಿದ್ದಾರೆಯೇ?

**<u>ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.151(2329)</u>**

(ಮಾನ್ಯ ಸದಸ್ಯರಾದ ಶ್ರೀ ನಾಗೇಂದ್ರ.ಬಿ. ರವರು ಸದನದಲ್ಲಿ ಹಾಜರಿರಲಿಲ್ಲ.)

* * *

ಶ್ರೀ ಮಾನಪ್ಪ ಡಿ.ವಜ್ಜಲ್: ಮಾನ್ಯ ಅಧ್ಯಕ್ಷರೆ, ದಯಮಾಡಿ ಇದರ ಬಗ್ಗೆ step ಕೊಡಬೇಕು, ದಯಮಾಡಿ ತಾವು ಆದೇಶ ಕೊಡಬೇಕು.

ತಿದ್ದುಪಡಿಯಾಗದ /Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು: ನಿಮ್ಮ ಮನಸ್ಸಿಗೆ ಬಂದಂತೆ ಮಾತನಾಡಿದರೆ ಹೇಗೆ ಆಗುತ್ತದೆ? ಶೂನ್ಯವೇಳೆಯಲ್ಲಿ ಅವಕಾಶ ಕೊಡುತ್ತೇನೆ. ಆಗ ವಿಷಯವನ್ನು raise ಮಾಡುವಿರಂತೆ.

(ಗೊಂದಲ)

ಶ್ರೀ ಮಾನಪ್ಪ ಡಿ.ವಜ್ಜಲ್: ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಜನತೆಯ ಮಾನ ಮರ್ಯಾದೆ ಎಲ್ಲವೂ ಹಾಳಾಗಿ ಹೋಗಿದೆ. ರೈತರ ಹೆಗಲ ಮೇಲೆ ಕುಳಿತುಕೊಂಡು ವೀಕ್ಷಣೆ ಮಾಡಿದ್ದಾರೆ.

ಅಧ್ಯಕ್ಷರು: ನಾವು ಹೇಳಿದ್ದನ್ನು ನೀವು ಕೇಳುತ್ತಿಲ್ಲ. ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದೀರಿ.

ಶ್ರೀ ಮಾನಪ್ಪ ಡಿ.ವಜ್ಜಲ್: ಮಾನ್ಯ ಅಧ್ಯಕ್ಷರೆ, ನಾನು ಮನಸ್ಸಿಗೆ ಬಂದಂತೆ ಮಾತನಾಡುತ್ತಿಲ್ಲ.

ಅಧ್ಯಕ್ಷರು: ಇವರು ಮಾತನಾಡುತ್ತಿರುವ ವಿಷಯ ಏನದು? ಇವರು ನೋಟೀಸ್ ಕೊಟ್ಟಿದ್ದಾರೆಯೇ? ನೀವು ನೋಟೀಸ್ ಕೊಡದೆ ಎದ್ದು ನಿಂತು ಮಾತನಾಡಿಬಿಡುವುದೇ?

ಶ್ರೀ ಎನ್.ಹೆಚ್.ಕೋನರೆಡ್ಡಿ: ವಜ್ಜಲ್‌ರವರೆ, ನೀವು ವಿಷಯ ಪ್ರಸ್ತಾಪ ಮಾಡಿದ್ದು ಸರಿಯಿದೆ. ಈಗ ಶೂನ್ಯವೇಳೆಯಲ್ಲಿ ಅವಕಾಶ ಕೊಡುತ್ತೇನೆಂದು ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ಅಷ್ಟರೊಳಗೆ ನೋಟೀಸ್ ರೆಡಿ ಮಾಡಿ ಕೊಡೋಣ. ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಟ್ಟ ನಂತರ ನಾವು ಚರ್ಚೆ ಮಾಡೋಣ.

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದೇನೆ. ಅಷ್ಟು urgent ಇದ್ದರೆ ಶೂನ್ಯವೇಳೆಯಲ್ಲಿ ಅವಕಾಶ ನೀಡಿದಾಗ ನೀವು ಮಾತನಾಡಿ. ಈಗ ಕುಳಿತುಕೊಳ್ಳಿ.

ಶ್ರೀ ಮಾನಪ್ಪ ಡಿ.ವಜ್ಜಲ್: ಮಾನ್ಯ ಅಧ್ಯಕ್ಷರೆ, ಆಯಿತು.

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಅವಧಿಯ ಸಂದರ್ಭದಲ್ಲಿ ಸದನದಲ್ಲಿ ಯಾರ್ಯಾರು ಹಾಜರಿರಬೇಕೆಂಬ ಬಗ್ಗೆ ತಾವು ಒಂದು ಪಟ್ಟಿಯನ್ನು ಪ್ರತಿ ದಿವಸ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಿರಿ.

ಅಧ್ಯಕ್ಷರು: ಹೌದು, ಅವರಿಗೆ ಪಟ್ಟಿಯ ಪ್ರತಿಯನ್ನು ಕೊಡಿ. ಎಷ್ಟು ಬಾರಿ ಹೇಳಬೇಕು ಇವರುಗಳಿಗೆ, ನಮಗೂ ಹೇಳಿ ಹೇಳಿ ಸಾಕಾಗಿದೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, ಪಟ್ಟಿ ನೋಡುವುದಿರಲಿ, ರಾಜ್ಯಕ್ಕೆ ಬಂದಿರುವ ಬರಗಾಲ ಮಂತ್ರಿಗಳಿಗೆ ಬರಬಾರದೆಂದು ನಾನು ಹೇಳುತ್ತಿದ್ದೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಪಟ್ಟಿಯಲ್ಲಿ ನೋಡಿ Energy Department ಬಗ್ಗೆ ಇದೆ, PWD Minister ಇಲ್ಲ, Animal Husbandry Minister, Municipal Administration Minister ಇದ್ದಾರೆ. ಹೀಗಾಗಿ ಪ್ರಶ್ನೆಗೆ ಉತ್ತರ ಕೊಡುವಂಥ ಸಚಿವರು ಈ ಸದನದಲ್ಲಿ ಹಾಜರಿಲ್ಲ. ನಿಮ್ಮ ಪಟ್ಟಿಯಲ್ಲಿ ಇರಬೇಕಾದಂಥವರೂ ಸಹ ಈ ಸದನದಲ್ಲಿ ಹಾಜರಿಲ್ಲ. ಹೀಗಾದರೆ ಸದನ ಏತಕ್ಕಾಗಿ ಇರಬೇಕೆಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು: ಸದನದಲ್ಲಿ ಪ್ರಶ್ನೆಗಳಿಗೆ ಉತ್ತರಿಸಬೇಕಾದಂಥ ಸಚಿವರು 6 ಜನ ಇದ್ದಾರೆ. ಈ ಪೈಕಿ ಮಹದೇವಪ್ಪನವರು permission ತೆಗೆದುಕೊಂಡು ಹೋಗಿದ್ದಾರೆ. ಉಳಿದಂತೆ ಡಿ.ಕೆ.ಶಿವಕುಮಾರ್, ಕೃಷ್ಣ ಭೈರೇಗೌಡ, ಎ.ಮಂಜು, ಮಲ್ಲಿಕಾರ್ಜುನ್, ಈಶ್ವರ್ ಖಂಡ್ರೆರವರುಗಳು ಹಾಗೂ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದಂಥ ಸಚಿವರುಗಳೆಂದರೆ ಟಿ.ಬಿ.ಜಯಚಂದ್ರರವರು ಇದ್ದಾರೆ, ಕೆ.ಆರ್.ರಮೇಶ್‌ಕುಮಾರ್‌ರವರು ಸದನದಲ್ಲಿ ಹಾಜರಿಲ್ಲ, ಬಿ.ರಮಾನಾಥರೈರವರು ಸದನದಲ್ಲಿ ಹಾಜರಿಲ್ಲ, ರೋಷನ್‌ಬೇಗ್‌ರವರು ಸದನದಲ್ಲಿ ಹಾಜರಿಲ್ಲ, ಎಂ.ಬಿ.ಪಾಟೀಲ್‌ರವರು ಸದನದಲ್ಲಿ ಹಾಜರಿಲ್ಲ, ಯು.ಟಿ.ಖಾದರ್‌ರವರು ಇದ್ದಾರೆ. ಹೆಚ್.ಆಂಜನೇಯರವರು ಸದನದಲ್ಲಿ ಹಾಜರಿಲ್ಲ. ಪ್ರಮೋದ್ ಮಧ್ವರಾಜ್‌ರವರು ರಜೆಯಲ್ಲಿದ್ದಾರೆ ಆದ್ದರಿಂದ ಸದನದಲ್ಲಿ ಹಾಜರಿಲ್ಲ. ರುದ್ರಪ್ಪ ಲಮಾಣಿಯವರು ಸದನದಲ್ಲಿ ಹಾಜರಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಉತ್ತರ ಕೊಡುವ 4 ಜನ ಸಚಿವರು ಸದನದಲ್ಲಿ ಹಾಜರಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮುಂದೇನು ಎಂದು ತಾವು ಹೇಳಲಿಲ್ಲ. ಅವರು ಇಲ್ಲ ಎಂದು ನಮಗೂ ಗೊತ್ತಾಯಿತು.

ಅಧ್ಯಕ್ಷರು: ನಾನು ಈಗ ಓದಿ ಹೇಳಿದೆನಲ್ಲ, ಅದು ನಿಮಗೆ ಸಾಕಾಗಲಿಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮುಂದೇನು ಎಂದು ಹೇಳಬೇಕಲ್ಲವೆ?

ಶ್ರೀ ವಿ.ಸುನೀಲ್‌ಕುಮಾರ್: ಅದು ಏನೇನೂ ಅನಿಸಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಅಷ್ಟು ಸೂಕ್ಷ್ಮರಿದ್ದಾರೆಂದು ನಿಮಗೆ ಅಲ್ಲಿಗೆ ಹೋಗಿ ಕುಳಿತ ಮೇಲೆ ಅನ್ನಿಸಿದೆಯೇ?

ಅಧ್ಯಕ್ಷರು: ಶ್ರೀ ಕೆ.ಎಂ.ತಿಮ್ಮರಾಯಪ್ಪ

<u>**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.152(2319)**</u>

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ.)

* * *

ಶ್ರೀ ಕೆ.ಎಂ.ತಿಮ್ಮರಾಯಪ್ಪ(ಪಾವಗಡ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಪಾವಗಡದಲ್ಲಿ ಎಲ್ಲಾ ವರ್ಗದ 97 ಹುದ್ದೆಗಳು ಮಂಜೂರಾತಿಯಾಗಿದ್ದು, ಕೇವಲ 28 ಹುದ್ದೆಗಳನ್ನು ಮಾತ್ರ ಕರ್ತವ್ಯ ನಿರ್ವಹಣೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅಲ್ಲಿ ಆಡಳಿತ ನಿರ್ವಹಣೆಗೆ ತುಂಬಾ ತೊಂದರೆಯಾಗಿದೆ. ನಮಗೆ ಒಬ್ಬ ಇಂಜಿನಿಯರ್ ಸಹ ಕೆಲಸ ಮಾಡುವುದಕ್ಕೆ ಇಲ್ಲ. ಅಭಿವೃದ್ಧಿ ಕಾರ್ಯಗಳು ತುಂಬಾ ಕುಂಠಿತವಾಗಿದೆ. ಯಾರೋ ಒಬ್ಬರನ್ನು ತುಮಕೂರು ಕಡೆಯಿಂದ ನಿಯೋಜನೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ, ಅವರು ವಾರಕ್ಕೆ ಒಂದು ದಿನ ಬಂದು ಅಲ್ಲಿ ಕೆಲಸ ಮಾಡಿದರೆ ಆಗುವುದಿಲ್ಲ. ಆದ್ದರಿಂದ ಕೂಡಲೇ ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ಕೊಡಬೇಕು. ಇನ್ನು ಖಾಲಿಯಿರುವಂಥ 69 ಹುದ್ದೆಗಳನ್ನು ಅತಿ ಬೇಗ ಭರ್ತಿ ಮಾಡಿ ಕೆಲಸ ಕಾರ್ಯ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ತಮ್ಮನ್ನು ಕೋರುತ್ತಿದ್ದೇನೆ.

ಶ್ರೀ ಈಶ್ವರ್ ಬಿ.ಖಂಡ್ರೆ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಸರ್ಕಾರ ಗ್ರೂಪ್ 'ಬಿ' ಮತ್ತು 'ಸಿ' ವೃಂದದ 1,129 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ನಾವು ಪ್ರಸ್ತಾವನೆ ಸಲ್ಲಿಸಿದ್ದೇವೆ. ಅದರಲ್ಲಿ ಕೆಲವೊಂದು ಹುದ್ದೆಗಳನ್ನು ಎಂದರೆ ಈಗಾಗಲೇ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

Environmental Engineers ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಬಾಕಿ ಹುದ್ದೆಗಳನ್ನು ಭರ್ತಿ ಮಾಡುವಂಥ ಪ್ರಕ್ರಿಯೆ ಜಾರಿಯಲ್ಲಿದೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿರುವಂತೆ ಪಾವಗಡದಲ್ಲಿ 69 ಹುದ್ದೆಗಳು ಖಾಲಿ ಇದ್ದರೂ 'ಡಿ' ವರ್ಗದ ಹುದ್ದೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಈಗಾಗಲೇ ಪೌರಕಾರ್ಮಿಕರು ಮತ್ತು ನೀರು ಸರಬರಾಜು ವಿಭಾಗದಲ್ಲಿ ಸುಮಾರು ಮಂಜೂರಾತಿಯಾಗಿರುವುದಕ್ಕಿಂತಲೂ ಸುಮಾರು 87 ಜನ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಖಾಲಿಯಿರುವಂಥ ಕಿರಿಯ ಅಭಿಯಂತರರ ಹುದ್ದೆಗೆ ನಾವು ಎರಡು options ಕೊಟ್ಟಿದ್ದೇವೆ. ಒಂದು PMC ಮುಖಾಂತರವೂ ಇವರು ನೇಮಕ ಮಾಡಿಕೊಳ್ಳಬಹುದಾಗಿದೆ ಅಥವಾ ನಿವೃತ್ತ ಇಂಜಿನಿಯರ್‌ಗಳನ್ನು ನೇಮಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ. ತುರುವೇಕೆರೆಯಿಂದ ಒಬ್ಬ ಅಧಿಕಾರಿಗೆ ತಾತ್ಕಾಲಿಕವಾಗಿ interim arrangement ಎಂದು 3 ದಿವಸಗಳವರೆಗೆ ಅಲ್ಲಿ ಹೋಗಿ ಕೆಲಸ ಮಾಡುವುದಕ್ಕೆ ಅವರಿಗೆ ಸೂಚನೆಯನ್ನು ಸಹ ಕೊಟ್ಟಿದ್ದೇವೆ. ಇದನ್ನು ಹೊರತುಪಡಿಸಿ ಆದಷ್ಟು ಶೀಘ್ರದಲ್ಲಿ ಖಾಲಿಯಿರುವಂಥ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಮತ್ತು ಸಾಮಾನ್ಯ ವರ್ಗಾವಣೆಯಲ್ಲಿ ಕೆಲವೊಂದು ಕಡೆ ಹುದ್ದೆಗಳನ್ನು ಸಮಾನಾಂತರವಾಗಿ ಹಂಚಿಕೆ ಮಾಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನುವ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅಧ್ಯಕ್ಷರು: ಶ್ರೀ ಕೆ.ಎಸ್.ಪುಟ್ಟಣ್ಣಯ್ಯ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.153(2349)**

(ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು ಸದನದಲ್ಲಿ ಹಾಜರಿರಲಿಲ್ಲ.)

ಅಧ್ಯಕ್ಷರು: ಅಪ್ಪಚ್ಚುರಂಜನ್.ಎಂ.ಪಿ, ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟ ಸಚಿವರು ಸಮಯಾವಕಾಶ ಕೇಳಿದ್ದಾರೆ.

ಶ್ರೀ ಅಪ್ಪಚ್ಚುರಂಜನ್.ಎಂ.ಪಿ.: ಮಾನ್ಯ ಅಧ್ಯಕ್ಷರೆ, ನನ್ನದು ಬಹಳ simple question ಇದೆ, ಆದರೆ answer ಬಂದಿಲ್ಲ.

ಅಧ್ಯಕ್ಷರು: ಅಪ್ಪಚ್ಚುರಂಜನ್‌ರವರೆಗೆ ನಿಮ್ಮ ಪ್ರಶ್ನೆಗೆ 3 ದಿವಸಗಳ ಸಮಯ ಕೇಳಿದ್ದಾರೆ. ನಿಮಗೆ 27ನೇ ತಾರೀಖಿನಂದು ಉತ್ತರ ಕೊಡಿಸುತ್ತೇನೆ.

ಶ್ರೀ ಅಪ್ಪಚ್ಚುರಂಜನ್.ಎಂ.ಪಿ.: ಅಷ್ಟರೊಳಗೆ ಅಧಿವೇಶನವೇ ಮುಗಿದು ಹೋಗುತ್ತದೆ.

ಅಧ್ಯಕ್ಷರು: 27 ಮತ್ತು 28 ಎರಡು ದಿನಗಳಂದು ಅಧಿವೇಶನ ನಡೆಯುತ್ತದೆ. ಅವರು ಇನ್ನೂ ಸಮಯ ಕೇಳಿದ್ದರು, ನಾನು ಕೊಟ್ಟಿಲ್ಲ. 27ನೇ ತಾರೀಖಿಗೆ ಉತ್ತರ ಹೇಳಲೇಬೇಕೆಂದು ಹೇಳಿದ್ದೇನೆ. ಆದ್ದರಿಂದ 27ನೇ ತಾರೀಖಿಗೆ ನಿಮಗೆ ಉತ್ತರ ಕೊಡಿಸುತ್ತೇನೆ.

ಮುಂದಿನ ಪ್ರಶ್ನೆ ಶ್ರೀ ಎಸ್.ಟಿ.ಸೋಮಶೇಖರ್‌ರವರು.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.155(821)**

(ಮಾನ್ಯ ಸದಸ್ಯರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರು ಸದನದಲ್ಲಿ ಹಾಜರಿರಲಿಲ್ಲ.)

ಅಧ್ಯಕ್ಷರು: ಶ್ರೀ ನಾರಾಯಣಸ್ವಾಮಿ.ಎಸ್.ಎನ್.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.156(2206)**

ಶ್ರೀ ಕೃಷ್ಣ ಭೈರೇಗೌಡ(ಮಾನ್ಯ ಕೃಷಿ ಸಚಿವರು)(ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ ಉತ್ತರವನ್ನು ಒದಗಿಸಲಾಗಿದೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ.)

* * *

ಶ್ರೀ ನಾರಾಯಣಸ್ವಾಮಿ ಎಸ್.ಎನ್.(ಬಂಗಾರಪೇಟೆ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಪಟ್ಟಣದಲ್ಲಿರುವಂಥ ಜಾಗವನ್ನು ನಾವು ಪುರಸಭೆಯಿಂದ ಕೊಟ್ಟಿದ್ದೇವೆ. ಪುರಸಭೆಯಿಂದ ತರಕಾರಿ ಮತ್ತು ಕೃಷಿ ಮಾಡಲಿ ಎಂದು ಇಲಾಖೆಗೆ ಕೊಟ್ಟಿದ್ದೆವು. ಆದರೆ, ಇಲಾಖೆ ಕಳೆದ 25 ವರ್ಷಗಳಿಂದ ಒಂದೇ ಒಂದು ಸಸಿಯನ್ನೂ ಸಹ ಬೆಳೆದಿಲ್ಲ. 20 ರಿಂದ 30 ಅಡಿ ಜಾಗದಲ್ಲಿ ಕೇವಲ ಒಂದು ಕಛೇರಿಯಿದೆ. ಆ ಕಛೇರಿಯೂ ಸಹ ಶಿಥಿಲಗೊಂಡು ಬಿದ್ದು ಹೋಗಿದೆ. ಆ ಜಾಗದಲ್ಲಿ ಏನೂ ಉಪಯೋಗವಾಗುತ್ತಿಲ್ಲ. ಅಲ್ಲಿ ಸ್ಲಂ ತರಹ ಆಗಿ ಕೇಂದ್ರ ಭಾಗದಲ್ಲೆಲ್ಲಾ ಕಸ ಹಾಕುವಂಥ ಕೆಲಸವಾಗುತ್ತಿದೆ. ತೋಟಗಾರಿಕಾ ಇಲಾಖೆಗೆ ನೀಡಿರುವ ಸುಮಾರು 10 ಎಕರೆ ಪ್ರದೇಶ ಪಟ್ಟಣದಿಂದ ಒಂದು ಕಿ.ಮೀ. ದೂರದಲ್ಲಿದೆ. ಈ ಜಾಗವನ್ನು ಪುರಸಭೆಯಿಂದ ಕೊಟ್ಟಿದ್ದರು. ಆ ಜಾಗವನ್ನು ಪುರಸಭೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮತ್ತೆ ವಾಪಸ್ಸು ತೆಗೆದುಕೊಂಡಿದೆ. Resolution ಮಾಡಿ ಆ ಜಾಗದಲ್ಲಿ SC/ST hostel ಕಟ್ಟುವುದಕ್ಕೆ ಆ ಜಾಗ ಬೇಕು ಎಂದು ಪ್ರಸ್ತಾವನೆ ಕೊಟ್ಟಿದ್ದೇವೆ.

ಅಧ್ಯಕ್ಷರು: ಏನು ಮಾಡಬೇಕು ಎನ್ನುವ ಬಗ್ಗೆ ಪ್ರಶ್ನೆ ಕೇಳಿ.

ಶ್ರೀ ಎಸ್.ಎನ್.ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಜಾಗವನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ಈಗ ತೋಟಗಾರಿಕೆ ಇಲಾಖೆಯವರು ಹೇಳುತ್ತಿದ್ದಾರೆ. ಇವತ್ತು ಜಾಗ ನಿಮಗೆ ಉಪಯೋಗವಾಗುತ್ತಿಲ್ಲ. ಮೇಲಾಗಿ ಪುರಸಭೆಯಿಂದ ನಿಮಗೆ ಜಾಗ ನೀಡಿರುವುದು. ಆ ಜಾಗ ನಮಗೆ ಬಹಳ ಅಗತ್ಯವಾಗಿದೆ. ಎಸ್.ಸಿ./ಎಸ್.ಟಿ. ಹಾಸ್ಟೆಲ್ ಮತ್ತು ಅಂಬೇಡ್ಕರ್ ಭವನ ಕಟ್ಟುವುದಕ್ಕೆ ಆ ಜಾಗವನ್ನು ಕೊಡಬೇಕು.

ಅಧ್ಯಕ್ಷರು: ಜಾಗವನ್ನು ಕೊಡುತ್ತಾರೋ, ಇಲ್ಲವೋ ಎಂದು ಕೇಳಿ.

ಶ್ರೀ ಎಸ್.ಎನ್.ನಾರಾಯಣಸ್ವಾಮಿ: ತೋಟಗಾರಿಕೆ ಇಲಾಖೆಯವರು ಜಾಗವನ್ನು ಕೊಡಲೇಬೇಕು. ಕೊಡುವುದಿಲ್ಲವೆಂದು ಹೇಗೆ ಹೇಳುತ್ತಾರೆ?

ಅಧ್ಯಕ್ಷರು: ಅದು ಅವರಿಗೆ ಬಿಟ್ಟ ವಿಚಾರ. ಅದನ್ನು ನಾನು ಹೇಳುವುದಕ್ಕಾಗುತ್ತದೆಯೇ? ಕೊಡಲೇಬೇಕು ಎಂದು ನಾನು ಹೇಳುವುದಕ್ಕಾಗುವುದಿಲ್ಲ. It is left to the Government.

ಶ್ರೀ ಎಸ್.ಎನ್.ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ಅವರು ಜಾಗವನ್ನು ಕೊಡುವುದಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಏಕೆಂದರೆ ಅವರಿಗೆ ಜಾಗವನ್ನು ಪುರಸಭೆಯಿಂದಲೇ ಕೊಡಲಾಗಿತ್ತು.

ಅಧ್ಯಕ್ಷರು: ಅವರು ಏನು ಹೇಳುತ್ತಾರೆಂದು ಕೇಳೋಣ.

ಶ್ರೀ ಕೃಷ್ಣ ಭೈರೇಗೌಡ(ಮಾನ್ಯ ಕೃಷಿ ಸಚಿವರು)(ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಇಲ್ಲಿ ಸಾಕಷ್ಟು ಜಾಗ ಖಾಲಿಯಿದೆ ನಿಜ. ಆದರೆ, ಈಗ ಏನೋ ಸ್ವಲ್ಪ ತೋಟಗಾರಿಕೆ, ಕೃಷಿ ಕ್ಷೇತ್ರಗಳು ಅಂದರೆ farms ಇರುವುದರಿಂದ ಸ್ವಲ್ಪ ಅಲ್ಲಿ ಇಲ್ಲಿ ಉಸಿರಾಡುವುದಕ್ಕೆ ಜಾಗವಿದೆ, ಗಿಡಮರ ಬೆಳೆಸಬೇಕಾದರೂ ಅವಕಾಶಗಳಿವೆ. ಅವುಗಳನ್ನು ಸಹ ನಾವು ಬೇರೆ ಉದ್ದೇಶಗಳಿಗೆ ಕೊಟ್ಟುಬಿಟ್ಟರೆ ಅನೇಕ ನಗರಗಳಲ್ಲಿ ಸ್ವಲ್ಪವೂ ತೆರೆದ ಸ್ಥಳ ಇರುವುದೇ ಇಲ್ಲ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

Open spaces ಇರುವುದಿಲ್ಲ. ಅದು ಬೇರೆ ವಿಚಾರ ಬಿಡಿ, ಇವತ್ತು ಸದಸ್ಯರಿಗೆ ನಾನು ಅದರ ಬಗ್ಗೆ ಹೇಳುತ್ತಿಲ್ಲ. ಇಲ್ಲಿ ಸ್ವಲ್ಪ ತೆರೆದ ಸ್ಥಳವಿದೆ. ನಾನು ಇಲ್ಲ ಎಂದು ಹೇಳುತ್ತಿಲ್ಲ. ಈಗ ಸದ್ಯಕ್ಕೆ ಅದು ಉಪಯೋಗವಾಗುತ್ತಿಲ್ಲ. ಅವರು ಹೇಳುವುದು ನಿಜವಿದೆ. ಅದನ್ನು ಸಹ ನಾನು ಇಲ್ಲ ಎಂದು ಹೇಳುತ್ತಿಲ್ಲ. ಆದರೆ, ಅಲ್ಲಿ ಈಗ ಒಂದು ಹಾಪ್‌ಕಾಮ್ಸ್ ಮಳಿಗೆ ತೆರೆಯಬೇಕೆಂದು ಸಹ ಒಂದು ಬೇಡಿಕೆ ಬಂದಿದೆ. ಹಾಪ್‌ಕಾಮ್ಸ್ ಮಳಿಗೆ ತೆರೆಯುವಂಥ ಕೆಲಸವನ್ನು ನಾವು ಮಾಡಬೇಕಾಗುತ್ತದೆ ಮತ್ತು ಅದು ತೋಟಗಾರಿಕಾ ಪ್ರದೇಶ. ಸಾಕಷ್ಟು ಮಾವು ಬೆಳೆಯುವಂಥ ಚಟುವಟಿಕೆಗಳು ಈಗ ಅಲ್ಲಿ ನಡೆಯುತ್ತಿದೆ. ಮಾವು ಬೆಳೆಯನ್ನು ರಫ್ತು ಮಾಡುವಂಥ ಪ್ರಯತ್ನಗಳನ್ನು ಕಳೆದ ಎರಡು ವರ್ಷಗಳಿಂದ ಬಹಳ ಹೆಚ್ಚಾಗಿ ಮಾಡುತ್ತಿದ್ದೇವೆ. ಮಾವು ರಫ್ತಾಗಬೇಕೆಂದರೆ ಅದಕ್ಕೆ hot water treatment ಮಾಡುತ್ತಾರೆ. ಅದಾದ ನಂತರ grading ಮಾಡಿ packing ಮಾಡಬೇಕು. ಆಮೇಲೆ ಅದನ್ನು ಹಣ್ಣಾಗಿಸುವುದು ಎಂದರೆ ripening ಎಂದು ಹೇಳುತ್ತಾರೆ. ಅದಕ್ಕೆ ripening chamber ಬೇಕಾಗುತ್ತದೆ. ಒಂದು hot water treatment, grading, packing, ripening chamber ಈ ಎಲ್ಲಾ ಸೌಲಭ್ಯಗಳನ್ನು ಚಿಂತಾಮಣಿಯ ಹತ್ತಿರ ಮಾಡಿಕೆರೆಯಲ್ಲಿ ಮಾಡಿದ್ದೇವೆ. ಈ ಭಾಗದಲ್ಲಿಯೂ ಸಹ ಅದೇ ಮಾದರಿಯಲ್ಲಿ ಇನ್ನೊಂದು ಮಾವು ರಫ್ತು ಮಾಡುವುದಕ್ಕೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಇಲ್ಲಿ ಮಾಡಬೇಕೆನ್ನುವ ಆಲೋಚನೆ ತೋಟಗಾರಿಕಾ ಇಲಾಖೆಯಲ್ಲಿದೆ. ಆದರೂ, ಮಾನ್ಯ ಸದಸ್ಯರು ಕೇಳುತ್ತಿರುವಂಥ ವಿಷಯವನ್ನು ತಳ್ಳಿ ಹಾಕುತ್ತಿಲ್ಲ. ನಾನು ಆಯುಕ್ತರಿಗೆ ಸೂಚನೆ ಕೊಡುತ್ತೇನೆ. ಒಮ್ಮೆ ಸ್ಥಳ ಪರಿಶೀಲನೆ ಮಾಡಿ ಎಲ್ಲಾ ಸಾಧ್ಯಾಸಾಧ್ಯತೆಗಳನ್ನು ತೂಕ ಹಾಕಿ ಒಂದು ಸಮಯೋಚಿತವಾದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಯುಕ್ತರಿಗೆ ನಾನು ಅಲ್ಲಿಗೇ ಕಳುಹಿಸಿಕೊಡುತ್ತೇನೆ. ನೋಡಿದ ನಂತರ ಎಲ್ಲಾ ವಿಚಾರಗಳನ್ನು ತೂಕ ಹಾಕಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು.

(ಮುಂದುವರೆದಿದೆ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

24.03.2017 / 11.10 (05) MPL-SSD

ಶ್ರೀ ಎಸ್.ಎನ್. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ? ನಮ್ಮ ಸಚಿವರು ಹೇಳಿದರು. ಅಲ್ಲಿ ನಾವೇನೋ ಕೆಲಸ ಮಾಡುತ್ತಿದ್ದೇವೆಂದು. 25 ವರ್ಷಗಳಿಂದ 20X30 ಅಳತೆಯ ಹಳೆ ಕಟ್ಟಡವನ್ನು ಬಿಟ್ಟರೆ ಯಾವುದೇ ಚಟುವಟಿಕೆ ಇಲ್ಲ. ಕಸ ಹಾಕುತ್ತಿದ್ದಾರೆ ಇವತ್ತು. ಇಡೀ ಪ್ರದೇಶ ಇವತ್ತು . . .

ಅಧ್ಯಕ್ಷರು : ಅವರು ಕಮೀಷನರ್ ರವರನ್ನು ಕಳುಹಿಸುತ್ತಾರಂತೆ. ಆಗ ಎಲ್ಲವನ್ನೂ ತೋರಿಸಿ, ಹೇಳಿ.

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಇಲ್ಲ, ಇಲ್ಲಿ ಏನಾಗಿದೆ ದಯಮಾಡಿ ನೀವು ನನ್ನ ಸಹಾಯಕ್ಕೆ ಬರಬೇಕು. ಇಲ್ಲಿ ಏನಾಗಿದೆ ಎಂದರೆ ಈ ಜಾಗದಲ್ಲಿ ಎಸ್.ಸಿ/ಎಸ್.ಟಿ ಹಾಸ್ಟೆಲ್ ಕಟ್ಟಬೇಕು, ಅಂಬೇಡ್ಕರ್ ಭವನ ಕಟ್ಟಬೇಕೆಂದು ಸುಮಾರು 15 ವರ್ಷಗಳಿಂದ ನಿರಂತರವಾಗಿ ದಲಿತ ಸಂಘಟನೆಗಳು ಧರಣಿ ಮಾಡುತ್ತಿವೆ. ಈ ಒಂದು ವಾರದ ಹಿಂದೆ ಧರಣಿ ಮಾಡಿದ್ದರು. ಸರ್ಕಾರದ ಮೇಲೆ ಅವರು ಗೂಬೆ ಕೂರಿಸುತ್ತಿದ್ದಾರೆ. ಆ ಜಾಗ ಪುರಸಭೆಯಿಂದ ಇಲಾಖೆಗೆ ಕೊಟ್ಟಿದ್ದೆವು. ಏಕೆ? ತೋಟಗಾರಿಕಾ ಬೆಳೆಗಳನ್ನು ಬೆಳೆಯಲಿ ಎಂದು ಕೊಟ್ಟಿದ್ದೆವು. ತೋಟಗಾರಿಕಾ ಇಲಾಖೆ 25 ವರ್ಷಗಳಿಂದ ಕೆಲಸ ಮಾಡದೇ ಇರುವುದರಿಂದ ಆ ಜಾಗ ಇವತ್ತು ನಿರುಪಯೋಗ ಆಗಿದೆ. ಜೊತೆಗೆ ಪುರಸಭೆಯಲ್ಲಿಯೂ ಕೂಡಾ ಠರಾವು ಮಾಡಿದ್ದೇವೆ. ಈ ಜಾಗವನ್ನು ಹಿಂದೆ ಪುರಸಭೆ ಇಲಾಖೆಗೆ ಕೊಟ್ಟಿತ್ತು. ಇವತ್ತು ಮತ್ತೆ ನಮಗೆ ಅವಶ್ಯಕತೆ ಇದೆ. ಅಂಬೇಡ್ಕರ್ ಭವನ ಕಟ್ಟಬೇಕು. ಎಸ್.ಸಿ/ಎಸ್.ಟಿ ಹಾಸ್ಟೆಲ್ ಕಟ್ಟಬೇಕು. ನಮಗೆ ವಾಪಸ್ಸು ಕೊಡಬೇಕೆಂದು ಹೇಳಿ ಪುರಸಭೆ ಠರಾವು ಮಾಡಿದೆ. ಇಷ್ಟಿದ್ದರೂ ಕೂಡಾ ಈ ಜಾಗ ಏನಿದೆ, ಬಹಳ ಅವಶ್ಯಕವಾಗಿದೆ. ಇವತ್ತು ಇಲಾಖೆಗೆ ಏನು ಸನ್ಮಾನ್ಯ ಸಚಿವರು ಹೇಳಿದರೋ ಆ ಎಲ್ಲಾ ಚಟುವಟಿಕೆ ಮಾಡುವುದಕ್ಕೆ . . .

ಅಧ್ಯಕ್ಷರು : ಆಯಿತು. ಅಲ್ಲ ಇದನ್ನು discussion ಗೆ ತೆಗೆದುಕೊಳ್ಳಬೇಕಿತ್ತು. ಬೇರೆ form ನಲ್ಲಿ ತೆಗೆದುಕೊಳ್ಳಬೇಕು. Question hour ನಲ್ಲಿ ಹೇಗಾಗುತ್ತದೆ?

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಅಧ್ಯಕ್ಷರೆ ಒಂದೇ ನಿಮಿಷ. ಇವತ್ತು ಅವರೇನು ಚಟುವಟಿಕೆಗಳನ್ನು ಹೇಳಿದ್ದಾರೆ. ಇವೆಲ್ಲವನ್ನೂ ಮಾಡುವುದಕ್ಕೆ 15 ಎಕರೆ farm ಇದೆ. ಅದೂ

ಕೂಡಾ ಕೋಲಾರ ಮುಖ್ಯರಸ್ತೆಯಲ್ಲಿದೆ. Horticulture office ಅಲ್ಲಿಯೇ ಇದೆ. ಅಲ್ಲಿಯೇ ಖಾಲಿ ಬಿಟ್ಟಿದ್ದಾರೆ.

ಅಧ್ಯಕ್ಷರು : ನೋಡಿ ಸದಸ್ಯರ ಹೇಳಿಕೆಯಲ್ಲಿ ಬಹಳ ಅರ್ಥ ಇದೆ.

ಎಸ್.ಎನ್.ನಾರಾಯಣಸ್ವಾಮಿ : ದಯಮಾಡಿ ಅದಕ್ಕೆ ಅವಕಾಶ ಕೊಡಬೇಕು. ಸರ್ಕಾರದಲ್ಲಿ ಪ್ರಸ್ತಾವನೆಯನ್ನು pending ಇಟ್ಟಿದ್ದಾರೆ. ಅದರಿಂದ ಇವತ್ತು ನಮಗೆ ಕಷ್ಟವಾಗುತ್ತಿದೆ.

ಅಧ್ಯಕ್ಷರು : ನಿಮ್ಮ ಪರವಾಗಿ ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ.

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಹೇಳಿ ಅಧ್ಯಕ್ಷರೆ.

ಅಧ್ಯಕ್ಷರು : ಸದಸ್ಯರ ಬೇಡಿಕೆ ಬಹಳ genuine ಇದೆ. ಸರ್ಕಾರ ಅತಿ ಶೀಘ್ರದಲ್ಲಿಯೇ ಕ್ರಮ ತೆಗೆದುಕೊಂಡು ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸೂಚನೆ ಮಾಡುತ್ತಿದ್ದೇನೆ.

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಇಲ್ಲ ಅಧ್ಯಕ್ಷರೆ, ಸಚಿವರು ಭರವಸೆ ಕೊಡಬೇಕು.

ಅಧ್ಯಕ್ಷರು : ಸದನದಲ್ಲಿ ನಾನು ಹೇಳಿದ್ದೇನಲ್ಲ? What more you want?

ಎಸ್.ಎನ್.ನಾರಾಯಣಸ್ವಾಮಿ : ಇಲ್ಲ ಸಮಸ್ಯೆ ಬಹಳ ಗಂಭೀರವಾಗಿದೆ.

ಅಧ್ಯಕ್ಷರು : ಗಂಭೀರವಾಗಿರುವುದಕ್ಕೆ ನಾನೇ. . .

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಇವತ್ತು ಅದೇ ಸ್ಥಳದಲ್ಲಿ . . .

ಅಧ್ಯಕ್ಷರು : ಹೀಗೆ ಮಾಡಿದರೆ ನಾನೇನು ಮಾಡಲಿ. ನಿಮ್ಮ ಪರವಾಗಿ ನಾನು ಈಗ ಸರ್ಕಾರಕ್ಕೆ ಆದೇಶ . .

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಅಧ್ಯಕ್ಷರೆ, ಒಂದು ನಿಮಿಷ. ಇದೇ ಒಂದು ವಿಚಾರವಾಗಿ ಇವತ್ತು ಆ ಜಾಗದಲ್ಲಿ ಅಂಬೇಡ್ಕರ್ ರವರ ಭಾವಚಿತ್ರವನ್ನು ಹಾಕಿ ಅವರು ಧರಣಿ ಮಾಡುತ್ತಿದ್ದಾರೆ. ಇವತ್ತು ಆ ಜಾಗವನ್ನು ಕೊಡಲಿಲ್ಲವಾದರೆ ಇಡೀ ಒಂದು. . .

ಅಧ್ಯಕ್ಷರು : ನೀವು ಒಂದು ಕೆಲಸ ಮಾಡಿ. ನೀವು ಸಚಿವರ ಚೇಂಬರಿಗೆ ಹೋಗಿ. ಇವತ್ತು ಇತ್ಯರ್ಥ ಮಾಡಲು ಸಾಧ್ಯವೆ ನೋಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಅಲ್ಲ, ಅವರು ಭರವಸೆ ಕೊಡಬೇಕು. ಜಾಗವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಸ್ಟೆಲ್ ಮತ್ತು ಅಂಬೇಡ್ಕರ್ ಭವನ ಕಟ್ಟುವುದಕ್ಕೆ ಕೊಡುತ್ತೇವೆಂದು ಭರವಸೆ ಕೊಡಬೇಕು ದಯಮಾಡಿ.

ಅಧ್ಯಕ್ಷರು : ಈಗ ಸಿ.ಟಿ.ರವಿ ಯವರ ಪ್ರಶ್ನೆ.

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಭರವಸೆ ಸಿಕ್ಕಿಲ್ಲ ನನಗೆ. ನನಗೆ ಅವರು ಭರವಸೆ ಕೊಡಲಿ.

ಅಧ್ಯಕ್ಷರು : ಇದಾದ ನಂತರ . . .

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಇಲ್ಲ ಆಗುವುದಿಲ್ಲ. ಭರವಸೆ ಕೊಡಬೇಕು ನನಗೆ. ಬಹಳ important ಅಧ್ಯಕ್ಷರೆ.

ಅಧ್ಯಕ್ಷರು : ಭರವಸೆ ಕೊಡಿ ಎಂದು ನಾನು ಅವರನ್ನು ಒತ್ತಾಯ ಮಾಡಲು ಆಗುತ್ತದೆಯೆ?

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಇಲ್ಲ ಆಗುವುದಿಲ್ಲ ಸಚಿವರು ನನಗೆ ಭರವಸೆ ಕೊಡಬೇಕು.

ಅಧ್ಯಕ್ಷರು : ನಾನೇನು ಮಾಡುವುದಕ್ಕೆ ಆಗುವುದಿಲ್ಲ. ನೋಡಿ ನಿಮ್ಮ ಪರವಾಗಿ ನಾನು ಸೂಚನೆ ಕೊಟ್ಟಿದ್ದೇನೆ. ಇದಕ್ಕಿಂತ ಹೆಚ್ಚಿಗೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಭರವಸೆ ಕೊಡುವುದು, ಬಿಡುವುದು ಅವರಿಗೆ ಬಿಟ್ಟಂತಹ ವಿಷಯ. ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಸಿ.ಟಿ. ರವರಿ ಪ್ರಶ್ನೆ ಕೇಳಿ.

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಇಲ್ಲ, ಇಲ್ಲ ಭರವಸೆ ಕೊಡಲಿ ಅಧ್ಯಕ್ಷರೆ, ದಯಮಾಡಿ.

ಅಧ್ಯಕ್ಷರು : ಭರವಸೆ ಕೊಡುವುದು, ಬಿಡುವುದು ಅವರಿಗೆ ಬಿಟ್ಟಿದ್ದು. ನಾನೇಕೆ ಹೇಳಬೇಕು.

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಇಲ್ಲ ಭರವಸೆ ಕೊಡಬೇಕು ಸಚಿವರು. ಕೊಡಲಿ ಭರವಸೆ ಕೊಡಲಿ.

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಈಗ ತಾವು ಹೇಳಿದ್ದನ್ನು ಸಹ ನಮ್ಮ ಕಾರ್ಯದರ್ಶಿಗಳು ಇಲ್ಲಿಯೇ ಇದ್ದಾರೆ, ಆಯುಕ್ತರು ಇಲ್ಲಿಯೇ ಇದ್ದಾರೆ. ತಾವು ಹೇಳಿದ್ದನ್ನು ಅವರು ಕೇಳಿಸಿಕೊಂಡಿದ್ದಾರೆ. ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ಸರ್ಕಾರ ಆಲಿಸಿದೆ. ಈಗ ತಕ್ಷಣಕ್ಕೆ ಇಲ್ಲಿಯೇ ಎಂದರೆ ಇಲ್ಲೇ ತೀರ್ಮಾನ ಆಗಬೇಕೆಂದರೆ ಬಹುಶ: ಅದು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸರಿಯಾದ ನಿರೀಕ್ಷೆ ಅಲ್ಲ. ನಾನು ಸದಸ್ಯರಲ್ಲಿ ಮನವಿ ಮಾಡುತ್ತೇನೆ. ನಾನು ಆಯುಕ್ತರನ್ನು ಅಲ್ಲಿಗೆ ಕಳುಹಿಸಿಕೊಡುತ್ತೇನೆ. ಅವರು ಹೇಳಿರುವ ಎಲ್ಲಾ ಅಂಶಗಳನ್ನು ಆಧಾರವಾಗಿಟ್ಟುಕೊಂಡು ತೂಕ ಹಾಕಿ ಒಂದು ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು. ಈಗ ಸಿ.ಟಿ.ರವಿ ಯವರು ಪ್ರಶ್ನೆ ಕೇಳಿ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಯನ್ನು ಕೇಳುವುದಿಲ್ಲ. ಅವರು ನನಗೆ ನಂಜನಗೂಡು, ಗುಂಡ್ಲುಪೇಟೆಯಲ್ಲಿ ಸಿಗುತ್ತಾರೆ. ಅಲ್ಲಿಯೇ ಮಾತನಾಡುತ್ತೇನೆ. ನಾನು ಇಲ್ಲಿ ಇಲ್ಲದಿರುವ ಸಚಿವರ ಬಳಿ ಪ್ರಶ್ನೆ ಕೇಳುವುದಕ್ಕೆ ಹೋಗುವುದಿಲ್ಲ. ನನಗೆ ಅವರು ಅಲ್ಲಿ ಸಿಗುತ್ತಾರೆ. ಅಲ್ಲಿ ನಾನು ಅವರೊಡನೆ ಮಾತನಾಡುತ್ತೇನೆ.

ಅಧ್ಯಕ್ಷರು : ಅವರ ಪರವಾಗಿ ಕಾನೂನು ಸಚಿವರು ಉತ್ತರ ಕೊಡುತ್ತಾರಂತೆ. ಉತ್ತರ ಬೇಡವೇನು?

ಶ್ರೀ ಅರವಿಂದ ಎಸ್. ಲಿಂಬಾವಳಿ : ಅದು ಹೇಗೆ ಆಗುತ್ತದೆ ಸರ್? ಇದು ಸದನದ property ಆಗುತ್ತದೆ. ಸರ್ಕಾರ ಏನು ಎಂದು ಹೇಳಬೇಕು. ಸಚಿವರು ಬರುತ್ತಾರೋ, ಇಲ್ಲವೋ? ಯಾವುದು ಮುಖ್ಯ ಎಂದು ಸಚಿವರು ಹೇಳಬೇಕು. ಅದು ಮುಖ್ಯನಾ, ಇದು ಮುಖ್ಯನಾ ಅಂತ.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಸಚಿವರು) (ಲೋಕೋಪಯೋಗಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಅವರು ಸ್ಪೀಕರ್‌ರವರ ಅನುಮತಿಯನ್ನು ಪಡೆದುಕೊಂಡು ಹೋಗಿದ್ದಾರೆ. ಅವರ ಪರವಾಗಿ ಉತ್ತರ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ.

ಶ್ರೀ ಅರವಿಂದ ಎಸ್.ಲಿಂಬಾವಳಿ : ನಾನು ಕೂಡಾ ಅಲ್ಲಿಯೇ ಇದ್ದೆ. ಕಲ್ಲು ಹೊಡೆಸಿದಿರಲ್ಲ ನೀವು. ಆ ಕಡೆಯಿಂದ ಕಲ್ಲು ಹೊಡೆಸಿದಿರಲ್ಲ.

ಅಧ್ಯಕ್ಷರು : ಅದನ್ನು ಬಿಡಿ. ಇದಕ್ಕೆ ಸಂಬಂಧಪಟ್ಟದ್ದು ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ : ಅಲ್ಲ, ಸನ್ಮಾನ್ಯ ಸಿ.ಟಿ.ರವಿ ಯವರು ಹೇಳಿರುವುದರಲ್ಲಿ . . .

ಶ್ರೀ ಅರವಿಂದ ಎಸ್.ಲಿಂಬಾವಳಿ : ಸದನ ಮುಗಿಸಿಬಿಡಿ. ಇಲ್ಲವಾದರೆ ಬೇಡ.

(ಗೊಂದಲ)

ಶ್ರೀ ಸಿ.ಟಿ.ರವಿ : ಅವರು ಯಾವ ಹಿನ್ನೆಲೆಯಲ್ಲಿ ಅನುಮತಿ ಪಡೆದಿದ್ದಾರೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಚುನಾವಣಾ ನಿಮಿತ್ತವಾಗಿ ಎಂದು ಕೇಳಿದ್ದಾರೋ, ಹೇಗೆ?

ಶ್ರೀ ಅರವಿಂದ ಎಸ್.ಲಿಂಬಾವಳಿ : ಏನು ಅನುಮತಿ ಆರೋಗ್ಯ ಸರಿಯಿಲ್ಲವೋ? ಅಥವಾ ಇನ್ನೇನಾದರೂ ಇದೆಯೆ? ವಿದೇಶಕ್ಕೆ ಏನಾದರೂ ಹೋಗಿದ್ದಾರಾ? ಅಥವಾ ಪಕ್ಷದಿಂದ ಏನಾದರೂ ಸೂಚನೆ ಕೊಟ್ಟು ನಿಮ್ಮ ಅನುಮತಿ ಪಡೆದಿದ್ದಾರಾ? ಅದನ್ನು ಹೇಳಬೇಕಲ್ಲ?

ಅಧ್ಯಕ್ಷರು : ಬೇರೆ ಕಾರ್ಯಕ್ರಮಗಳಿವೆ. ಕಾರ್ಯದ ನಿಮಿತ್ತ ನಾನು ಹೋಗುತ್ತಿದ್ದೇನೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಯಾವ ಕಾರ್ಯ? ಅಧಿವೇಶನ ಬಿಟ್ಟು ಚುನಾವಣೆಯಲ್ಲಿರುವ ಕಾರ್ಯ ಎಂದು ಅವರು ಬರೆಯಬೇಕಿತ್ತು.

(ಗೊಂದಲ)

ಶ್ರೀ ಅರವಿಂದ ಎಸ್.ಲಿಂಬಾವಳಿ : ಯಾವ ಕಾರ್ಯ? ಬಹಳ ಮುಖ್ಯ. ಯಾವ ಕಾರ್ಯಕ್ಕೆ ಹೋಗಿದ್ದಾರೆ?

(ಗೊಂದಲ)

ಶ್ರೀ ಸಿ.ಟಿ.ರವಿ : ನಮ್ಮ ಕಡೆ ಕಾರ್ಯ ಎಂದರೆ ಬೇರೆ ಅರ್ಥ. ಯಾವ ಕಾರ್ಯ?

(ಗೊಂದಲ)

ಅಧ್ಯಕ್ಷರು : ಅವರಿಗೆ ಸಂಬಂಧಪಟ್ಟಂತಹ ಪ್ರಶ್ನೆಗಳಿಗೆ ಕಾನೂನು ಸಚಿವರು ಉತ್ತರ ಕೊಡುತ್ತಾರೆ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್ ತಾವು ಇದನ್ನು ಒಪ್ಪುತ್ತೀರಾ?

(ಗೊಂದಲ)

ಶ್ರೀ ಅರವಿಂದ ಎಸ್.ಲಿಂಬಾವಳಿ : ಕಾರ್ಯ ಎಂದರೆ ಏನು ಸರ್?

(ಗೊಂದಲ)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು : ನಿಮಗೆ ಉತ್ತರ ಬೇಕೋ? ಅವರ body ಬೇಕೋ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಉತ್ತರ ಏನು ಕೊಡುತ್ತಾರೆ ಅಧ್ಯಕ್ಷರೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಎರಡೂ important ಅಧ್ಯಕ್ಷರೆ.

(ಗೊಂದಲ)

ಶ್ರೀ ಅರವಿಂದ ಎಸ್.ಲಿಂಬಾವಳಿ : ಕಾರ್ಯ ಎಂದರೆ ಏನು ಕಾರ್ಯ ಎಂದು ದಯವಿಟ್ಟು explain ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನನಗೂ actually ಪಕ್ಷದಿಂದ ಚುನಾವಣೆಗೆ ಬರಬೇಕೆಂದು ಹೇಳಿದರು. ಅಧಿವೇಶನ ಇರುವ ಕಾರಣದ ಸಲುವಾಗಿ ನೀವು ಇಲ್ಲಿಯೇ ಇರಿ ಎಂದು ಪಕ್ಷ ನಮಗೆ ನಿರ್ದೇಶನ ಕೊಟ್ಟಿದೆ. ಇವತ್ತು ಲೋಕೋಪಯೋಗಿ ಇಲಾಖೆಯ ಸಚಿವರು ಇವತ್ತು ನಾವು ಟಿ.ವಿ. ಯಲ್ಲಿ ನೋಡುತ್ತೇವೆ, ಪತ್ರಿಕೆಯಲ್ಲಿ ನೋಡುತ್ತೇವೆ. ದಿನಾಲೂ ಅಲ್ಲಿ campaign ಮಾಡುತ್ತಾರೆ. ಇಲ್ಲಿ ಅಧಿವೇಶನ ನಡೆಯುತ್ತಿದೆ. ಇದು ಒಳ್ಳೆಯದಲ್ಲ. ಇವತ್ತು ನಮ್ಮ duty ಇಲ್ಲಿ ಮಾಡಬೇಕು. ಇತರೆ ನಾಯಕರು ಅಲ್ಲಿ ಹೋಗಬೇಕು election ಗೆ. ಬೇಡ ಎನ್ನುವುದಿಲ್ಲ. ಅಥವಾ ಇಲ್ಲಿ ಪ್ರಶ್ನೆಗೆ ಉತ್ತರ ಹೇಳಿ ಅಲ್ಲಿಗೆ ಹೋಗಲಿ ಬೇಕಾದರೆ. ನಾವು ಜವಾಬ್ದಾರಿ ಸ್ಥಾನದಲ್ಲಿರುವವರು. ಇಲ್ಲಿ ಯಾವುದೇ ಕಾರಣಕ್ಕೆ absent ಆಗುವುದು ಒಳ್ಳೆಯದಲ್ಲ. ಒಬ್ಬರು ಸಚಿವರಾಗಿ first priority ಇಲ್ಲಿರಬೇಕು ಅವರು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ :ಇದು ವಿಧಾನಸಭೆಗೆ ಕೊಡುವ ಗೌರವನಾ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಕಾರ್ಯ ನಿಮಿತ್ತ ಎಂದು ಕೇಳಿದ್ದಾರಲ್ಲ, ನಮ್ಮ ಕಡೆ ಕಾರ್ಯ ಎಂದರೆ ಅಂತಿಮ ಕ್ರಿಯೆ. ಅಂತಿಮ ಕ್ರಿಯೆ ನಿಮಿತ್ತಾನಾ ಅದು.

(ಗೊಂದಲ)

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು : ನಿಮ್ಮ ಅರ್ಥದಲ್ಲಿ ಹಾಗಿರಬೇಕು. ಅವರ ಅರ್ಥದಲ್ಲಿ ಹೇಗಿದೆಯೋ ಯಾರಿಗೆ ಗೊತ್ತು?

(ಗೊಂದಲ)

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಕಾರ್ಯ ಎಂದರೆ ಕೆಲಸವೂ ಆಗುತ್ತದೆ ಬರಿ ಅಂತ್ಯಕ್ರಿಯೆ ಅಲ್ಲ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಸದಸ್ಯರು ಏಕೆ ಆ ರೀತಿ ಅರ್ಥೈಸುತ್ತೀರಿ?

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್ : ಕಾರ್ಯ ನಿಮಿತ್ತ ಎಂದರೆ ಏನು ಕಾರ್ಯ ಅದು ?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಕಾರ್ಯ ಏನು ಎಂದು ಅವರಿಗೆ ಗೊತ್ತು.

(ಗೊಂದಲ)

ಅಧ್ಯಕ್ಷರು : ಅವರು ಪತ್ರ ಕೊಟ್ಟಿರುವ ಪ್ರಕಾರ . . . .

(ಗೊಂದಲ)

ಶ್ರೀ ಅರವಿಂದ ಎಸ್.ಲಿಂಬಾವಳಿ : ಕಾರ್ಯ ಎಂದರೆ ಏನು ? ಮದುವೆ ಕಾರ್ಯ ಅಂತ ಬರೆಯಲಿ ಬೇಕಾದರೆ, ಅಂತ್ಯ ಕಾರ್ಯ ಅಂತ ಬರೆಯಲಿ (

(ಗೊಂದಲ)

ಅಧ್ಯಕ್ಷರು : ಇಲ್ಲಿ ಕೇಳಿ. ಅವರು ಹೋಗಿರುವುದು ಮೈಸೂರಿಗೆ. ಗುಂಡ್ಲುಪೇಟೆಗೆ ಅಲ್ಲ.

(ಗೊಂದಲ)

ಶ್ರೀ ಸಿ.ಟಿ.ರವಿ : ಸರ್, ನಂಜನಗೂಡಿನಲ್ಲಿದ್ದಾರೆ ಬನ್ನಿ.

(ಗೊಂದಲ)

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಪ್ರಧಾನ ಮಂತ್ರಿಗಳು 20 ದಿವಸ ಸದನಕ್ಕೆ ಹೋಗಿಲ್ಲ. ಅಲ್ಲಿ ಯಾರೂ ಕೇಳಲಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ಉಪ ಚುನಾವಣೆಯಲ್ಲಿ ಸರ್ಕಾರಿ ಯಂತ್ರದ ದುರುಪಯೋಗ ಆಗುತ್ತಿದೆ ಎಂಬ ನಮ್ಮ ಆರೋಪ ಇದೆಯಲ್ಲ, ಈ ರೀತಿ ಸಚಿವರು ಅಲ್ಲಿ ಕುಳಿತುಕೊಂಡು ಸರ್ಕಾರಿ ಯಂತ್ರದ ದುರುಪಯೋಗ ಮಾಡಿಕೊಳ್ಳುವುದು.

(ಗೊಂದಲ)

ಅಧ್ಯಕ್ಷರು : ನಿಮ್ಮ ಆರೋಪಕ್ಕೆ ನಾವು ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಅರವಿಂದ ಎಸ್.ಲಿಂಬಾವಳಿ : ಅವರು ಉತ್ತರ ಕೊಡಲಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿ ಇದೆ.

(ಗೊಂದಲ)

ಅಧ್ಯಕ್ಷರು : ಕಾನೂನು ಸಚಿವರು ಏನು ಹೇಳುತ್ತಾರೆ ಕೇಳಿಯಾದರೂ ಕೇಳೋಣ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಅವರು ತಮ್ಮ ಅಪ್ಪಣೆಯನ್ನು ಪಡೆದು ಸಭೆಗೆ ಬರುತ್ತಿಲ್ಲ ಎಂದು ಹೇಳಿದ್ದಾರೆ. ಅವರು ಕೇಳುವಂತಹ ಪ್ರಶ್ನೆಗೆ ಸರ್ಕಾರ ಉತ್ತರ ಕೊಡುತ್ತದೆ. ಅದರಲ್ಲಿ ಏನೂ ತೊಂದರೆ ಇಲ್ಲ.

ಶ್ರೀ ಎಸ್.ಸುರೇಶ್ ಕುಮಾರ್ : ನಮ್ಮ ಪ್ರಶ್ನೆ ಇರುವುದು ನೀವು ಉತ್ತರ ಕೊಡುವುದಕ್ಕೆ ಸನ್ನದ್ಧರಾಗಿದ್ದೀರಿ ನಾವು ಒಪ್ಪಿಕೊಳ್ಳುತ್ತೇವೆ. ಪ್ರಶ್ನೆ ಇರುವುದು ಅವರು ಏಕೆ ಬಂದಿಲ್ಲ? ಯಾವ ಕಾರ್ಯದ ನಿಮಿತ್ತ ಹೋಗಿದ್ದಾರೆ.

ಅಧ್ಯಕ್ಷರು : ಸುರೇಶ್ ಕುಮಾರ್ ರವರೆ...

ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನೀವು ಸಭಾಧ್ಯಕ್ಷರಾಗಿ ನೀವು ಸದನವನ್ನು ಚೆನ್ನಾಗಿ ನಡೆಸಬೇಕೆಂದು ತಮ್ಮ ಆಕ್ರೋಶವನ್ನು, ವೇದನೆಯನ್ನು ತೋರಿಸುತ್ತಲೇ ಬಂದಿದ್ದೀರಿ. Here is a classic example, ಲೋಕೋಪಯೋಗಿ ಸಚಿವರು ಇಲ್ಲಿ ಇರಬೇಕಾಗಿತ್ತು ಎಂದು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನೀವೇ ಓದಿದ್ದೀರಿ. ಅವರ ಪ್ರಶ್ನೆ ಇದೆ. ಈಗ ಹೇಳುತ್ತೀರಿ ಕಾರ್ಯ ನಿಮಿತ್ತ ಎಂದು. ಯಾವ ಕಾರ್ಯ?

(ಗೊಂದಲ)

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಹೌದು ಅವರು ತಮ್ಮ permission ತೆಗೆದುಕೊಂಡು ಹೋಗಿದ್ದಾರೆ. ಹೋಗಬಾರದಾ ಹಾಗಾದರೆ? ಅವರು ತುರ್ತು ಕೆಲಸದ ಮೇಲೆ permission ತೆಗೆದುಕೊಂಡು ಹೋಗಿದ್ದಾರೆ. ಹಾಗಾದರೆ ಹೋಗಲೇಬಾರದಾ?

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ಇಡೀ ಅಧಿವೇಶನಕ್ಕೆ ಬಂದಿಲ್ಲ ಅವರು.

(ಗೊಂದಲ)

ಅಧ್ಯಕ್ಷರು : ಅವರ personal ಏನು ಕಾರ್ಯ ಇದೆ ಎಂದು ನನಗಾದರೂ ಏನು ಗೊತ್ತು? ಎಲ್ಲರ ಹತ್ತಿರವೂ ಏಕೆ ಹೋಗುತ್ತೀರಿ? ಎಲ್ಲಿ ಹೋಗುತ್ತೀರಿ? ಮಗಳ ಮನೆಗೆ ಹೋಗುತ್ತೀರೋ? ಮಗನ ಮನೆಗೆ ಹೋಗುತ್ತೀರೋ ಎಂದು ನಾನು ಕೇಳುವುದಕ್ಕೆ ಆಗುತ್ತದೆ ಏನು?

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ಕೇಳಬೇಕು ಅಧ್ಯಕ್ಷರೆ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್ : ಅವರು ನಂಜನಗೂಡು election ಗೋಸ್ಕರ ಹೋಗಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಅವರು ಯಾವ ಕಾರಣಕ್ಕೆ ಹೋಗಿದ್ದಾರೆ ಎಂದು ಓದಿ ಹೇಳಿದ್ದೀರಿ. Foreign ಗಂತೂ ಹೋಗಿಲ್ಲ ಅವರು. ಕರ್ನಾಟಕದಲ್ಲಿಯೇ ಇದ್ದಾರೆ.

(ಗೊಂದಲ)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರನ್ನು ಕರೆಸಿ ಅಧ್ಯಕ್ಷರೆ, ತಾವು ಈ ಸದನದಲ್ಲಿ ಆದೇಶ ಮಾಡಿ ಅವರನ್ನು ಕರೆಸಬೇಕು.

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ಇಡೀ session ನಲ್ಲಿ ನೋಡಲಿಲ್ಲ ಅವರನ್ನು ಕಳೆದ 10 ದಿನಗಳಿಂದ.

(ಗೊಂದಲ)

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಅವರು ಅನುಮತಿ ತೆಗೆದುಕೊಂಡು ಹೋಗಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರು ಚುನಾವಣೆಯಲ್ಲಿ ಮಗ್ನರಾಗಿದ್ದಾರೆ.

(ಗೊಂದಲ)

ಅಧ್ಯಕ್ಷರು : ಅದು ನನಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಉ : ಅಧಿವೇಶನಕ್ಕಿಂತಲೂ, ಈ ಸದನಕ್ಕಿಂತಲೂ ಚುನಾವಣೆ ಮುಖ್ಯವಾಗಿದೆ. ಅಧಿಕಾರದ ದುರುಪಯೋಗ ಮಾಡಿಕೊಳ್ಳುವುದಕ್ಕೆ ಅಲ್ಲಿ ಹೋಗಿದ್ದಾರೆ. ಅವರನ್ನು ಕರೆಸಿ.

(ಗೊಂದಲ)

ಅಧ್ಯಕ್ಷರು : ಈಗ ಅವರು ಉತ್ತರ ಕೊಡಬೇಕೋ, ಬೇಡವೋ?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಇವರು ಹೀಗೆಲ್ಲಾ ಮಾತನಾಡುತ್ತಿರುವುದನ್ನು ನೋಡಿದರೆ ಸೋಲಿನ ಭೀತಿ ಕಾಣುತ್ತಿದೆ. ಅದಕ್ಕೋಸ್ಕರ ಹೀಗೆ ಮಾಡುತ್ತಿದ್ದಾರೆ ಎನಿಸುತ್ತದೆ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್ : ನಮಗೆ ನಮ್ಮ ಸಚಿವರ ಬಗ್ಗೆ ಒಂದು ಕಾಳಜಿ ಇದೆ. ಯಾತಕ್ಕೆ ಬಂದಿಲ್ಲ? ಅವರದೇನಾದರೂ personal ಸಮಸ್ಯೆ ಇದೆಯೆ? ಏನು ಸಮಸ್ಯೆ ? ಯಾವ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕಾರ್ಯದ ನಿಮಿತ್ತ ? ಅವರ ವೈಯಕ್ತಿಕ ಕಾರಣ ಹೇಳಲು ಆಗುವುದಿಲ್ಲ, because he is a minister.

(ಗೊಂದಲ)

ಅಧ್ಯಕ್ಷರು : ನೋಡಿ ಅವರು ಪತ್ರದಲ್ಲಿ . . .

ಶ್ರೀ ವಿ.ಸುನೀಲ್ ಕುಮಾರ್ : ಡೈರಿ ಸಮಸ್ಯೆ ಕಾರಣಕ್ಕೆ ಬರಲಿಲ್ಲವೇ? ಮಗನಿಗೆ ಟಿಕೇಟ್ ಕೊಡಲಿಲ್ಲ ಎನ್ನುವ ಕಾರಣಕ್ಕೆ ಬರಲಿಲ್ಲವಾ? ಆರೋಗ್ಯ ಸಮಸ್ಯೆ ಕಾರಣಕ್ಕೆ ಬರಲಿಲ್ಲವಾ? ಯಾವ ಕಾರಣಕ್ಕೆ ಬರಲಿಲ್ಲ ಎಂದು ಗೊತ್ತಾಗಬೇಕಲ್ಲ?

(ಮುಂದು. . . .)

24.03.2017-11.20-(6) BR-SSD

ಶ್ರೀ ಎಸ್.ಸುರೇಶ್ ಕುಮಾರ್: ನಮಗೆ ನಮ್ಮ ಸಚಿವರ ಬಗ್ಗೆ ಕಾಳಜಿ ಇದೆ. ಏತಕ್ಕಾಗಿ ಬಂದಿಲ್ಲ? ಅವರದ್ದೇನಾದರೂ personal ಸಮಸ್ಯೆ ಇದೆಯಾ? ಏನು ಸಮಸ್ಯೆ ಇದೆ? ಯಾವ ಕಾರ್ಯ ನಿಮಿತ್ತ ಬಂದಿಲ್ಲ? ಅವರು ವೈಯಕ್ತಿಕ ಕಾರಣ ಹೇಳುವುದಕ್ಕೆ ಆಗುವುದಿಲ್ಲ, because he is a Minister.

ಶ್ರೀ ವಿ.ಸುನಿಲ್ ಕುಮಾರ್ : ಡೈರಿ ಸಮಸ್ಯೆ ಕಾರಣಕ್ಕೆ ಬರಲಿಲ್ಲವೇ? ಮಗನಿಗೆ ಟಿಕೆಟ್ ಕೊಡಲಿಲ್ಲ ಎನ್ನುವ ಕಾರಣಕ್ಕೆ ಬರಲಿಲ್ಲವೇ?, ಆರೋಗ್ಯ ಸಮಸ್ಯೆ ಕಾರಣಕ್ಕೆ ಬರಲಿಲ್ಲವೆ? ಯಾವ ಕಾರಣಕ್ಕೆ ಬರಲಿಲ್ಲ ಎನ್ನುವುದು ತಿಳಿಯಬೇಕಲ್ಲಾ?

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ಇಲ್ಲಿ ಕೇಳಿ, 'ತುರ್ತು ಕಾರ್ಯದ ನಿಮಿತ್ತ ನಾನು ಮೈಸೂರಿಗೆ ತೆರಳಬೇಕಾಗಿರುವುದರಿಂದ ದಿನಾಂಕ 23.03.2017 ಮತ್ತು 24.03.2017 ರಂದು ವಿಧಾನಸಭೆ ಕಲಾಪಗಳಿಗೆ ಹಾಜರಾಗಲು ಆಗುತ್ತಿಲ್ಲ. ದಯಮಾಡಿ ಅನುಮತಿ ಕೊಡಬೇಕೆಂದು ವಿನಂತಿಸುತ್ತೇನೆ' ಎಂದು ಪತ್ರ ಕೊಟ್ಟಿದ್ದಾರೆ.

ಶ್ರೀ ವಿ. ಸುನಿಲ್ ಕುಮಾರ್ : ಅವರು ಇಡೀ ಅಧಿವೇಶನಕ್ಕೆ ಬಂದಿಲ್ಲ, ಇವತ್ತು ಮಾತ್ರವಲ್ಲ.

(ಗೊಂದಲ)



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಸಚಿವರಿಗೆ ಕೆಲಸವಿದೆ, ಅದಕ್ಕೆ ಹೋಗಿದ್ದಾರೆ. ಅವರಿಗೆ ಇಷ್ಟೊಂದು ಭಯವೇಕೆ?

(ಗೊಂದಲ)

ಅಧ್ಯಕ್ಷರು: ನೋಡಿ, ಅವರು ಕೇಳಿದ್ದಾರೆ, ನಾನು ಅನುಮತಿ ಕೊಟ್ಟಿದ್ದೇನೆ. ಅವರ ಪರವಾಗಿ ಸರ್ಕಾರದ ಇನ್ನೊಬ್ಬ ಮಂತ್ರಿಗಳು ಉತ್ತರ ಕೊಡುತ್ತಾರೆ. ತಾವು ತೆಗೆದುಕೊಳ್ಳಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೆ, ತಾವು ಆದೇಶ ಮಾಡಿ ಕರೆಸಬೇಕು. ಅವರು ಚುನಾವಣೆ ಕೆಲಸದಲ್ಲಿದ್ದಾರೆ, ಸರ್ಕಾರದ ಸಮಯವನ್ನು ದುರುಪಯೋಗ ಮಾಡುವ ಪ್ರಯತ್ನದಲ್ಲಿದ್ದಾರೆ. ಅವರನ್ನು ಕರೆಸಿ ಸದನದಲ್ಲಿರುವಂತೆ ಆದೇಶ ಮಾಡಿ.

(ಗೊಂದಲ)

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಅವರು ಅನುಮತಿ ಪಡೆದುಕೊಂಡು ಹೋಗಿದ್ದಾರೆ, ನೀವು ಏಕೆ ಭಯ ಪಡುತ್ತೀರಿ? ಉತ್ತರ ಕೊಡುತ್ತಾರೆ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಸೋಮವಾರ, ಮಂಗಳವಾರ ದಿನಾಂಕ 27 ಮತ್ತು 28ರಂದು ಅವರು ಇಲ್ಲೇ ಇರುವುದಕ್ಕೆ ನಾನು direction ಕೊಡುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸೋಮವಾರ, ಮಂಗಳವಾರ ಇಲ್ಲಿರುವುದಕ್ಕೆ ಆದೇಶ ಕೊಡುತ್ತೀರಾ?

(ಗೊಂದಲ)

ಅಧ್ಯಕ್ಷರು: ಹೌದು. ಇರಿ ಎಂದು ಹೇಳುತ್ತೇನೆ. ರವಿ, ಪ್ರಶ್ನೆ ಕೇಳುತ್ತೀರಾ?

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್: ಲೋಕೋಪಯೋಗಿ ಸಚಿವರು ಸದನಕ್ಕೂ ಉಪಯೋಗಿ ಯಾಗಬೇಕು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದನ್ನು ಕಾನೂನು ಸಚಿವರು ಹೇಗೆ ಒಪ್ಪಿಕೊಳ್ಳುವಿರಿ? ಸಂಸದ ಸಚಿವರಾಗಿ ಇದನ್ನು ಒಪ್ಪಿಕೊಳ್ಳುತ್ತೀರಿ ಎಂದರೆ ಹೇಗೆ? ಸಭಾಧ್ಯಕ್ಷರು ಇಲ್ಲಿ ಇಕ್ಕಟ್ಟಿನಲ್ಲಿದ್ದಾರೆ. ಪಾಪ, ನಾವು ಅವರನ್ನು ಇನ್ನೂ ಹೆಚ್ಚು embarrass ಮಾಡುವುದು ಸರಿಯಾಗುವುದಿಲ್ಲ. ನೀವೇ ಹೇಳಿ, ಇದು ಹೇಗೆ ಸರಿಯಾಗುತ್ತದೆ?

ಶ್ರೀ ಟಿ.ಬಿ.ಜಯಚಂದ್ರ: ನೀವಿಲ್ಲದ್ದ ಸಂದರ್ಭದಲ್ಲಿ ಸುರೇಶ್‌ಕುಮಾರ್ ಬಹಳಷ್ಟು ಜನ ಸಚಿವರನ್ನು ಇಂತಹ ಇಕ್ಕಟ್ಟಿಗೆ ಸಿಲುಕಿಸಿದ್ದಾರೆ. ಹಾಗೇ ಇದೂ ಒಂದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗಿನ ನಿಮ್ಮ ಪರಿಸ್ಥಿತಿ ನೋಡಿದ್ದರೆ ನಮಗೆ ಕಾಣುತ್ತದೆ. ತಾವಾದರೂ ಸರ್ಕಾರದ ಪರವಾಗಿ ಅವರು ಇವತ್ತು ಸಂಜೆಯೊಳಗೆ ಬರುವುದಕ್ಕೆ ಹೇಳಿ. ನಾವು ಅವರು ಯಾವ ಕಾರ್ಯದಲ್ಲಿದ್ದಾರೆ ಎನ್ನುವುದನ್ನು ನೋಡಿ ಹುಡುಕಿಸುತ್ತೇವೆ, ಅವರನ್ನು ಕರೆಸುತ್ತೇವೆ ಎಂದಾದರೂ ಹೇಳಿ. ಅವರನ್ನು ಪೊಲೀಸ್ ಇಲಾಖೆಗೆ ಹೇಳಿ, ಸಂಜೆಯೊಳಗೆ ಕರೆಸಿ.

(ಗೊಂದಲ)

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ನಿಮ್ಮ ಕಾಲದಲ್ಲೂ ಹಾಗೇ ಇತ್ತು ಬಿಡಿ. ಅವರೇನು ಕಳವಾಗಿಲ್ಲ, ಅವರು ಓಡಿ ಹೋಗಿಲ್ಲ.

(ಗೊಂದಲ)

ಅಧ್ಯಕ್ಷರು: Time waste ಮಾಡಬೇಡಿ, ಪ್ರಾರಂಭ ಮಾಡೋಣ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೆ, ಅವರನ್ನು ಕರೆಸುತ್ತೇವೆಂಬ ಭರವಸೆ ಹೇಳಿ.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್: ಅಧ್ಯಕ್ಷರೆ, ಅವರನ್ನು ಯಾರಾದರೂ ಕಿಡ್ನಾಪ್ ಮಾಡಿದ್ದಾರಾ? ಕರೆದುಕೊಂಡು ಹೋಗಿದ್ದಾರಾ? 24 ಗಂಟೆಯೊಳಗೆ ಹುಡುಕಿಕೊಡಿ ಎಂದು shall I file Habeas Corpus?

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಅಧ್ಯಕ್ಷರೆ, ಅವರು ಆ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅವರೆಲ್ಲೂ ಓಡಿ ಹೋಗಿಲ್ಲ. ಅನುಮತಿ ಪಡೆದು ಹೋಗಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ: ನಾವು ಹೇಳದೇ ಇರುವುದೆಲ್ಲಾ ಅವರು ಹೇಳುತ್ತಿದ್ದಾರೆ. ಯಾರದೋ ಜೊತೆ ಓಡಿ ಹೋಗುವ ವಯಸ್ಸು ಅವರದ್ದಲ್ಲ. ಖಂಡಿತ ಓಡಿ ಹೋಗಿಲ್ಲ. ಓಡಿ ಹೋಗುವ ವಯಸ್ಸು ಅವರದ್ದಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಎಲ್ಲಿದ್ದಾರೆ ಎನ್ನುವುದು ಬೇಕಲ್ಲವೇ?

(ಗೊಂದಲ)

ಅಧ್ಯಕ್ಷರು: ರವಿ ಇದರ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದೀರಿ ಸಾಕು ಇಲ್ಲಿಗೆ ನಿಲ್ಲಿಸಿ. ರವಿಯವರೆ, ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಅಧ್ಯಕ್ಷರೆ, ಪೊಲೀಸರಿಗೆ ಹುಡುಕಿ ಕೊಡಲು ಸಾಧ್ಯವಿಲ್ಲ, ಎಲ್ಲಾ ಪೊಲೀಸರೂ ಕಾಂಗ್ರೆಸ್ ಪಕ್ಷದ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಪೊಲೀಸರಿಗೆ ಸಮಯವಿಲ್ಲ. ದಯವಿಟ್ಟು ಬೇರೆ ಏಜೆನ್ಸಿ ಇದ್ದರೆ ಹುಡುಕಿ.

(ಗೊಂದಲ)

ಅಧ್ಯಕ್ಷರು: ಅದು ನಿಮಗೆ ಗೊತ್ತಿರಬೇಕು. ನನಗೆ ಗೊತ್ತಿಲ್ಲ. ಅವರು ಏನು ಮಾಡುತ್ತಾರೆ, ಎಲ್ಲೆಲ್ಲಿ ಹೋಗುತ್ತಾರೆ ನನಗಂತೂ ಗೊತ್ತಿಲ್ಲ.

(ಗೊಂದಲ)

ಶ್ರೀ ಸಿ.ಟಿ.ರವಿ: ಅಧ್ಯಕ್ಷರೆ, ನಿಮಗೆ ಮಾಹಿತಿ ಇಲ್ಲದಿದ್ದರೆ, ನಮ್ಮ ಮಾಧ್ಯಮ ಸ್ನೇಹಿತರು ಅವರು ಎಲ್ಲಿದ್ದಾರೆಂದು ಒಂದು ಸಾಕ್ಷ್ಯಚಿತ್ರಣ ಸಮೇತ ಅವರು ಏನು ಮಾಡುತ್ತಿದ್ದಾರೆ, ಎಲ್ಲಿದ್ದಾರೆಂದು ಇಲ್ಲಿ ಎಲ್ಲವನ್ನೂ ಹೇಳುತ್ತಾರೆ.

(ಗೊಂದಲ)



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು: ಇದು ಸದನಕ್ಕೆ ಸಂಬಂಧಪಟ್ಟ ವಿಷಯವಲ್ಲ. ಈಗ ನೀವು ಪ್ರಶ್ನೆ ಕೇಳುವಿರಾ?

(ಗೊಂದಲ)

ಶ್ರೀ ಅಶೋಕ್ ಎಂ. ಪಟ್ಟಣ್: ಅಧ್ಯಕ್ಷರೆ, time waste ಆಗುತ್ತದೆ. ಕೆಲಸಕ್ಕೆ ಬರುವ ಮಾತನಾಡದೇ ಸುಮ್ಮನೆ ಯಾವುದೋ ವಿಷಯ ಮಾತನಾಡುತ್ತಾರೆ. ಈಗ ಉತ್ತರ ರೆಡಿ ಇದೆ ತೆಗೆದುಕೊಳ್ಳಿ. ನಿಮ್ಮ ಸರ್ಕಾರ ಇದ್ದಾಗ ನೀವು ಹೀಗೆ ಹೋಗುತ್ತಿರಲಿಲ್ಲವೇ? ನೀವು ಬೇರೆ ಕಡೆ ಹೋಗಿ ರಲಿಲ್ಲವೇ?

(ಗೊಂದಲ)

ಅಧ್ಯಕ್ಷರು: ಈಗ ಉತ್ತರ ರೆಡಿ ಇದೆ ತೆಗೆದುಕೊಳ್ಳಿ. ನೋಡಿ ಅವರು ಎಲ್ಲಿದ್ದಾರೋ, ಏತಕ್ಕಾಗಿ ದ್ದಾರೋ, ಚುನಾವಣೆ ಮಾಡುತ್ತಾರೋ, ಬಿಡುತ್ತಾರೋ ಅದು ನನಗೆ ಸಂಬಂಧಪಟ್ಟ ವಿಷಯವಲ್ಲ. ನಿಮ್ಮ ಪ್ರಶ್ನೆ, ಅವರ ಉತ್ತರ, ಇವರೆಡನ್ನು ಬಿಟ್ಟರೆ ಬೇರೆ ಪ್ರಶ್ನೆ ನನಗೆ ಸಂಬಂಧವಿಲ್ಲ. ತಾವು ಪ್ರಶ್ನೆ ಕೇಳಿ ಅವರು ಉತ್ತರ ಕೊಡುತ್ತಾರೆ.

ಶ್ರೀ ಸಿ.ಟಿ.ರವಿ: ಅಧ್ಯಕ್ಷರೆ, ಅವರ ಗೈರು ಹಾಜರಿಯಲ್ಲಿ ನಾನು ಪ್ರಶ್ನೆಯನ್ನು ಕೇಳುವುದಿಲ್ಲ.

ಅಧ್ಯಕ್ಷರು: ಆಯಿತು, ಬಿಟ್ಟುಬಿಡಿ.

ಶ್ರೀ ಟಿ.ಬಿ.ಜಯಚಂದ್ರ: ಅಧ್ಯಕ್ಷರೆ, ಅವರ ಉತ್ತರವನ್ನು ಸಭೆಯ ಮುಂದೆ lay ಮಾಡುತ್ತೇವೆ.

ಅಧ್ಯಕ್ಷರು: O.K.

ಶ್ರೀ ಸಿ.ಟಿ.ರವಿ: ಅಧ್ಯಕ್ಷರೆ, ಅವರು ಹಾಜರಾದ ನಂತರ ಅವರ ಹತ್ತಿರ ನನಗೆ ಉತ್ತರವನ್ನು ಕೊಡಿಸಬೇಕು.

ಅಧ್ಯಕ್ಷರು: ಆಯಿತು. ಈಗ ಯಾವಗಲ್ ರವರೆ ಪ್ರಶ್ನೆಯನ್ನು ಕೇಳಿ.

ಶ್ರೀ ಬಿ.ಆರ್.ಯಾವಗಲ್: ಅಧ್ಯಕ್ಷರೆ 1740ನೇ ಪ್ರಶ್ನೆಯನ್ನು ನಾನು ಮಾನ್ಯ ಇಂಧನ ಸಚಿವರನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು: ಇಂಧನ ಸಚಿವರ ಪರವಾಗಿ ಯಾರು ಉತ್ತರ ಕೊಡುತ್ತೀರಿ?

ಶ್ರೀ ಸಿ.ಟಿ.ರವಿ: wholesale contract ಅನ್ನು ನೀವು ಜಯಚಂದ್ರರವರಿಗೊಬ್ಬರಿಗೆ ಕೊಟ್ಟರೆ ಹೇಗೆ ಸಾಧ್ಯವಾಗುತ್ತದೆ ಹೇಳಿ?



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ರವಿಯವರೆ, ಅವರಿಗೆ capacity ಇದೆ. ಕೊಡುತ್ತಾರೆ ಬಿಡಿ.

ಶ್ರೀ ಟಿ.ಬಿ.ಜಯಚಂದ್ರ: ಇಂಧನ ಸಚಿವರು ಮುಖ್ಯಮಂತ್ರಿಯವರ ಹತ್ತಿರ ಇದ್ದಾರೆ ಬರುತ್ತಾರೆ.

ಅಧ್ಯಕ್ಷರು: O.K. ಇದನ್ನು ಆನಂತರ ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಅಧ್ಯಕ್ಷರೆ, ಇಲ್ಲಿನ ಪರಿಸ್ಥಿತಿ ನೋಡಿರಿ, ಇಲ್ಲಿ ಜಯಚಂದ್ರ ಅಲ್ಲಿ ಭೈರೇಗೌಡರು, ಖಾದರ್, ಪರಿಸ್ಥಿತಿ ನೋಡಿದರೆ, ಹಿಂದೆ ಎಲ್ಲಾ ಖುರ್ಚಿ ಖಾಲಿ ಇವೆ. ಸರ್ಕಾರ ಸತ್ತು ಹೋಗಿದೆ. ಅಲ್ಲಿ ಒಬ್ಬರು Chief Whip, ಇಲ್ಲಿ ಜಯಚಂದ್ರರವರು ಮುಗಿದು ಹೋಯಿತು. ಖಾಲಿ, ಖಾಲಿ.

(ಗೊಂದಲ)

ಶ್ರೀ ಎಸ್.ಎನ್.ನಾರಾಯಣಸ್ವಾಮಿ : ಸರ್ಕಾರ ಸತ್ತು ಹೋಗಿಲ್ಲ, ಬದುಕಿದೆ.

(ಗೊಂದಲ)

ಶ್ರೀ ಅಶೋಕ್ ಮ. ಪಟ್ಟಣ: ಇನ್ನು ಐದು ನಿಮಿಷದಲ್ಲಿ ಇಂಧನ ಸಚಿವರು ಬರುತ್ತಾರೆ.

ಶ್ರೀ ಸಿ.ಟಿ.ರವಿ: ಸದನದ ಗೌರವ ಉಳಿಯಬೇಕು. ಹೀಗಾದರೆ ಹೇಗೆ?

ಅಧ್ಯಕ್ಷರು: ಈಗ ಅಂಗಾರರವರು ಇದ್ದರೆ 2304ನೇ ಪ್ರಶ್ನೆಯನ್ನು ಕೇಳಿ.

ಶ್ರೀ ಎಸ್.ಅಂಗಾರ: ಅಧ್ಯಕ್ಷರೆ ಸಂಬಂಧಪಟ್ಟ ಸಚಿವರು ಇಲ್ಲ. ಯಾರು ಉತ್ತರ ಹೇಳುತ್ತಾರೆ?

ಅಧ್ಯಕ್ಷರು: ಕಾನೂನು ಸಚಿವರು ಉತ್ತರ ಹೇಳುತ್ತಾರೆ.

ಶ್ರೀ ವೈ.ಎಸ್.ವಿ.ದತ್ತಾ: ಅಧ್ಯಕ್ಷರೆ, ಈ ಪ್ರಶ್ನೋತ್ತರವನ್ನು ಇಷ್ಟೊಂದು ಅಣಕು ಕಾರ್ಯಕ್ರಮವನ್ನಾಗಿ ಮಾಡುವುದು ಬೇಡ. ಬೇರೆ ಯೋಚಿಸಿ. ಏಕೆಂದರೆ, ಕೇಳುವ ಪ್ರಶ್ನೆಗಳಿಗೆ ಉತ್ತರ ಹೇಳುವವರು ಇಲ್ಲವೆಂದರೆ ಇದೊಂದು ಅಣಕು ಕಾರ್ಯಕ್ರಮವಾಗುತ್ತದೆ. ಅಣಕು Assembly ಮಾಡುತ್ತಾರಲ್ಲಾ ಹಾಗೆ ಆಗುತ್ತದೆ. ದಯವಿಟ್ಟು, ಈ ಸದನಕ್ಕೆ ಒಂದು ಗಂಭೀರತೆ ಇದೆ, ಗಾಂಭೀರ್ಯವಿದೆ. ದಯವಿಟ್ಟು ಈ ಪ್ರಶ್ನೋತ್ತರವನ್ನು ಇಂದು ಮಾಡಬೇಡಿ. ಅವರೆಲ್ಲಾ ಪಾಪ ಉಪ ಚುನಾವಣೆ ಮುಗಿಸಿಕೊಂಡೇ ಬರಲಿ.

ಅಧ್ಯಕ್ಷರು: ನಿಮ್ಮ ಇಚ್ಛೆಯಂತೆಯೇ ನನಗೂ ಇಚ್ಛೆಯಿದೆ. ಆದರೆ, ಸರ್ಕಾರದವರು ಇರುವುದು, ಬಿಡುವುದು ನೋಡಿ. ನಾನು ಎಷ್ಟೋ ಸಾರಿ ಹೇಳಿದ್ದೇನೆ, ಓದಿದ್ದೇನೆ.

ಶ್ರೀ ವೈ.ಎಸ್.ವಿ.ದತ್ತಾ: ದಯವಿಟ್ಟು ಬೇಡ. ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಅಧ್ಯಕ್ಷರೆ, ಅನಿವಾರ್ಯ ಆದ ಸಂದರ್ಭದಲ್ಲಿ ಈ ಸಂಪ್ರದಾಯವಿದೆ. ಯಾವುದೇ ಸರ್ಕಾರವಿದ್ದರೂ ನಡೆದುಕೊಂಡು ಬಂದಿದೆ. ಇದೇನು ಹೊಸದಲ್ಲ. ಈಗ ನಿಮಗೆ ಬೇಕಾಗಿರುವುದು ಸರ್ಕಾರದ ಪರವಾಗಿ ಉತ್ತರ.

ಶ್ರೀ ವೈ.ಎಸ್.ವಿ.ದತ್ತಾ: ಜಯಚಂದ್ರರವರೆ, ನಾವು ಖಂಡಿತ ಸರ್ಕಾರವನ್ನೂ ದೂಷಿಸುತ್ತಿಲ್ಲ, ನಿಮ್ಮನ್ನೂ ದೂಷಿಸುತ್ತಿಲ್ಲ. ನಿಮ್ಮ ಅನಿವಾರ್ಯತೆ, ನಿಮ್ಮ ತುರ್ತು ನಮಗೆ ಅರ್ಥವಾಗುತ್ತದೆ. ನಿಮಗೆ ಕಣ್ಣು ಎಲ್ಲಿದೆಯೆಂದು ನಮಗೆ ಗೊತ್ತಿದೆ. ಆದರೆ, ನಾವು ಹೇಳುವುದು ಇಷ್ಟೆತ್ತು ಬೇಡ.

ಶ್ರೀ ಸಿ.ಟಿ.ರವಿ: ಉಪಚುನಾವಣೆಯ ನಂತರ ಏನು ಬೇಕಾದರೂ ಆಗಬಹುದು, ಅದೂ ಅರ್ಥವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೆ, ಈ ಸದನಕ್ಕಿಂತಲೂ ಚುನಾವಣೆ ಮುಖ್ಯ ಎನ್ನುವುದನ್ನು ಆಡಳಿತ ಪಕ್ಷದವರು ಸಂದೇಶ ಕೊಡುತ್ತಿದ್ದಾರೆ. ಇದು ಸರಿಯಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಸದನಕ್ಕೆ ಇರಬೇಕಾದ ಪ್ರಾಮುಖ್ಯತೆ, ಮಹತ್ವ ಇಲ್ಲ. ನೀವು ಉಪಚುನಾವಣೆಯ ಸಂದೇಶ ಕಳುಹಿಸಿದರೆ ನಾವು ಹೇಗೆ ಒಪ್ಪಿಕೊಳ್ಳುವುದಕ್ಕೆ ಆಗುತ್ತದೆ?

ಶ್ರೀ ಹೆಚ್.ಡಿ.ರೇವಣ್ಣ: ಅಧ್ಯಕ್ಷರೆ, ಅರ್ಧಗಂಟೆಯಿಂದ ಹೀಗೇ ಆಗುತ್ತಿದೆ. ಇನ್ನೂ question hour ಇದೆ. ನಮ್ಮದು Zero hour important ಇದೆ. ದಯಮಾಡಿ ತಾವು ಸರಿಯಾಗಿ ನಡೆಸಲು ಹೇಳಿ.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು: ಆಯಿತು. ಈಗ ಏನು ಮಾಡುವುದಕ್ಕಾಗುತ್ತದೆ ಹೇಳಿ. ಅಂಗಾರರವರೆ, ನಿಮ್ಮ ಪ್ರಶ್ನೆಗೆ ಉತ್ತರ ಬೇಕೋ ಬೇಡವೋ?

ಶ್ರೀ ಎಸ್.ಅಂಗಾರ: ಸೋಮವಾರ ಸಚಿವರು ಬಂದರೆ, ಆಗ ಉತ್ತರ ಕೊಡಿಸಿ.

ಅಧ್ಯಕ್ಷರು: ನೋಡೋಣ. ಈಗ withhold ಮಾಡುತ್ತೇನೆ. ಈಗ ಬಸವರಾಜ ಬೊಮ್ಮಾಯಿರವರೇ ಪ್ರಶ್ನೆ ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಸುದೈವದಿಂದ ನಮ್ಮ ಸಚಿವರು ಇದ್ದಾರೆ.

ಪ್ರಶ್ನೆ ಸಂಖ್ಯೆ: 160(808)

ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಶೇ.30 ರಷ್ಟು ಜನ ಸಂಖ್ಯೆ ನಗರದಲ್ಲಿರುವುದರಿಂದ ಈ ಪ್ರಶ್ನೆಗೆ ಮಹತ್ವ ಬಂದಿದೆಯೆಂದೂ ಹಾಗೂ ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿದೆಯೆಂದು ನನ್ನ ಆಸೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಇದರಲ್ಲಿ ಎರಡನೇ ಪ್ರಶ್ನೆಗೆ ಏನು ಉತ್ತರ ಕೊಟ್ಟಿದ್ದಾರೆ, ಈ ಉತ್ತರದಲ್ಲಿ ಮೊದಲನೇ ನಗರೋತ್ಥಾನ, ಎರಡನೇ ನಗರೋತ್ಥಾನದ ಯೋಜನೆಗಳು ಇನ್ನೂ ಕೆಲವು ಸಣ್ಣಪುಟ್ಟ ಕೆಲಸಗಳು ಬಾಕಿಯಿವೆ ಎಂದು ಬಹಳ ಸ್ಪಷ್ಟವಾಗಿ ತಿಳಿಯುತ್ತದೆ. ಸಂಪೂರ್ಣವಾಗಿ ಹಣ ಖರ್ಚಾಗಿಲ್ಲ. ಅದನ್ನು ಎಂದು ಸಂಪೂರ್ಣವಾಗಿ ವಿಶೇಷವಾಗಿ ನಗರೋತ್ಥಾನ ಕಾಮಗಾರಿಯನ್ನು ಪೂರ್ಣ ಮಾಡುವಿರಿ? ಏಕೆಂದರೆ, ಅಧ್ಯಕ್ಷರೆ ತಮ್ಮ ಕ್ಷೇತ್ರದಲ್ಲೂ ಗೊತ್ತಿದೆ, ನಿಮ್ಮಲ್ಲಿ 15.00 ಕೋಟಿ ರೂಪಾಯಿ ಖರ್ಚಾಗಿಲ್ಲ, 13.00 ಕೋಟಿ ಖರ್ಚಾಗಿದೆ. ನಮ್ಮ ಕ್ಷೇತ್ರದಲ್ಲೂ ಒಟ್ಟು 15.00 ಕೋಟಿ ರೂಪಾಯಿಯಲ್ಲಿ ಇನ್ನೂ 2.00 ಕೋಟಿ ರೂಪಾಯಿ ಖರ್ಚಾಗಬೇಕಾಗಿದೆ. ಹೀಗಾಗಿ, 2012-13ರಿಂದ ನಡೆಯುತ್ತಿರುವ ಕಾಮಗಾರಿಗಳು 2016-17 ಮುಗಿದರೂ ಆಗುತ್ತಿಲ್ಲವೆಂದರೆ ಯಾವ ಕಾಲಮಿತಿಯಲ್ಲಿ ಆಗಬೇಕಾಗಿತ್ತೋ ಅದರಲ್ಲಿ ಆಗಿಲ್ಲ. ಕಾಲಮಿತಿ



ತಿದ್ದುಪಡಿಯಾಗದ Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

double ಆದರೂ ಸಹ ಆಗುವುದಿಲ್ಲವೆಂದರೆ ಯಾವರೀತಿ ಕೆಲಸಗಳು ನಡೆಯುತ್ತವೆ? ಇದು ಒಂದನೇ ಪ್ರಶ್ನೆ. ಎರಡನೆಯದಾಗಿ SFC grant, SFC United release for the year ಇದನ್ನು ನೋಡಿದಾಗ ಪ್ರತಿ ವರ್ಷವೂ ಇದು ಕಡಿಮೆಯಾಗಿದೆ. Releases ಸಹ ಬಹಳಷ್ಟು ಕಡಿಮೆಯಾಗಿದೆ. ಉದಾಹರಣೆಗೆ ನಮ್ಮ ಜಿಲ್ಲೆಯನ್ನೇ ತೆಗೆದುಕೊಳ್ಳಿ.

ಅಧ್ಯಕ್ಷರು: ಬಜೆಟ್‌ನಲ್ಲಿ ಎಲ್ಲವನ್ನೂ ಮಾತನಾಡಿ, ಈಗ ಪ್ರಶ್ನೆ ಕೇಳಿ.

(ಮುಂದುವರೆದಿದೆ)

24-03-2017/11-30/07/HRV/VR

ಶಿಗ್ಗಾಂವ್‌ಗೆ 24 ಲಕ್ಷ ರೂಪಾಯಿ ಬಿಡುಗಡೆಯಾಗಿದೆ, ತಮಗೂ ಕೂಡ ಬಹಳ ಕಡಿಮೇಯಾಗಿದೆ, ನಾವು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹೀಗೆ ಬಿಡುಗಡೆ ಕಡಿಮೆಯಾಗಿದ್ದು ಈ ವರ್ಷ ಈಗಾಗಲೇ ಮುಗಿಯಿತು, ನಾವು ಈಗ ಮಾರ್ಚ್ ಅಂತ್ಯದಲ್ಲಿದ್ದೇವೆ. ಯಾವಾಗ ಬಿಡುಗಡೆ ಮಾಡುತ್ತೀರಿ. ಈ ರೀತಿಯಾದರೆ ಕಾಮಗಾರಿಗಳು ಆಯಾಯ ವರ್ಷದಲ್ಲಿಯೇ ಮುಗಿಯದಿದ್ದರೆ ಮುಂದೆ ರೇಟ್ ಹೆಚ್ಚಾದಾಗ ಅದಕ್ಕೆ ಮತ್ತೆ ಅನುದಾನವನ್ನು ತಾವು ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವೇ, ಏಕೆ ಈ ರೀತಿಯ ತಡ, ಯಾರು ಕಾರಣರು, ಏನು ಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳುತ್ತೀರಿ ಎನ್ನುವ ಪ್ರಶ್ನೆಯನ್ನು ನಾನು ಕೇಳಬಯಸುತ್ತೇನೆ. ಎರಡನೆಯದಾಗಿ ಈ Finance Commission grants ಏನಿದೆ ಇದು ಪ್ರತಿ ವರ್ಷ ಕಡಿಮೆಯಾಗುತ್ತಾ ಬಂದಿದೆ. ಬೇರೆ ಬೇರೆ ಮಾನದಂಡಗಳನ್ನು ಇಟ್ಟುಕೊಂಡು ಅವುಗಳು ಕಡಿಮೆಯಾಗುತ್ತಿವೆ. ಈಗ ಹೆಚ್ಚಿಗೆ ಆಗಬೇಕು. ಅಲ್ಲಿರುವಂಥ ಅವಶ್ಯಕತೆಗಳಿಗನುಗುಣವಾಗಿ ತಾವು grant ಅನ್ನು ಕೊಡುವುದಕ್ಕೆ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ. ಆ ವಿವರಗಳನ್ನು ಬೇಕಾದರೆ ಈಗ ಹೇಳಿ ಎಂದರೆ ಹೇಳುತ್ತೇನೆ. ಸಭಾಧ್ಯಕ್ಷರು ಬಹಳ ಅವಸರದಲ್ಲಿದ್ದಾರೆ. ನೋಡಿ basic grant 84 ಲಕ್ಷ ರೂ. ಇದ್ದದ್ದು ಸವಣೂರಿಗೆ 77 ಇದ್ದದ್ದು ಅದು 59 ಆಯಿತು, 38 ಆಯಿತು. ಈ ತರಹ , ,

ಅಧ್ಯಕ್ಷರು:-ಏಕೆ ಕಡಿಮೆಯಾಗುತ್ತಿದೆ ಎನ್ನುವುದಕ್ಕೆ ಉತ್ತರ ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ:-Grants ಕಡಿಮೆಯಾಗುತ್ತಿದೆ ಮತ್ತು ಇದ್ದ grant ಉಪಯೋಗವಾಗುತ್ತಿಲ್ಲ, release ಆಗುತ್ತಿಲ್ಲ, ಕೆಲಸವಾಗುತ್ತಿಲ್ಲ.

ಶ್ರೀ ಈಶ್ವರ ಬಿ. ಖಂಡ್ರೆ:-ಮಾನ್ಯ ಅಧ್ಯಕ್ಷರೆ, ನಗರೋತ್ಥಾನ - 1 ಈಗಾಗಲೇ ಪೂರ್ತಿಯಾಗಿದೆ. ಅದು close ಮಾಡಿದ್ದೇವೆ. ನಗರೋತ್ಥಾನ - 2 ಮಾರ್ಚ್ 31 2017 ಕ್ಕೆ ಪೂರ್ತಿಯಾಗಬೇಕಾಗಿತ್ತು. ಕೆಲವೊಂದು ಕಾಮಗಾರಿಗಳು ಯಾವ ಯಾವ ಪಟ್ಟಣಗಳಲ್ಲಿ ಒಳಚರಂಡಿ ಯೋಜನೆ ಕಾಮಗಾರಿಗಳು ನಡೆಯುತ್ತಿವೆ, ಯಾವ ಪಟ್ಟಣಗಳಲ್ಲಿ ನಿರಂತರ ಕುಡಿಯುವ ನೀರಿನ ಯೋಜನೆ ನಡೆಯುತ್ತಿದೆಯೋ ಅಂಥ ಒಂದು ಪಟ್ಟಣಗಳಲ್ಲಿ ನಗರೋತ್ಥಾನ - 2 ನೇ ಹಂತದ ಯೋಜನೆಯಡಿಯಲ್ಲಿ ಏನೊಂದು ಕ್ರಿಯಾ ಯೋಜನೆಯನ್ನು ತಯಾರು ಮಾಡಿದ್ದರೋ ಆ ಒಂದು ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೇ ಇದ್ದ ಕಾರಣ ಅದು ವಿಳಂಬವಾಗಿದೆ. ಕೆಲವೊಂದು ನ್ಯೂನತೆಗಳು ಕೂಡ ನಗರೋತ್ಥಾನ- 2 ರಲ್ಲಿತ್ತು. ಒಂದೇ ಒಂದು ಪ್ಯಾಕೇಜ್ ಜಿಲ್ಲೆಗೆ ಒಂದು ಮಾಡಿದಂಥದ್ದು ಇತ್ತು, ಇದರ ಜೊತೆಯಲ್ಲಿ ಇವತ್ತು ಪಿ.ಎಂ.ಸಿ. ಗಳು ಒಳ್ಳೆಯ ರೀತಿಯಿಂದ ಕಾರ್ಯ ನಿರ್ವಹಿಸದೇ ಇದ್ದಂಥದ್ದು ಕೂಡ ನಮ್ಮ ಗಮನಕ್ಕೆ ಬಂದು ನಗರೋತ್ಥಾನ - 3 ರಲ್ಲಿ ಸಾಕಷ್ಟು ಬದಲಾವಣೆಯನ್ನು ನಾವು ತಂದಿದ್ದೇವೆ. ಬರುವ ಮೂರು ತಿಂಗಳೊಳಗಾಗಿ ಈಗೇನು 80 ಪ್ರತಿಶತ ನಗರೋತ್ಥಾನ - 2 ನೇ ಕಾಮಗಾರಿ ಮುಗಿದಿದೆ ಆ ಪ್ರತಿಶತ 80 ಇದ್ದದ್ದು ಬರುವ ಮೂರು ತಿಂಗಳೊಳಗಾಗಿ ಸಂಪೂರ್ಣ ನೂರಕ್ಕೆ ನೂರು ಪ್ರತಿಶತ ನಗರೋತ್ಥಾನ - 2 ಕಾಮಗಾರಿ ಪೂರ್ತಿ ಮಾಡಿ ನಗರೋತ್ಥಾನ - 3 ನೇ ಕಾಮಗಾರಿ ಇವತ್ತು ಅದಕ್ಕೆ ಚಾಲನೆ ಕೊಡುವಂಥ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ ನಗರದ ಜನಸಂಖ್ಯೆ ದಿನೇ ದಿನೇ ಹೆಚ್ಚಿಗೆ ಆಗುತ್ತಿದೆ. 38% ಇದ್ದದ್ದು ಈಗ 40% ಗೆ ಬಂದಿದೆ. ಹೀಗಾಗಿ ನಗರಕ್ಕೆ ಮತ್ತೆ ಸುಮಾರು ಅನೇಕ 57 ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಯಾಗಿ, ಪಟ್ಟಣ ಪಂಚಾಯತಿಗಳನ್ನು ಪುರಸಭೆಗಳಾಗಿ ಮೇಲ್ದರ್ಜೆಗೇರಿಸಿದ್ದೇವೆ. ಇವತ್ತೇನು SFC ಅನುದಾನ ಪ್ರತಿ ವರ್ಷ ವರ್ಷ ಕಡಿಮೆಯಾಗುತ್ತಿದೆ ಎನ್ನುವಂಥ ವಿಚಾರವನ್ನೇನು ಹೇಳಿದ್ದಾರೆ ಅದರಲ್ಲಿ ವಿಶೇಷವಾಗಿ ಕರ್ನಾಟಕ ರಾಜದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳೇನಿವೆ, ಅಮೃತ್ ಯೋಜನೆಯಿದೆ, ಸ್ಮಾರ್ಟ್ ಸಿಟಿ ಯೋಜನೆಯಿದೆ, ಸ್ವಚ್ಛ ಭಾರತ್ ಮಿಷನ್ ಯೋಜನೆಯಿದೆ, ಈ ಎಲ್ಲಾ ಯೋಜನೆಗಳಿಗೆ ನಗರೋತ್ಥಾನ - 3 ನೇ ಹಂತದ ಯೋಜನೆಗೆ 1800 ಕೋಟಿ ರೂ.ಗಳ

ಯೋಜನೆಯಿದ್ದಂಥದ್ದು ಸರ್ಕಾರ 2886 ಕೋಟಿ ರೂ.ಗಳಿಗೆ ಹೆಚ್ಚಿಗೆ ಮಾಡಿ ಆ ಯೋಜನೆಗೆ ಅನುಮೋದನೆಯನ್ನು ಕೂಡ ಕೊಟ್ಟಿದೆ. ಬೇರೆ ಬೇರೆ ಯೋಜನೆಗಳಿಗೆ ಹೆಚ್ಚಿನ ಅನುದಾನವನ್ನು ಕೊಡುವಂಥ ಸಂದರ್ಭದಲ್ಲಿ ಇವತ್ತು ಏನು ನಮ್ಮ SFC ಅನುದಾನ basic grant ಅನುದಾನ ಸ್ವಲ್ಪ ಮಟ್ಟಿಗೆ ಏನು ಅಷ್ಟಕ್ಕೇ ಉಳಿದಿದೆ ಎನ್ನುವಂಥದ್ದು ನಿಜವಾಗಿದೆ. ನಮ್ಮ Finance commission ಪ್ರಕಾರ ಹೆಚ್ಚಿನ ಅನುದಾನವನ್ನು ಆರ್ಥಿಕ ಇಲಾಖೆಯಿಂದ ಬಿಡುಗಡೆ ಮಾಡಿಸಿಕೊಳ್ಳುವುದಕ್ಕೆ ಮತ್ತು ಹೆಚ್ಚಿನ ಅನುದಾನವನ್ನು ತೆಗೆದುಕೊಂಡು ವೇಗದ ಗತಿಯಲ್ಲಿ ಎಲ್ಲಾ ಪಟ್ಟಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕೊಟ್ಟು ಅಭಿವೃದ್ಧಿ ಮಾಡುವಂಥ ನಿಟ್ಟಿನಲ್ಲಿ ತಯಾರಿ ನಡೆಯುತ್ತಿದೆ ಎನ್ನುವಂಥ ಮಾತನ್ನು ಮಾನ್ಯ ಸದಸ್ಯರ ಮತ್ತು ಈ ಸದನದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:-ಮಾನ್ಯ ಸಚಿವರೆ, ಈ SFC grant ಏನಿದೆ ಈ ವಿಶೇಷ ಅನುದಾನವನ್ನು ತಾವೇನು ಕೊಟ್ಟಿದ್ದೀರಿ, ಅದರಲ್ಲಿ ಕೆಲವು ಪುರಸಭೆಗಳು ಬಿಟ್ಟುಹೋಗಿವೆ. ಹಾವೇರಿ ಜಿಲ್ಲೆಯಲ್ಲಿ ಒಂದೇ ಪುರಸಭೆಗೆ ಕೊಟ್ಟಿದ್ದೀರಿ. ನೀವು ಬ್ಯಾಡಗಿ ಪುರಸಭೆಗೆ 20 ಕೋಟಿ ರೂ.ಗಳನ್ನು ವಿಶೇಷ ಅನುದಾನವಾಗಿ ಕೊಟ್ಟಿದ್ದೀರಿ. ವಿಶೇಷ SFC, ಆದರೆ ಅಲ್ಲಿ ಶಿಗ್ಗಾಂವ್ ಇದೆ, ಸವಣೂರಿದೆ, ಬಂಕಾಪುರವಿದೆ, ಹಿರೇಕೆರೂರಿದೆ, ಹಾವೇರಿಯಿದೆ, ರಾಣೆಬೆನ್ನೂರಿದೆ, ಅವು ಯಾವುದಕ್ಕೂ ಕೂಡ ತಾವು ಅನುದಾನವನ್ನು ಕೊಟ್ಟಿಲ್ಲ. ಏಕೆ ಈ ರೀತಿಯ ತಾರತಮ್ಯ ಮತ್ತು ಈ ತಾರತಮ್ಯವನ್ನು ಸರಿಪಡಿಸುತ್ತೀರೋ ಇಲ್ಲವೋ ಎಂಬ ಬಗ್ಗೆ ಹೇಳಬೇಕು.

ಶ್ರೀ ಈಶ್ವರ ಬಿ. ಖಂಡ್ರೆ:-ಮಾನ್ಯ ಅಧ್ಯಕ್ಷರೆ, ಎಲ್ಲೆಲ್ಲಿ ಬೇಡಿಕೆಯಿದೆಯೋ ಆ ಬೇಡಿಕೆಗನು ಗುಣವಾಗಿ ವಿಶೇಷ SFC ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಗೌರವಾನ್ವಿತ ಸದಸ್ಯರು ಇದಕ್ಕೆ ಇನ್ನು ಯಾವ ಕ್ಷೇತ್ರದಲ್ಲಿ ಎಲ್ಲಿ ಸಮಸ್ಯೆಗಳಿವೆ, ಯಾವುದಾದರೂ ಹಿಂದುಳಿದಂಥ ಕ್ಷೇತ್ರವಿದ್ದರೆ ಅಂಥದ್ದಕ್ಕೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಅನುದಾನದ ಲಭ್ಯತೆಗನುಗುಣವಾಗಿ ಪರಿಗಣನೆ ಕೂಡ ಲಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ:-ಮಾನ್ಯ ಸಚಿವರೆ ಇದರಲ್ಲಿ ತಾರತಮ್ಯ ಮಾಡುತ್ತಿದ್ದೀರಿ, ಡಾ: ನಂಜುಂಡಪ್ಪ ವರದಿಯಲ್ಲಿ ಹೇಳಿರುವ ಹಿಂದುಳಿದಿರುವ ತಾಲ್ಲೂಕುಗಳಿಗೆ ಕೊಟ್ಟಿಲ್ಲ.

ಅಧ್ಯಕ್ಷರು:-ಮಾನ್ಯ ಸಚಿವರೆ ತಾರತಮ್ಯವಿದ್ದರೆ ಸರಿಪಡಿಸಿ.

ಶ್ರೀ ಈಶ್ವರ ಬಿ. ಖಂಡ್ರೆ:-ಮಾನ್ಯ ಅಧ್ಯಕ್ಷರೆ, ಯಾವುದೇ ತಾರತಮ್ಯವಿಲ್ಲ. ಅಂಥದ್ದೇನಾದರೂ ಇದ್ದರೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅದನ್ನು ಸರಿಪಡಿಸುವ ವ್ಯವಸ್ಥೆ ಮಾಡಲಾಗುವುದು. ಹಿಂದೆ ಆಯವ್ಯಯದಲ್ಲಿ ಹಾವೇರಿಗೆ ಮತ್ತು ಚಾಮರಾಜನಗರಕ್ಕೆ ಸುಮಾರು ಐವತ್ತು ಐವತ್ತು ಕೋಟಿ ರೂ.ಗಳನ್ನು ವಿಶೇಷ ಅನುದಾನವೆಂದು ಹೇಳಿ ಬಿಡುಗಡೆ ಮಾಡಲಾಗಿತ್ತು. ಅದೇ ಒಂದು ರೀತಿಯಲ್ಲಿ ಎಲ್ಲೆಲ್ಲಿ ಬೇಡಿಕೆಯಿದ್ದಂಥ ಒಂದು ಪರಿಸ್ಥಿತಿಯಲ್ಲಿ ಅನುದಾನದ ಲಭ್ಯತೆಗನುಗುಣವಾಗಿ ಸರಿಪಡಿಸುವಂಥ ಕೆಲಸವನ್ನು ಮಾಡಲಾಗುವುದು.

ಶ್ರೀ ಬಸವರಾಜ ಬೊಮ್ಮಾಯಿ:-ನಮಗೆ ಎರಡು ಕೋಟಿ ರೂ.ಗಳನ್ನು ಕೊಟ್ಟರೆ ಸಾಕು. ಅದನ್ನು ಕೂಡ ಕೊಟ್ಟಿಲ್ಲ. ಮಾನ್ಯ ಸಚಿವರೆ ತಾರತಮ್ಯ ಸರಿಪಡಿಸುತ್ತೇವೆ ಎಂದು ಹೇಳಿ ಸ್ವಾಮಿ. ಮಂತ್ರಿಗಳಾಗಿರುವ ನಿಮಗೆ ಅಧಿಕಾರವಿದೆ. ನಂಜುಂಡಪ್ಪ ವರದಿಯಲ್ಲಿರುವ ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚಿನ ಅನುದಾನವನ್ನು ಕೊಡುತ್ತೇವೆಂದು ತಾವು ಹೇಳಿ. ತಾವು ಸಚಿವರಾಗಿದ್ದೀರಿ, ನಿಮ್ಮ ಅಧಿಕಾರವನ್ನು ಬಳಕೆ ಮಾಡಿ discretion ಬಳಕೆ ಮಾಡಿ ತಾರತಮ್ಯವನ್ನು ಸರಿಪಡಿಸಿ. ಖಂಡ್ರೆಯವರೆ ನೀವು ಹಿಂದುಳಿದ ಪ್ರದೇಶದಿಂದ ಬಂದಿದವರಾಗಿದ್ದರೂ ನೀವು ಈ ರೀತಿ ಮಾಡಿದರೆ ಹೇಗೆ ಸ್ವಾಮಿ. ತಾವು ಎದ್ದು ನಿಂತು ಹೇಳಿಬಿಡಿ.

ಅಧ್ಯಕ್ಷರು:-ಮಾನ್ಯ ಸಚಿವರೆ, ಸರಿಪಡಿಸುವ ಪ್ರಯತ್ನವನ್ನು ಮಾಡಿ.

ಶ್ರೀ ಈಶ್ವರ ಬಿ. ಖಂಡ್ರೆ:-ಎಲ್ಲೆಲ್ಲಿ ಬೇಡಿಕೆಯಿದೆ,,

ಶ್ರೀ ಬಸವರಾಜ ಬೊಮ್ಮಾಯಿ:-ಬೇಡಿಕೆಯಲ್ಲ, ಅವಶ್ಯಕತೆಯಿದೆ.

ಶ್ರೀ ಈಶ್ವರ ಬಿ. ಖಂಡ್ರೆ:-ಅವಶ್ಯಕತೆಯಿದ್ದಂಥ ಕಡೆ ಎಲ್ಲಾದರೂ ಆ ತರಹ ತಾರತಮ್ಯವಾಗಿದ್ದರೆ ಅದನ್ನು ಸರಿಪಡಿಸುವಂಥ ಕೆಲಸವನ್ನು ಮಾಡುತ್ತೇವೆ.

**( ಗೊಂದಲ )**

ಅಧ್ಯಕ್ಷರು:-ಎಲ್ಲರೂ ಒಟ್ಟಿಗೆ ಮಾತನಾಡಬೇಡಿ. ಒಬ್ಬೊಬ್ಬರೇ ಹೇಳಿ.

ಡಾ: ಎಸ್. ಶಿವರಾಜ್ ಪಾಟೀಲ್(ರಾಯಚೂರು):-ಮಾನ್ಯ ಅಧ್ಯಕ್ಷರೆ, ನಗರೋತ್ಥಾನದಡಿಯಲ್ಲಿ 35 ಕೋಟಿ release ಆಗಿತ್ತು. ಆದರೆ ಅಮೃತ್ ಮತ್ತು NKDFC ಯಡಿಯಲ್ಲಿ ಆ ಎಲ್ಲಾ ಮೊತ್ತ ಕಟ್ ಆಗಿಬಿಟ್ಟಿದೆ. ಈಗ ರಾಯಚೂರಿಗೆ ನಗರೋತ್ಥಾನ 3 ರಲ್ಲಿ ಒಂದು ರೂಪಾಯಿಯನ್ನು ಕೊಟ್ಟಿಲ್ಲ.



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಾವು ಸಚಿವರಿಗೆ ಕೇಳುವುದೇನೆಂದರೆ ನಗರೋತ್ಥಾನ 3 ರಲ್ಲಿ ರಾಯಚೂರಿಗೆ ಅನುದಾನ ಕೊಡಬೇಕು. ಏಕೆಂದರೆ ಅಮೃತ್ ಯೋಜನೆ ಇನ್ನು ಚಾಲನೆಯಾಗಿಲ್ಲ. NKDFC ಯದ್ದು ಇನ್ನೂ ಮುಗಿದಿಲ್ಲ. 35 ಕೋಟಿ ರೂ.ಗಳನ್ನು ಕಟ್ ಮಾಡಿದ್ದಾರೆ. ಅದು ಆಗಲಿಲ್ಲವೆಂದರೆ atleast ಸಚಿವರು HKRDB 1500 ಕೋಟಿ ಕೊಟ್ಟಿದೆಯಲ್ಲಾ ಅಲ್ಲಿಂದಲ್ಲಾದರೂ total ಮೊತ್ತ 35 ಕೋಟಿ ಏನು ಖರ್ಚಾಗಿದೆ ಅದನ್ನು release ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎನ್. ಬಾಲಕೃಷ್ಣ(ಶ್ರವಣಬೊಳಗೊಳ):-ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಬಸವರಾಜ ಬೊಮ್ಮಾಯಿಯವರು ಹೇಳಿದ ಹಾಗೆ SFC ಅನುದಾನ ಪ್ರತಿ ವರ್ಷ ವರ್ಷ ಕಡಿಮೆ ಯಾಗುತ್ತಿರುವುದರಿಂದ ಪ್ರತಿ ತಾಲ್ಲೂಕು ಕೇಂದ್ರದಲ್ಲಿ ಜನಸಂಖ್ಯೆ ಪ್ರಮಾಣ ಜಾಸ್ತಿಯಾಗುತ್ತಿದೆ. ಇದರಿಂದ ಅಭಿವೃದ್ಧಿ ಕಾರ್ಯವಾದ ರಸ್ತೆಗಳನ್ನು ಮಾಡುವುದಕ್ಕಾಗುತ್ತಿಲ್ಲ, ಚರಂಡಿ ಮಾಡುವುದಕ್ಕೆ ಆಗುತ್ತಿಲ್ಲ. ನಗರೋತ್ಥಾನದ 3 ನೇ ಹಂತದ್ದು ಕೊಟ್ಟಿದ್ದಾರಲ್ಲ ಅದರಲ್ಲಿ 7.5 ಕೋಟಿಗಳಲ್ಲಿ ಪುರಸಭೆಯಲ್ಲಿ 2 ಕೋಟಿ ಚಿಲ್ಲರೆಯನ್ನು ಕಟಾಯಿಸುತ್ತಿದ್ದಾರೆ. ಅದನ್ನು ಪೂರ್ಣ ಪ್ರಮಾಣದಲ್ಲಿ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಆದುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಗಮನ ಹರಿಸಿ ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:-ಮಾನ್ಯ ಸಚಿವರೆ, 7.5 ಕೋಟಿಯಲ್ಲಿ 14% ಕಡಿಮೆ ಏಕೆ estimate ಮಾಡಿಸುತ್ತಿದ್ದೀರಿ?

**( ಗೊಂದಲ )**

ಅಧ್ಯಕ್ಷರು:-ಎಲ್ಲರೂ ಒಟ್ಟಿಗೆ ಹೇಳಬೇಡಿ. ಶಿವಣ್ಣನವರೆ ನೀವೇನೋ ಹೇಳುತ್ತಿದ್ದಿರಿ. ಅದು ನನಗೆ ಅರ್ಥವಾಗಲಿಲ್ಲ. ಈಗ ಅದನ್ನು ಹೇಳಿ.

ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್(ಬ್ಯಾಡಗಿ):-ವಿಶೇಷ ಅನುದಾನ SFC grant ಬಗ್ಗೆ ಬಸವರಾಜ ಬೊಮ್ಮಾಯಿಯವರು ಮಾತನಾಡುವಾಗ ಹಾವೇರಿ ಜಿಲ್ಲೆಯೊಳಗೆ 20 ಕೋಟಿ ಅನುದಾನವನ್ನು ಬ್ಯಾಡಗಿಗೆ ಕೊಟ್ಟಿದ್ದಾರೆಂದರು. ಅದು 20 ಕೋಟಿಯಲ್ಲ, ಕೇವಲ 2 ಕೋಟಿ ಮಾತ್ರ.

ಅಧ್ಯಕ್ಷರು:-2 ಕೋಟಿ ಎಂದು ರೆಕಾರ್ಡ್‌ನಲ್ಲಿ ಮಾಡಬೇಕು. ಓ.ಕೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು. 

24-03-2017

ಶ್ರೀ ಬಸವರಾಜ ಬೊಮ್ಮಾಯಿ:-ಅದು 2 ಕೋಟಿಯೇ ಇರಲಿ. ಆದರೆ ಇದನ್ನೂ ಕೂಡ ಕೇವಲ ಬ್ಯಾಡಗಿಗೆ ಮಾತ್ರ ಕೊಟ್ಟಿದ್ದಾರೆಂದು ಪುರಾವೆ ಸಿಕ್ಕಿತು.

ಅಧ್ಯಕ್ಷರು:-ಎಲ್ಲೆಲ್ಲಿ ಡಿಮ್ಯಾಂಡ್ ಇದೆಯೋ ಅಲ್ಲಿಗೆಲ್ಲಾ ಕೊಡುತ್ತಾರೆ ಬಿಡಿ. ಮಾನ್ಯ ಸಚಿವರೆ ಉತ್ತರ ಕೊಡಿ.

ಶ್ರೀ ಈಶ್ವರ ಬಿ. ಖಂಡ್ರೆ:-ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ತಮ್ಮ ತಮ್ಮ ವಿಚಾರವನ್ನೇನು ಮಂಡನೆ ಮಾಡಿದ್ದಾರೋ ಅದನ್ನು ವಿಶೇಷವಾಗಿ ನಗರೋತ್ಥಾನ 3 ರಲ್ಲಿ, ಏನು ಅಮೃತ್ ಯೋಜನೆಯಿದೆ, ಬೇರೆ ಬೇರೆ ಯೋಜನೆಗಳಿಗೆ ಏನು ಹಣ ಕಡಿತ ಮಾಡುತ್ತಿದ್ದಾರೆ ಅದನ್ನು ಕಡಿತ ಮಾಡಬಾರದು ಎನ್ನುವಂಥ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ:-ಮಾನ್ಯ ಸಚಿವರೆ, ಅದು ಹಾಗಲ್ಲ, ಅದು ನಮ್ಮ ಬೇಡಿಕೆಯೇ ಅಲ್ಲ, ಅಮೃತ್ ಯೋಜನೆ ನಮಗೆ ಸಂಬಂಧವೇ ಇಲ್ಲ. ನಾನು ಹೇಳುವುದೇನೆಂದರೆ ವಿಶೇಷ ಅನುದಾನವೇನಿದೆ ಅದನ್ನು ಬಿಡುಗಡೆ ಮಾಡುವಲ್ಲಿ ಆಗಿರುವ ತಾರತಮ್ಯವನ್ನು ಸರಿಪಡಿಸಿ ಎಂಬುದಷ್ಟೇ.

ಶ್ರೀ ಈಶ್ವರ ಬಿ. ಖಂಡ್ರೆ:-ತಾವು ಆ ರೀತಿ ಕೇಳಿದ್ದೀರಿ, ಆದರೆ ಬೇರೆ ಬೇರೆ ಸದಸ್ಯರುಗಳು, ಶಿವರಾಜ್ ಪಾಟೀಲರು ಒಂದು ವಿಷಯ ಮಂಡನೆ ಮಾಡಿದ್ದಾರೆ. ನಗರೋತ್ಥಾನ 3 ನೇ ಯೋಜನೆಯಡಿಯಲ್ಲಿ ಏನೊಂದು ಅಮೃತ್ ಯೋಜನೆಗೆ ಮತ್ತು ಬೇರೆ ಬೇರೆ ಯೋಜನೆಗಳಿಗೆ ಹಣ ಕಡಿತ ಮಾಡಿ ಬೇರೆ ಉಳಿಕೆ ಹಣಕ್ಕೆ ಮಾತ್ರ ಕ್ರಿಯಾ ಯೋಜನೆ ತಯಾರು ಮಾಡುವುದಕ್ಕೆ ನಾವು ಏನು ಸುತ್ತೋಲೆಯನ್ನು ಕಳುಹಿಸಿದ್ದೇವೋ ಅದರಲ್ಲಿ ಒಂದೊಂದು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವಂಥ ಪಟ್ಟಣಗಳು ಅಮೃತ್ ಯೋಜನೆಯಲ್ಲಿ ಆಯ್ಕೆಯಾಗಿವೆ.

(ಮುಂದು)

D 24.03.2017/11.40/8/HBU-VR

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಈಶ್ವರ ಖಂಡ್ರೆ : ಅದರಲ್ಲಿ ಒಂದೊಂದು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವಂಥ ಪಟ್ಟಣಗಳು ಅಮೃತ ಯೋಜನೆಯಲ್ಲಿ ಆಯ್ಕೆಯಾಗಿವೆ. ಅದರಲ್ಲಿ ಒಂದೊಂದು ಸಿಟಿ ಪ್ರದೇಶಗಳಿಗೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

200 ಕೋಟಿ ರೂಪಾಯಿ ಅನುದಾನ ಬರುತ್ತಿದೆ. ಅದರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪ್ರತಿಶತ 50:60 ಹಾಗೂ ರಾಜ್ಯಸರ್ಕಾರದ ಮತ್ತು ಸ್ಥಳೀಯ ಸಂಸ್ಥೆಗಳ ಅನುದಾನ ಪ್ರತಿಶತ 30 ಕೊಡಬೇಕಾಗುತ್ತದೆ. ಸ್ಥಳೀಯ ಸಂಸ್ಥೆಗಳು ಅನುದಾನ ಕೊಡದಿದ್ದರೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಬಾಕಿ ಬರಬೇಕಾದಂಥ ಅನುದಾನ ಕೂಡ ಕಡಿತವಾಗುತ್ತದೆ. ಹೀಗಾಗಿ ನಾವು ಅಮೃತ ಯೋಜನೆ ಮಾಡಿ ಟೆಂಡರ್ ಮಾಡಿ ಕಾಮಗಾರಿ ಪ್ರಾರಂಭ ಮಾಡಿದ್ದರೂ ಕೂಡ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅರ್ಧಕ್ಕೆ ಆ ಕಾಮಗಾರಿ ನಿಂತುಕೊಂಡು ಬಿಡುತ್ತದೆ. ಆ ಒಂದು ಉದ್ದೇಶದಿಂದ ನಗರೋತ್ಥಾನ 3 ಯೋಜನೆಯಡಿಯಲ್ಲಿ ಇವತ್ತು ಅಮೃತ್ ಯೋಜನೆ ತೆಗೆದುಕೊಂಡಿರುವುದಕ್ಕೆ ಕಡಿತ ಮಾಡಬೇಕೆಂದು ಕೊಂಡಿದ್ದೇವೆ. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಇದನ್ನು ಸರಿಪಡಿಸಬೇಕೆಂದು ಅವರು ಸಲಹೆಯನ್ನು ಕೊಟ್ಟಿದ್ದಾರೆ. ಆ ಒಂದು ಸಲಹೆ ಪ್ರಕಾರ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಅವರು ಸೂಚಿಸಿರುವುದರ ಬಗ್ಗೆ ಚರ್ಚೆ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನಗರಸಭೆಯಲ್ಲಿ ಕಡಿತಗೊಳಿಸಿ.

ಅಧ್ಯಕ್ಷರು : ಅವರು ವಿಚಾರ ಮಾಡುತ್ತಾರೆ ಇರಿ.

ಶ್ರೀ ಈಶ್ವರ ಖಂಡ್ರೆ : 15% ಯೋಜನೆ ಏನಿದೆ, ಅದನ್ನು ಆಮೇಲೆ ಕೊಡಬೇಕು ಎನ್ನುವುದರ ಬಗ್ಗೆ ಮಾನ್ಯ ಬಸವರಾಜ ಬೊಮ್ಮಾಯಿಯವರು ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ಮಾಡಿದ ಉದ್ದೇಶ ಏನೆಂದರೆ ಕೆಲವೊಂದು ಸ್ಥಳೀಯ ಸಂಸ್ಥೆಗಳು best practices ಮಾಡಿ ಯಾರು ತೋರಿಸಿಕೊಡುತ್ತಾರೆ, ಅಂಥವರಿಗೆ ಪ್ರೋತ್ಸಾಹ ಕೊಡಬೇಕೆಂದು ಇದೆ. ಎಲ್ಲಿ ಸ್ವಚ್ಛ ಭಾರತ ಮಿಷನ್ ಇದೆ, ಶೌಚಾಲಯಗಳನ್ನು ಮಾಡುವುದು, ಕಸ ವಿಲೇವಾರಿ ಮಾಡುವುದು, ಘನತ್ಯಾಜ್ಯ ವಿಲೇವಾರಿ ಮಾಡುವುದು, ಉದ್ಯಾನ ನಿರ್ಮಾಣ ಮಾಡುವುದು, ಆಸ್ತಿ ಕರ ಕಲೆಕ್ಟ್ ಮಾಡುವುದು ಇರಬಹುದು, ಈ ರೀತಿಯಾಗಿ ಯಾರು ಉತ್ತಮವಾಗಿ ಮಾಡುತ್ತಾರೆ, ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಇಂತಹ ಒಂದು ನಿರ್ಣಯ ತೆಗೆದುಕೊಳ್ಳಬೇಕೆಂದಿದ್ದು, ನವೆಂಬರ್‌ವರೆಗೆ ನೋಡಿ, ಅದರ ಬಗ್ಗೆ ಕೂಡ ಸೂಕ್ತವಾದಂಥ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆನ್ನುವ ವಿಚಾರವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ : ವಿಶೇಷ ಅನುದಾನ ಕೊಡುವಂತಹದು..

ಶ್ರೀ ಈಶ್ವರ್ ಬಿ. ಖಂಡ್ರೆ: ವಿಶೇಷ ಅನುದಾನ ಬಗ್ಗೆ ಈಗಾಗಲೆ ಹೇಳಿದ್ದೇನೆ.

ಅಧ್ಯಕ್ಷರು : ಈಗ ಸಿದ್ರಾಮಪ್ಪ ಮಲ್ಲಿಕಾರ್ಜುನ ಖೂಬಾ ರವರ ಪ್ರಶ್ನೆಗೆ 27ನೇ ತಾರೀಖು ಉತ್ತರ ಕೊಡಿಸುತ್ತೇನೆ. ಅವರ ಪ್ರಶ್ನೆಗೆ ಉತ್ತರ ಇಲ್ಲ. ಮುಂದಿನ ಪ್ರಶ್ನೆ ಅರವಿಂದ ಲಿಂಬಾವಳಿಯವರು ಕೇಳಿ.

ಶ್ರೀ ಜಿ. ಮಂಜುನಾಥ : ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ ಒಂದು ವಿಚಾರ ಕೇಳುತ್ತೇನೆ.

ಅಧ್ಯಕ್ಷರು : ಎರಡು ಮುಂದಿನ ಪ್ರಶ್ನೆಗಳನ್ನು ಕರೆದ ಮೇಲೆ ಕೇಳುತ್ತೀರಿ. ಆಗಲೇ ಕೇಳಬಹುದಾಗಿತ್ತಲ್ಲ. ನೀವು ಪ್ರಶ್ನೆ ಕೇಳುವುದಕ್ಕೆ ಕೈ ಎತ್ತಲಿಲ್ಲ.

ಶ್ರೀ ಕೆ.ಎಸ್.ಮಂಜುನಾಥ ಗೌಡ : ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯಲ್ಲಿ ಏನಾಗಿದೆ ನೀವು ಕೊಟ್ಟಿರುವ ಅಷ್ಟು ಹಣದಲ್ಲಿ 85% ಅನ್ನು ನೀರಿಗೆ ಉಪಯೋಗ ಮಾಡಿ ಎಂದು ಹೇಳಿದ್ದೀರಿ. ಹಾಗಾಗಿ ರಸ್ತೆ ಸೌಕರ್ಯ ಮತ್ತು ಚರಂಡಿಗಳಿಗೆ ಹಣವಿಲ್ಲ. 85% ಪೂರ್ತಿಯಾಗಿ ನೀರಿಗೆ ಉಪಯೋಗಿಸಿ ಎಂದು ಹೇಳಿದ್ದೀರಿ. ನೀವು ಹಣವನ್ನು ಕೊಟ್ಟಿಲ್ಲ.

ಶ್ರೀ ಈಶ್ವರ ಬಿ. ಖಂಡ್ರೆ: ನಾವು ಯಾವುದೇ ಪರ್ಸಂಟೇಜ್ ನಿಗದಿ ಮಾಡಿಲ್ಲ.

ಶ್ರೀ ಕೆ.ಎಸ್.ಮಂಜುನಾಥ ಗೌಡ : ಮಾಡಿದ್ದೀರಿ, ಆರ್ಡರ್ ಬಂದಿದೆ, ಅದನ್ನು ನಿಮಗೆ ಕಳುಹಿಸುತ್ತೇನೆ. ನಮ್ಮಲ್ಲಿ ಆಗಿದೆ, 85% ನೀರಿಗೆ ಉಪಯೋಗಿಸಿ ಎಂದು ಕಳುಹಿಸಿದ್ದಾರೆ. ನಮಗೆ ಬೇರೆ ಕೆಲಸಕ್ಕೆ ನೀವು ಹಣವನ್ನೂ ಕೊಟ್ಟಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಈಶ್ವರ ಬಿ. ಖಂಡ್ರೆ : ನಗರೋತ್ಥಾನ -3ನೇ ಯೋಜನೆಯಡಿಯಲ್ಲಿ 85% ಎಂದು ನಾವು ಫಿಕ್ಸ್ ಮಾಡಿಲ್ಲ. ಮೊದಲನೇ ಆದ್ಯತೆ ಕುಡಿಯುವ ನೀರಿಗೆ ಕೊಡಬೇಕು. ಪ್ರತಿಯೊಬ್ಬ ವ್ಯಕ್ತಿಗೆ 135 ಲೀಟರ್ ನೀರು ಸಿಗಬೇಕೆನ್ನುವ ದೃಷ್ಟಿಯಿಂದ ಆ ಒಂದು ಯೋಜನೆಗೆ ಆದ್ಯತೆ ಕೊಡಬೇಕೆನ್ನುವುದು ನಮ್ಮ ಸುತ್ತೋಲೆಯಲ್ಲಿ ನಿಯಮಾವಳಿಗಳನ್ನು ನಾವು ರೂಪಿಸಿದ್ದೇವೆ.

ಅಧ್ಯಕ್ಷರು : ಈಗ ಈ ಪ್ರಶ್ನೆ ಮುಕ್ತಾಯವಾಯಿತು, ಅರವಿಂದ ಲಿಂಬಾವಳಿಯವರು ಪ್ರಶ್ನೆಯನ್ನು ಕೇಳಿ.

**ಪ್ರಶ್ನೆ ಸಂಖ್ಯೆ 162(2214)**
**ಉತ್ತರ ಲಗತ್ತಿಸಲಾಗಿದೆ**

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಇದರಲ್ಲಿ contradictory ಇದೆ. ಇವರು ಬೇಸಿಗೆಗಿಂತ ಮೊದಲೇ ಲೋಡ್ ಶೆಡ್ಡಿಂಗ್ ಪ್ರಾರಂಭ ಮಾಡಿದ್ದಾರೆ, ಏಕೆ ಎಂದು ಗೊತ್ತಿಲ್ಲ. ನಗರ ಪ್ರದೇಶದಲ್ಲಿ 22 ರಿಂದ 24 ಗಂಟೆಯವರೆಗೂ ಕರೆಂಟ್ ಕೊಡುತ್ತಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಇದು ಸತ್ಯಕ್ಕೆ ಹತ್ತಿರವಾಗಿರುವುದಲ್ಲ. ಅದೇ ರೀತಿ ಗ್ರಾಮೀಣ ಪ್ರದೇಶದಲ್ಲಿ 3 phase 7 ಗಂಟೆ ಹಾಗೂ 10 ಗಂಟೆ single phase ವಿದ್ಯುತ್ತನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದು ತಮಗೂ ಅನುಭವದಲ್ಲಿ ಇದೆ. ಇನ್ನು ಕೆಲವು ವಿಚಾರ ಉತ್ತರ ಕೊಟ್ಟಿರುವುದರಲ್ಲಿ 1,500 ಮೆಗಾವ್ಯಾಟ್ ಕೊರತೆ ಇದೆ ಎಂದು ಹೇಳುತ್ತಾರೆ. ಆ ಕೊರತೆಯನ್ನು ಸರಿದೂಗಿಸುವ ಸಲುವಾಗಿ ಬೇರೆ ಬೇರೆ ಕಂಪನಿಗಳಿಂದ ಖರೀದಿ ಮಾಡಿದ್ದೇವೆಂದು ಹೇಳಿದ್ದಾರೆ. ಅದು 1,650 ಮೆಗ ವ್ಯಾಟ್ ಆಗುತ್ತದೆ. ಹೀಗಾಗಿ ಕೊರತೆ ಇಲ್ಲದಿರುವ ಸಂದರ್ಭದಲ್ಲಿ ಲೋಡ್ ಶೆಡ್ಡಿಂಗ್ ಏಕೆ ಆಗುತ್ತಿದೆ? ನೀವು ಏಕೆ ಮಾಡುತ್ತಿದ್ದೀರಿ? ಮಕ್ಕಳಿಗೆ ಪರೀಕ್ಷೆ ಸಮಯ, ಇಷ್ಟೊಂದು ತೊಂದರೆ ಯಾಗುತ್ತಿದೆ. ಆ ಕಾರಣಕ್ಕಾಗಿ ಇದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಿದೆಯೇ? ಎರಡನೆಯದಾಗಿ ಕುಡಿಯುವ ನೀರಿಗೆ ಬೆಂಗಳೂರು ಸೇರಿದಂತೆ ಕರೆಂಟ್ ಇಲ್ಲದಿರುವುದರಿಂದ ಪಂಪ್‌ಗಳು ಆನ್ ಆಗುವುದಿಲ್ಲ. ಆ ಕಾರಣದಿಂದ ಕುಡಿಯುವ ನೀರಿನ ಬಗ್ಗೆ ದೊಡ್ಡ ಸಮಸ್ಯೆ ಸೃಷ್ಟಿಯಾಗುತ್ತಿದೆ. ಇನ್ನು ಸಣ್ಣ ಕೈಗಾರಿಕೆಗಳಿಗೆ ವಿಪರೀತ ತೊಂದರೆಯಿದೆ. ಲೋಡ್ ಶೆಡ್ಡಿಂಗ್ ನಿಗದಿತ ಸಮಯದಲ್ಲಿ ಮಾಡುತ್ತಿಲ್ಲದಿರುವುದರಿಂದ ಸಣ್ಣ ಕೈಗಾರಿಕೆಗಳಲ್ಲಿ ನೂಲು ತೆಗೆಯಬೇಕಾದರೆ ಕರೆಂಟ್ ಹೋದಂಥ

ಸಂದರ್ಭದಲ್ಲಿ ನೂಲು ಹಾಳಾಗಿ ಹೋಗಿಬಿಡುತ್ತದೆ. ಈ ಇಲಾಖೆಯಲ್ಲಿ ದಕ್ಷವಾದಂಥ ಸಚಿವರಿದ್ದಾರೆ. ಇಲಾಖೆಯಲ್ಲಿ ಏಕೆ ಈ ರೀತಿಯಾಗುತ್ತಿದೆ ಎಂದು ಗೊತ್ತಿಲ್ಲ. ಅದ್ದರಿಂದ ದಯವಿಟ್ಟು ಇದರ ಬಗ್ಗೆ ನಿರೀಕ್ಷೆ ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಮೂರು ವರ್ಷಗಳಿಂದ ಸತತವಾಗಿ ಭೀಕರವಾದ ಬರಗಾಲ ಇದೆ. ಎಷ್ಟೇ ಬರಗಾಲವಿದ್ದರೂ ಕೂಡ ತಾವೆಲ್ಲ ಗಮನಿಸಿದ ಹಾಗೆ ರಾಜ್ಯದಲ್ಲಿ ಎಲ್ಲೂ ಕೂಡ ಲೋಡ್ ಶೆಡ್ಡಿಂಗ್ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. Especially ಈಗ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ಇನ್ನು ಒಂದು ತಿಂಗಳು ಅವರ ಸ್ಕೂಲ್ ಮತ್ತು ಪರೀಕ್ಷೆ ಸಮಯದ ಬಗ್ಗೆ ನಮಗೆ ಅರಿವಿದೆ. ಅದಕ್ಕೆ ನಾವು ಮೊದಲೇ ಪ್ಲಾನ್ ಮಾಡಿಕೊಂಡು ಅದಕ್ಕೆ ವ್ಯವಸ್ಥಿತವಾಗಿ ವಿದ್ಯುತ್ತನ್ನು ಕೊಡುತ್ತಿದ್ದೇವೆ. ತಾವು ಈಗ ಹೇಳಿದ ಹಾಗೆ ಗ್ರಾಮಗಳಲ್ಲಿ ಹತ್ತು ಗಂಟೆ single phase, ಸಂಜೆ ಆರು ಗಂಟೆಯಿಂದ ಬೆಳಿಗ್ಗೆ ಆರು ಗಂಟೆಯವರೆಗೂ ಎಲ್ಲೂ ಕೂಡ ಕರೆಂಟ್ ತೆಗೆಯದ ಹಾಗೆ ನಾವು ಗಮನಿಸುತ್ತಿದ್ದೇವೆ. ರೈತರಿಗೆ 7 ಗಂಟೆ ಕರೆಂಟ್ ಕೊಡಬೇಕು. ನಾನು ಈಗಾಗಲೇ ಎಲ್ಲಾ ಎಂಎಲ್ಎ ಗಳಿಗೆ ಅವರ ನಂಬರುಗಳನ್ನು ಕೊಟ್ಟು ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕರೆಂಟ್ ಸಿಗುತ್ತಿದೆ, ಎಷ್ಟೆಷ್ಟು ಮೆಗಾವ್ಯಾಟ್ ಕೊಡುತ್ತಿದ್ದೇವೆಂದು ಈಗ ಪಾಸ್ ಮಾಡಿಸುತ್ತಿದ್ದೇನೆ. ಆ ಮಾಹಿತಿ ಎಲ್ಲರಿಗೂ ಬರುತ್ತಿದೆ ಎಂದು ಕಾಣುತ್ತಿದೆ. ನಿಮಗೆ ಬೇಕೆಂದರೆ feeder wise ಕೊಡುತ್ತೇನೆ. ಇಂತಿಂಥ feeder ಎಂದು ಹೇಳಿದರೆ ನೀವು ನಮಗೆ ಇ-ಮೇಲ್ ನಂಬರುಗಳನ್ನು ಕೊಟ್ಟರೆ ನಿಮ್ಮ ಇ-ಮೇಲ್‌ಗೆ ಯಾವ್ಯಾವ ಫೀಡರ್‌ನಲ್ಲಿ ಎಷ್ಟೆಷ್ಟು ಕರೆಂಟ್ ಬರುತ್ತದೆನ್ನುವುದನ್ನು ನಿಮಗೆ transparent ಆಗಿ ಕೊಡುತ್ತೇನೆ. ನಾವು ಇದನ್ನು ಮುಚ್ಚಿಕೊಳ್ಳುವುದಕ್ಕೆ ಆಗುವುದಿಲ್ಲ. ಯಾವುದಾದರೂ ಡಾಕ್ಯುಮೆಂಟ್ ಇರಲೇಬೇಕು. ರೈತರು, ಸ್ವಾಮಿ ನಮಗೆ ಕರೆಂಟ್ ಇಲ್ಲ, ಕರೆಂಟ್ ಹೋಗಿಬಿಟ್ಟಿದೆ ಎಂದು ಹೇಳಿ ನಮಗೂ ಮಿಸ್‌ಗೈಡ್ ಮಾಡುತ್ತಾರೆ. ಅದಕ್ಕೆ ನಾವು every feeder ಕೊಡುವುದಕ್ಕೆ ತಯಾರಿದ್ದೇನೆ. ನಗರ ಪ್ರದೇಶಗಳಲ್ಲಿ 20 ರಿಂದ ಕೆಲವು ಕಡೆ 22 ಗಂಟೆ ಇನ್ನು ಕೆಲವು ಕಡೆ 24 ಗಂಟೆಗಳ ಕಾಲ ಕರೆಂಟ್ ಕೊಡುತ್ತಿದ್ದೇವೆ. ನಿರಂತರ ಜ್ಯೋತಿ ಎಲ್ಲಿದೆ ಅಲ್ಲಿ ಕೂಡ ಕರೆಂಟ್ ಕೊಡುತ್ತಿದ್ದೇವೆ. 2,203 ಫೀಡರ್ ಪೈಕಿ 1,972 ಕಡೆ ಆಗಿದೆ. ಇನ್ನು 300 ಚಿಲ್ಲರೆ ಕಡೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಫೀಡರ್ ಆಗಬೇಕಾಗಿದೆ, ಅಲ್ಲಿ ಮಾಡುತ್ತೇವೆ. ನಿಮ್ಮ ಭಾಗದಲ್ಲಿ ಸ್ವಲ್ಪ ತಾಂತ್ರಿಕ ಸಮಸ್ಯೆ ಇದೆ, ಅದು ತಮಗೂ ಗೊತ್ತಿದೆ. ಅಲ್ಲಿ transmission line ಹಾಕುವುದಕ್ಕೆ ಸ್ವಲ್ಪ ಸಮಸ್ಯೆ ಇತ್ತು, ಈಗ ತಾವು ಸಹಕಾರ ಕೊಟ್ಟಿದ್ದೀರಿ. ಆ ಭಾಗದಲ್ಲಿ ಹೆಚ್ಚುಕಡಿಮೆ ಒಂದೆರಡ್ಮೂರು ಗಂಟೆ because of the technical reason ಕರೆಂಟ್ ಕಟ್ ಆಗುತ್ತಿರಬಹುದು, ಬೆಂಗಳೂರಿನಲ್ಲಿ ನಾಲ್ಕು ಕಡೆ ಆಗುತ್ತಿರಬಹುದು. ಏಕೆಂದರೆ ಹೊರಗಡೆಯಿಂದ ನೀರು ತರಬೇಕಾದರೆ ಇವತ್ತು PGCL ಬೇರೆ ಬೇರೆ ಎಲ್ಲಾ congestion ತೆಗೆಯುತ್ತಿದ್ದೇವೆ. ಕೆಂದರೆ ನಗರ ಪ್ರದೇಶಗಳಿಂದ ನಮಗೆ ಹಣ ಬರುವುದು. ನಿಮ್ಮ ಏರಿಯಾದಲ್ಲಿ ರಾತ್ರಿ ಹೊತ್ತು ಕಡ್ಡಾಯವಾಗಿ ಕರೆಂಟ್ ಇರಲೇಬೇಕಾಗುತ್ತದೆ. ಏಕೆಂದರೆ ಹೊರಗಡೆ ದೇಶದವರು ರಾತ್ರಿ ಹೊತ್ತು ಕೆಲಸ ಮಾಡುವುದು. ಬೆಸ್ಕಾಂ ನಲ್ಲಿ ಒಳ್ಳೆಯ ಹಣವನ್ನು ಕೊಡುತ್ತಿದ್ದಾರೆ. BESCOM is supposed to be the one of the best, first number in the... ಮೊನ್ನೆ ಪಿಯುಶ್ ಗೋಯಲ್‌ರವರು announce ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಮೂರು ಕಂಪನಿಗಳು ಯಾವುವೆಂದರೆ ಬೆಸ್ಕಾಂ ನಂಬರ್ 1, ಚೆಸ್ಕಾಂ ನಂಬರ್ 7, ಮಂಗಳೂರು ನಂಬರ್ 8, ಈ ರೀತಿ ಹೈಗ್ರೇಡ್ ಇರುವುದನ್ನು ಕೂಡ ಅನೌನ್ಸ್ ಮಾಡಿದ್ದಾರೆ. ಆ ರೀತಿ ಮ್ಯಾನೇಜ್‌ಮೆಂಟ್ ಇವತ್ತು ನಡೆಯುತ್ತಿದೆ. ನಾನು ದೊಡ್ಡ ಸಾಧನೆ ಮಾಡಿದ್ದೇನೆಂದು ಹೇಳುವುದಿಲ್ಲ. All of us have co-operated, ಜನರು ಸಹಕಾರ ಕೊಟ್ಟಿದ್ದಾರೆ. ನಮ್ಮಲ್ಲಿ ಇಲ್ಲದೆ ಹೋದರೂ ಕೂಡ ನಾವು ಪರ್ಚೇಸ್ ಮಾಡಿದ್ದೇವೆ. ನಮಗೆ ತುಂಗಾಭದ್ರಾದಲ್ಲಿ ನೀರಿಲ್ಲ. ಆದ್ದರಿಂದ ನಮಗೆ ಬಿಟಿಪಿಎಸ್ ನಲ್ಲಿ ಕೂಡ 700 ಮೆಗಾವ್ಯಾಟ್ ಕಡಿಮೆಯಾಗುತ್ತಿದೆ. ಅಂತಹ ಸಮಸ್ಯೆಯಿದ್ದರೂ ಕೂಡ ನಾನು ಮುಂಜಾಗ್ರತಾ ಕ್ರಮವಾಗಿ 1,000 ಮೆಗಾವ್ಯಾಟ್ ವಿದ್ಯುತ್ ಪರ್ಚೇಸ್ ಮಾಡುತ್ತಿದ್ದೇನೆ. ಕೇವಲ ರೂ.4.18 ಪೈಸೆ ಕೊಟ್ಟು 800-900 ಮೆಗಾವ್ಯಾಟ್ ಪರ್ಚೇಸ್ ಮಾಡುತ್ತಿದ್ದೇನೆ. Somehow we tried to manage it. ಆದರೆ ಮುಂದಕ್ಕೆ ಏನಾಗುತ್ತದೋ ಗೊತ್ತಿಲ್ಲ. ಶರಾವತಿಯಲ್ಲಿ ರಿಪೇರಿ ಮಾಡುತ್ತಿದ್ದೇವೆ, ಅದಕ್ಕೆ ಅಲ್ಲಿ ಇರುವಂಥ ನೀರನ್ನು ತೆಗೆಯುತ್ತಿದ್ದೇವೆ, ಇನ್ನು ಜೂನ್‌ವರೆಗೂ ಮ್ಯಾನೇಜ್ ಮಾಡಬಹುದಾಗಿತ್ತು. ಈ ವರ್ಷ ನಾವು ರಿಪೇರಿ ಮಾಡಲಿಲ್ಲವೆಂದರೆ ಮುಂದಿನ ವರ್ಷ storage ಮಾಡುವುದಕ್ಕೆ ಆಗುವುದಿಲ್ಲವೆನ್ನುವ ಕಾರಣಕ್ಕೆ ನೀರನ್ನು ತೆಗೆದು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೇವೆ. You don't

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

worry. ತಮಗೆ ಆತಂಕವಿರುವುದು ಮಕ್ಕಳಿಗೆ ವಿದ್ಯಾಭ್ಯಾಸ ನಡೆಯುತ್ತಿರುವ ಸಂದರ್ಭದಲ್ಲಿ ನಾವು ಕರೆಂಟ್ ಕಟ್ ಮಾಡಬಾರದು ಎನ್ನುವುದು ಇದೆ. ನೀವು Global Investors Meet ಮಾಡಿದ್ದೀರಿ. ಪ್ರವಾಸಿ ದಿನ ಮಾಡಿದ್ದೀರಿ. You have marketed Karnataka and Bangalore to the world. ಅಂತಹ ಸಂದರ್ಭದಲ್ಲಿ ನೀವು, ಪ್ರಧಾನ ಮಂತ್ರಿಗಳು ಎಲ್ಲಾ ಸೇರಿ ಮಾರ್ಕೆಟ್ ಮಾಡಿರುವಾಗ ನಿಮಗೆ ಅವಮಾನ ಮಾಡುವಂಥ ಕೆಲಸ ಮಾಡುವುದಿಲ್ಲ. I will see that the best power has been given in Karnataka. Be assured, let any industries come, we will see that we give them power. ನಾವು ಒಳ್ಳೆಯ image maintain ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಈಗ ತಾನೆ ಮಾನ್ಯ ಸಚಿವರು ನಮ್ಮ ಭಾಗದಿಂದ ಟ್ಯಾಕ್ಸ್ ಕಲೆಕ್ಷನ್ ಜಾಸ್ತಿ ಇದೆ ಎಂದು ಹೇಳಿದರು. ಸ್ಟೇಷನ್‌ಗಳಲ್ಲಿ overload ಆಗುತ್ತಿದೆ. ಹೊಸ ಸ್ಟೇಷನ್‌ಗಳನ್ನು ಮಾಡುವುದಕ್ಕೆ ಕೈಗೆತ್ತಿಕೊಂಡಿದ್ದಾರೆ. ಇಷ್ಟು ನಿಧಾನವಾದರೆ. . .

ಅಧ್ಯಕ್ಷರು : ಆದಷ್ಟು ಬೇಗ ಮಾಡುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, industries ಗೆ ಹೋಗುತ್ತಿದೆ, ಆದರೆ ಮೂಲ ಜನ ಯಾರಿದ್ದಾರೆ ಅವರಿಗೆ ಕರೆಂಟ್ ಸಿಗುತ್ತಿಲ್ಲ. ಮೂಲವಾಸಿಗಳು ಯಾರಿದ್ದಾರೆ ಅವರ ಮನೆಯಲ್ಲಿ ಕರೆಂಟ್ ಇಲ್ಲದಿರುವ ಪರಿಸ್ಥಿತಿ ಇದೆ. ಸಾಕಷ್ಟು ಆಸಕ್ತಿ ಇರುವಂಥ ಸಚಿವರಿದ್ದಾರೆ, ಆ ಭಾಗದಲ್ಲಿ ಸಾಫ್ಟ್‌ವೇರ್ ಕಂಪನಿಗಳು ಸಾಕಷ್ಟು ಪ್ರಮಾಣದಲ್ಲಿ ಇರುವುದರಿಂದ ಅದರ ಬಗ್ಗೆ ಅವರಿಗೆ ಆಸಕ್ತಿ ಇದ್ದೇ ಇದೆ. ಅವರು ಜನರ ಬಗ್ಗೆ ಕೂಡ ಆಸಕ್ತಿ ತೆಗೆದುಕೊಂಡರೆ ನಿಶ್ಚಿತವಾಗಿ ಸರಿಯಾಗುತ್ತದೆ. ಅದಕ್ಕೆ ಒಂದು ಸಭೆ ಕರೆಯುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ನಿಮ್ಮ ಕ್ಷೇತ್ರದಲ್ಲಿ ಬಂದು ನಿಮ್ಮನ್ನು ಇಟ್ಟುಕೊಂಡು ನಿಮ್ಮ consumers ಕರೆದು we will have meeting.

(ಮುಂದು)

24.03.17 11.50 (09) RD-PS

**ಪ್ರಶ್ನೆ: 163 (2383)**
**ಉತ್ತರ ಪಟ್ಟಿಯನ್ನು ಲಗತ್ತಿಸಿದೆ.**

ಶ್ರೀ ಮಾನಪ್ಪ ಡಿ. ವಜ್ಜಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಲಿಂಗಸಗೂರು ತಾಲ್ಲೂಕಿನಲ್ಲಿ ಸರ್ಕ್ಯೂಟ್ ಹೌಸ್ ಇದೆಯೆಂದು ಎಂದು ತಿಳಿಸಿದ್ದಾರೆ. ಇಲ್ಲಿ ಸರ್ಕ್ಯೂಟ್ ಹೌಸ್ ಇರುವುದು ನಿಜ. ಅದು ಹೇಗೆ ಆಗಿದೆಯೆಂದರೆ, ಎಲ್ಲಾ ತಾಲ್ಲೂಕುಗಳಲ್ಲೂ ಇವೆ, ಎಲ್ಲಾ ಹೋಬಳಿಗಳಲ್ಲೂ ಇಂಥ ಸರ್ಕ್ಯೂಟ್ ಹೌಸ್‌ಗಳಿವೆ. ಇಲ್ಲಿ ಬ್ರಿಟಿಷರ ಕಾಲದಲ್ಲಿ ನೂರು ವರ್ಷಗಳ ಹಿಂದೆ ಕಟ್ಟಿರುವಂಥ ಒಂದು ಸರ್ಕ್ಯೂಟ್ ಹೌಸ್ ಇದೆ, 35 ವರ್ಷಗಳ ಹಿಂದೆ ಕಟ್ಟಿರುವಂಥ ಸರ್ಕ್ಯೂಟ್ ಹೌಸ್ ಎರಡು ಇವೆ. ನಾನು ಮಾನ್ಯ ಸಚಿವರಲ್ಲಿ ಕೇಳಿರುವಂಥದ್ದು ಏನೆಂದರೆ, ಈಗಾಗಲೇ ಬಹಳಷ್ಟು ಸರ್ಕ್ಯೂಟ್ ಹೌಸ್‌ಗಳನ್ನು ಗಂಗಾವತಿಯಲ್ಲಿ ಕಟ್ಟಿದ್ದಾರೆ, ಕುಷ್ಟಗಿಯಲ್ಲಿ ಕಟ್ಟಿದ್ದಾರೆ. ಈ ರೀತಿ ರಾಜ್ಯದಲ್ಲಿ ಸುಮಾರು ಎರಡೂವರೆ ಕೋಟಿ ರೂ.ಗಳಿಂದ ಮೂರು ಕೋಟಿ ರೂ.ಗಳನ್ನು ಖರ್ಚು ಮಾಡಿ, ಸರ್ಕ್ಯೂಟ್ ಹೌಸ್‌ಗಳನ್ನು ಕಟ್ಟಿದ್ದಾರೆ. ಅದು ಲಿಂಗಸಗೂರು ತಾಲ್ಲೂಕಿನಲ್ಲಿ ಪ್ರವಾಸಿ ಸ್ಥಳಗಳು ಹೆಚ್ಚು ಇವೆ. ಅವುಗಳು ಮುದಗಲ್ ಕೋಟೆ, ಜಲದುರ್ಗ ಕೋಟೆ, ಹಟ್ಟಿ ಚಿನ್ನದ ಗಣಿ ಮತ್ತು ಹೆಸರಾಂತ ಅಮರೇಶ್ವರ ದೇವಸ್ಥಾನ, ಈ ರೀತಿ ಹೆಸರಾಂತ ದೇವಸ್ಥಾನಗಳು ಇಲ್ಲಿ ಇರುವುದರಿಂದ ಹೆಚ್ಚಿಗೆ ಜನರು ಬಂದು ಹೋಗುತ್ತಾರೆ. ಗಣ್ಯ ಮಾನ್ಯರು ಬಂದು ಹೋಗುವುದರಿಂದ, ಗಂಗಾವತಿಯಲ್ಲಿ ಮತ್ತು ಕುಷ್ಟಗಿ ಯಲ್ಲಿ ಸರ್ಕ್ಯೂಟ್ ಹೌಸ್‌ಗಳನ್ನು ಏನು ಕಟ್ಟಿದ್ದೀರಿ, ಆ ಮಾದರಿಯಲ್ಲಿ ನಿರ್ಮಿಸಬೇಕೆಂದು ನಾನು ಸರ್ಕಾರವನ್ನು ಕೇಳಿರುವಂಥದ್ದು. ಇದಕ್ಕೆ ಸನ್ಮಾನ್ಯ ಸಚವರು ಭರವಸೆಯನ್ನು ಸಹ ಕೊಟ್ಟಿದ್ದರು. ನಾನು ಕೊಟ್ಟಿಂತ ಪತ್ರಕ್ಕೆ ಸಹಿ ಹಾಕಿ, ಕೂಡಲೇ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದೆಂದು ಬರೆದಿದ್ದರು. ಮತ್ತೆ ಅದು ಲಿಸ್ಟ್‌ನಲ್ಲೂ ಇತ್ತು, ಅದನ್ನು cut ಮಾಡಿದ್ದಾರೆ, ಏಕೆ cut ಮಾಡಿದ್ದಾರೆಂದು ಗೊತ್ತಿಲ್ಲ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಅಲ್ಲಿ ಸರ್ಕ್ಯೂಟ್ ಹೌಸ್ ಇದೆಯೆಂದು ಒಪ್ಪಿಕೊಂಡಿದ್ದಾರೆ. ಆದರೆ ಅದು ಹಳೆಯದಾಗಿದ್ದು, ಹೊಸ ಸರ್ಕ್ಯೂಟ್ ಹೌಸ್ ಒಂದನ್ನು ಕೊಡಬೇಕೆಂದು ಅವರ ಮನವಿ ಇದೆ. ಈಗಾಗಲೇ ಸರ್ಕಾರಕ್ಕೂ ಮನವಿಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಮಾನಪ್ಪ ಡಿ. ವಜ್ಜಲ್: ಮಾನ್ಯ ಅಧ್ಯಕ್ಷರೆ, ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಅಲ್ಲಿ ಪ್ರವಾಸಿ ಸ್ಥಳಗಳು ಹೆಚ್ಚಿಗೆ ಇರುವುದರಿಂದ, ಗಣ್ಯ ಮಾನ್ಯರು ಬರುವುದರಿಂದ ಕೂಡಲೇ ಕ್ರಮ ತೆಗೆದುಕೊಂಡು, ಸರ್ಕಾರ ಸರ್ಕ್ಯೂಟ್ ಹೌಸ್ ಕಟ್ಟಲು ಅನುಮತಿ ಕೊಡಬೇಕು.

ಅಧ್ಯಕ್ಷರು: ಮಾನ್ಯ ಸಚಿವರು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಅಲ್ಲಿರುವಂಥದ್ದು ಎಲ್ಲಾ ಉಪಯೋಗಕ್ಕೆ ಬರುತ್ತಿದೆ. ಅಲ್ಲಿ ಯಾವ ತೊಂದರೆಯಾಗಿಲ್ಲವೆಂದು ವರದಿ ಇರುವಂಥದ್ದು. ಆದರೂ ಕೂಡ ಅದು ನಿಮಗೆ ಬಹಳ ಹಳೆಯ ಐ.ಬಿ. ಆಗಿರುವುದರಿಂದ ಹೊಸದು ಕೊಡಬೇಕೆಂದು ಹೇಳಿದ್ದಾರೆ. ಆ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು: ಪರಿಶೀಲನೆ ಮಾಡಿ. Ok, next ಡಾ:ಕೆ.ಶ್ರೀನಿವಾಸಮೂರ್ತಿಯವರೆ, ಕೇಳಿ.

**ಪ್ರಶ್ನೆ: 164 (1755)**
**ಉತ್ತರ ಪಟ್ಟಿಯನ್ನು ಲಗತ್ತಿಸಿದೆ**

ಡಾ:ಕೆ.ಶ್ರೀನಿವಾಸಮೂರ್ತಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ನಾನು ನನ್ನ ಮತಕ್ಷೇತ್ರದ ಎಂ.ಡಿ.ಆರ್. ರಸ್ತೆಗಳ ಅಭಿವೃದ್ಧಿಗೆ 2016-17ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮತ್ತು ಕಾಮಗಾರಿಗಳನ್ನು ಕೈಗೊಂಡಿದ್ದ ಗುತ್ತಿಗೆದಾರರು ಮತ್ತು ಎಸ್.ಸಿ.ಪಿ.ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡಿರುವ ಅನುದಾನ ಎಷ್ಟು? ಎನ್ನುವುದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನ್ನ ಮತಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನಾಂಗ ಹೆಚ್ಚಾಗಿರುವುದರಿಂದ, ಅಲ್ಲಿ ಎಲ್ಲಾ ರಸ್ತೆಗಳು ಹದಗೆಟ್ಟಿರುವುದರಿಂದ, ಅಭಿವೃದ್ಧಿಗೆ ಹೆಚ್ಚು ಅನುದಾನವನ್ನು ಬಿಡುಗಡೆ ಮಾಡಬೇಕೆಂದು, ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಸ್ತೆ ಕಾಮಗಾರಿಗೆ ಹಣವನ್ನು ಒದಗಿಸಲಾಗಿದೆ. 2016-17ನೇ ಸಾಲಿನಲ್ಲಿ ಗಿರಿಜನ ಉಪಯೋಜನೆ ಅಡಿಯಲ್ಲಿ ಒದಗಿಸಿರುವ ಅನುದಾನ 78 ಲಕ್ಷ ರೂ.ಗಳು, ಪರಿಶಿಷ್ಟ ಜಾತಿ ಕಾಲೋನಿಗಳ ರಸ್ತೆಗಳ ಅಭಿವೃದ್ಧಿಗೆ 2ನೇ ಹಂತದಲ್ಲಿ ಸುಮಾರು ಒಂದು ಕೋಟಿ ಮೂವತ್ತು ಲಕ್ಷ ರೂ.ಗಳನ್ನು ಕೊಟ್ಟಿದೆ. ಆದರೂ ಅಲ್ಲಿ ಪರಿಶಿಷ್ಟ ಜಾತಿಯವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದು ಮನವಿ ಮಾಡಿದ್ದೀರಿ. ಆ ವಿಷಯವನ್ನು ಪರಿಶೀಲನೆ ಮಾಡೋಣ.

ಅಧ್ಯಕ್ಷರು: Ok. Next ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ, ಕೇಳಿ.

**ಪ್ರಶ್ನೆ: 165 (1706)**
**ಉತ್ತರ ಪಟ್ಟಿಯನ್ನು ಲಗತ್ತಿಸಿದೆ.**

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಇದು ನಮ್ಮ ಅತ್ಯಂತ ಪ್ರಮುಖವಾದಂಥ ಕೆಲಸವನ್ನು ಬಹಳ ಕಷ್ಟ ಪಟ್ಟು ಮಾಡುತ್ತಿರುವಂಥ ಪೌರ ಕಾರ್ಮಿಕರ ವಿಷಯವಾಗಿದೆ. ಪೌರ ಕಾರ್ಮಿಕರು ಎಷ್ಟು ಕಷ್ಟಪಟ್ಟು ಅವರ ಕೆಲಸ-ಕಾರ್ಯಗಳನ್ನು ಮಾಡುತ್ತಾರೆ, ತಮ್ಮ ಜೀವನ ನಿರ್ವಹಣೆ ಮಾಡುತ್ತಾರೆಂಬುದು ತಮಗೆಲ್ಲಾ ಗೊತ್ತಿದೆ. ಇದರಲ್ಲಿ ಇರುವ ವಿಷಯವೇನೆಂದರೆ, ತಾವು ಪೌರ ಕಾರ್ಮಿಕರನ್ನು ಹೊರಗುತ್ತಿಗೆ ಮೇಲೆ 15,000 ಎಂದು ಹೇಳಿದ್ದೀರಿ. ಹೊರಗುತ್ತಿಗೆ ಮೇಲೆ ತೆಗೆದುಕೊಂಡಿರುವವರಿಗೆ ಸರಿಯಾಗಿ ಸಂಬಳವನ್ನು ಕೊಡುತ್ತಿಲ್ಲ. ಅವರಿಗೆ ಉಳಿದ ಸೌಲಭ್ಯಗಳನ್ನು ಸರಿಯಾಗಿ ಕೊಡುತ್ತಿಲ್ಲ. ಇವರಿಗೆ ರೂ.12,000, 13,000 ಕೊಡಬೇಕೆಂದು ಎಲ್ಲಾ ಹೇಳುತ್ತಾರೆ. ಆದರೆ ಅವರಿಗೆ ಅಷ್ಟು ಹಣವನ್ನು ಅವರು ಕೊಡುತ್ತಿಲ್ಲ. ಅದಕ್ಕೆ ಇವರು ಆರ್.ಟಿ.ಜಿ.ಎಸ್. ಮಾಡಿ, bio-metric ಮಾಡಿ ಕೊಡಬೇಕೆಂದು ಹೇಳುತ್ತಾರೆ. ಆದರೆ ಅದು ಯಾವುದು ವಸ್ತುಸ್ಥಿತಿ ಸ್ಥಳದಲ್ಲಿ ಆಗುತ್ತಿಲ್ಲ. ತಾವು ಇವರಿಗೆ ಸಂಬಳ ಹಾಗೂ ಉಳಿದ ಸೌಲಭ್ಯಗಳು ಸರಿಯಾಗಿ ಸಿಗುವುದಕ್ಕೆ ಏನು ಮಾಡುತ್ತೀರೆಂಬುದನ್ನು ಮೊದಲನೆಯದಾಗಿ ಹೇಳಬೇಕೆಂದು ಕೇಳಬಯಸುತ್ತೇನೆ. ಎರಡನೆಯದಾಗಿ, ನಾನು ಕೇಳಬಯಸುವುದೇನೆಂದರೆ, ಅವರ ಆರೋಗ್ಯ ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ. ನಮ್ಮ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸರ್ಕಾರಿ ಇಲಾಖೆಗಳೆಂದರೆ ಸುತ್ತೋಲೆ ಹೊರಡಿಸುವುದರಲ್ಲಿ ಪ್ರವೀಣರಾಗಿದ್ದಾರೆ. ಇವರು ಸುತ್ತೋಲೆಗಳನ್ನು ಹೊರಡಿಸಿ, ನಾವು ಅದು ಮಾಡಿದ್ದೇವೆ, ಇದು ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಸ್ಥಳದಲ್ಲಿ ಒಂದೂ ಆಗುವುದಿಲ್ಲ. ಅವರಿಗೆ ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಸಬೇಕೆಂದು ಹೇಳಿದ್ದಾರೆ. ಅದರ ಜೊತೆಯಲ್ಲಿ ಕೈಕವಚ, raincoat, cap, gum boot ಇವೆಲ್ಲವನ್ನೂ ಹಾಕಿಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಸ್ಥಳದಲ್ಲಿ ಅದು ಆಗುತ್ತಿಲ್ಲ. ತಾವು ಒಬ್ಬ ಕಮೀಷನರ್ ಅನ್ನು ಇದಕ್ಕೆ ಹೊಣೆಗಾರರನ್ನಾಗಿ ಮಾಡಿದ್ದೀರೇನು? ಅವರನ್ನು ಒಬ್ಬರನ್ನು ಹೊಣೆಗಾರರನ್ನಾಗಿ ಮಾಡುವುದಿಲ್ಲ. ನಿಮ್ಮ ಕಮೀಷನರ್‌ಗಳ ಮೇಲೆ ಸರ್ಕಾರದ ಹಿಡಿತವಿಲ್ಲ. ಅವರು ಮನ ಬಂದಂತೆ ಅಲ್ಲಿ ಆಡಳಿತ ಮಾಡುವುದನ್ನು ನೋಡಿದರೆ, elected body ಯನ್ನು ಯಾಮಾರಿಸಿ, ಅವರು ಆಡಳಿತ ಮಾಡುವುದನ್ನು ನೋಡಿದರೆ, ನಮಗೆ ಬೇಸರವಾಗುತ್ತದೆ. ತಾವು ಇವರಿಗೆ ಕೊಡುವ ಸೌಲಭ್ಯವನ್ನು ಕೊಡುತ್ತಿಲ್ಲ. ಇದರ ಬಗ್ಗೆ ಕಮೀಷನರ್‌ಗಳನ್ನು ಹೊಣೆಗಾರರನ್ನಾಗಿ ಮಾಡುತ್ತಿರಾ? ಎಂದು ಕೇಳಬಯಸುತ್ತೇನೆ.

ಶ್ರೀ ಈಶ್ವರ ಬಿ. ಖಂಡ್ರೆ: ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಅತ್ಯಂತ ಕೆಳ ಸ್ತರದಲ್ಲಿ ಕೆಲಸ ಮಾಡುವಂಥ ಪೌರ ಕಾರ್ಮಿಕರಿಗಾಗಿ, ಈಗ್ಗಾಗಲೇ ಸಾಕಷ್ಟು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಹಿಂದೆ ಕನಿಷ್ಟ ವೇತನ ರೂ.6,000, 7,000 ಇದ್ದಂಥದ್ದನ್ನು ಈಗ ಕನಿಷ್ಟ ವೇತನ ನಗರಪಾಲಿಕೆಯಲ್ಲಿ ರೂ.14,040=00 ಗಳಿಗೆ ಏರಿಸಲಾಗಿದೆ, ನಗರಸಭೆಯಲ್ಲಿ grade-1ನಲ್ಲಿ ರೂ.13,650 ಇದ್ದು, grade-2ನಲ್ಲಿ ರೂ.13,260 ಮತ್ತು ಪಟ್ಟಣ ಪಂಚಾಯತ್‌ಗಳಿಗೆ ರೂ.12,870 ಗಳಿದ್ದು, ಇವತ್ತು ಅವರ ಕನಿಷ್ಟ ವೇತನವನ್ನು ಹೆಚ್ಚಿಗೆ ಮಾಡಲಾಗಿದೆ. ಅದರ ಜೊತೆಯಲ್ಲಿ ಮಾನ್ಯ ಸದಸ್ಯರು ಕಳವಳ ವ್ಯಕ್ತಪಡಿಸಿದ್ದಾರೆ. ಅದರಲ್ಲಿ ಪೌರ ಕಾರ್ಮಿಕರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಟ್ಟರೂ, ಅವರ ಕನಿಷ್ಟ ವೇತನವನ್ನು ಹೆಚ್ಚಿಗೆ ಮಾಡಿದ್ದರೂ, ಅವರಿಗೆ ತಲುಪುತ್ತಿಲ್ಲವೆಂದು ತಿಳಿಸಿದ್ದಾರೆ. ಅದೇ ಒಂದು ಕಾರಣಕ್ಕಾಗಿ ಸರ್ಕಾರ ನಿಯಮಗಳನ್ನು ಸಡಿಲಿಕೆ ಮಾಡಿ, SFC ಅನುದಾನ 75%, ಪುರಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳ 25% ತಮ್ಮ ಸ್ವಂತ ಸಂಪನ್ಮೂಲವಿದೆ, ಅದಾಯವಿದೆ ಏನಿದೆ, ಅದನ್ನು ತೆಗದುಕೊಂಡು, ಅದನ್ನು ಪ್ರತ್ಯೇಕವಾದ escrow account ಅನ್ನು ಬ್ಯಾಂಕ್‌ನಲ್ಲಿ ಇವತ್ತು ಖಾತೆಯನ್ನು ತೆರೆದು, ಆ ಬ್ಯಾಂಕಿನ ಮುಖಾಂತರ ಎರಡೂವರೆ ತಿಂಗಳವರೆಗೆ advance ಆಗಿ, ಆ

ಒಂದು ಸಂಬಳದ ಹಣವನ್ನು ಬ್ಯಾಂಕ್ ಖಾತೆಯಲ್ಲಿ ಜಮಾ ಮಾಡಿ, ಕ್ರಮಬದ್ಧವಾಗಿ ಆರ್.ಟಿ.ಜಿ.ಎಸ್. ಮುಖಾಂತರ ಗುತ್ತಿಗೆದಾರ ಆ ಒಂದು ಒಪ್ಪಂದವನ್ನು ಮಾಡಿಕೊಂಡು, tripartite ಮಾಡಿಕೊಂಡು, ಹೊರಗುತ್ತಿಗೆದಾರ ಪೌರ ಕಾರ್ಮಿಕರ ಖಾತೆಗೆ ನೇರವಾಗಿ ಜಮಾ ಮಾಡುವಂಥ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ. ಅದರಲ್ಲಿ ಕೆಲವೊಂದು ಕಡೆಗಳಲ್ಲಿ ತಾವು ಹೇಳಿದ ಹಾಗೆ ವಿಳಂಬವಾಗುತ್ತಿದೆ. ಕೆಲವೊಂದು ಹಣವಿಲ್ಲ, ಇನ್ನು ಹಣ ಕೊಟ್ಟಿಲ್ಲವೆಂಬ ದೂರುಗಳು ಬಂದಿದೆ. ದೂರುಗಳು ಬಂದಿರುವಂಥದ್ದಕ್ಕೆ ಸ್ಪಂದನೆ ಮಾಡಿ, ಈಗ ಮುಂದಿನ quarter ಹಣವನ್ನು release ಮಾಡಿದಂಥ ಸಂದರ್ಭದಲ್ಲಿ SFC ಅನುದಾನವನ್ನು ಪೌರ ಕಾರ್ಮಿಕರ ಖಾತೆಗೆ ನೇರವಾಗಿ ಜಮಾ ಮಾಡಬೇಕೆನ್ನುವಂಥ ಸುತ್ತೋಲೆಯನ್ನು ಕೊಟ್ಟಿದ್ದೇವೆ. ಅವರಿಗೆ ಆರೋಗ್ಯದ ದೃಷ್ಟಿಯಿಂದ, ಕವಚಗಳಾಗಲಿ, ಇನ್ನಿತರ ಸಲಕರಣೆಗಳನ್ನು ವಿತರಣೆ ಮಾಡಬೇಕಾಗಿದೆ, ಅದನ್ನೂ ವಿತರಣೆ ಮಾಡಲಾಗಿದೆ. ಅದರ ಜೊತೆಗೆ ಬೆಳಗಿನ ಉಪಾಹಾರವನ್ನು ಕೊಡುವಂಥ ಕಾರ್ಯಕ್ರಮವನ್ನು ಇವತ್ತು ಅನುಷ್ಠಾನಕ್ಕೆ ತಂದಿದ್ದೇವೆ. ನಾವು ಸಾಕಷ್ಟು ಬದಲಾವಣೆಗಳನ್ನು ತಂದಿದ್ದೇವೆ, ಬದಲಾವಣೆಗಳನ್ನು ತರುವಂಥ ಸಂದರ್ಭದಲ್ಲಿ ಕೆಲವೊಂದು ಅಡತಡೆಗಳು, ಕೆಲವೊಂದು ನ್ಯೂನ್ಯತೆಗಳು ನಮ್ಮ ಗಮನಕ್ಕೂ ಬಂದಿವೆ. ಎಲ್ಲಾ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳು ಯಾರಿದ್ದಾರೆ, ಕಮೀಷನರ್‌ಗಳಿದ್ದಾರೆ, ಅವರನ್ನು ಹೊಣೆಗಾರರನ್ನಾಗಿ ಮಾಡಿದ್ದೇವೆ. ಯಾರ್ಯಾರು ಸರಿಯಾದ ಸಮಯಕ್ಕೆ ಹಣವನ್ನು ಪಾವತಿ ಮಾಡಿಲ್ಲ, ಸಂಬಳವನ್ನು ಪಾವತಿ ಮಾಡಿಲ್ಲ. ಅಂಥವರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿದ್ದೇವೆ. ಅವರ ದುರ್ನಡನೆ ಇನ್ನು ಹೆಚ್ಚಿನ ರೀತಿಯಲ್ಲಿ ಕಂಡು ಬಂದರೆ, ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸುತ್ತೇವೆ. ನಾವು ಪೌರಕಾರ್ಮಿಕರ ಬಗ್ಗೆ ಎಲ್ಲಕ್ಕಿಂತ ಹೆಚ್ಚಿನ ಒಂದು ಕಾಳಜಿ ವಹಿಸಿ, ಅದನ್ನು ಅನುಷ್ಠಾನಕ್ಕೆ ತರುವಂಥ ಕೆಲಸವನ್ನು ಮಾತನ್ನು, ನಾನು ಮಾನ್ಯ ಸದಸ್ಯರಿಗೆ ಹೇಳಲಿಚ್ಛಿಸುತ್ತೇನೆ.

ಅಧ್ಯಕ್ಷರು: Ok.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಎಲ್ಲಾ ವಿಷಯಗಳನ್ನು ಹೇಳಿದರು. ನಾವು action ತೆಗೆದುಕೊಳ್ಳುತ್ತೇವೆಂದು ಹೇಳಿದರು. ಇವತ್ತು ನಿಮ್ಮ ಉತ್ತರದಲ್ಲಿ ರೂ.14,000, 13,000 ಕನಿಷ್ಟ ವೇತನವೆಂದು ತಿಳಿಸಿದ್ದೀರಿ. ಅವರಿಗೆ ನಿಜವಾಗಿ ಸಿಗುತ್ತಿದೆಯೇ ಎಂದು ತಾವು ಎಲ್ಲಾ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ
ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕಡೆಗಳಲ್ಲೂ inspection ಮಾಡಿ enquiry ಮಾಡಿ, ಕನಿಷ್ಠ ವೇತನ ಏನು ಸಿಗಬೇಕು, ಅದು ಸಿಗುತ್ತಿಲ್ಲ. ಹೊರಗುತ್ತಿಗೆದಾರರಿಗೆ agreement ಏನು ಮಾಡಿರುತ್ತಾರೆ, ಅದನ್ನು violate ಮಾಡುತ್ತಿದ್ದಾರೆ, ಆ ಪ್ರಕಾರ ನಡೆದುಕೊಳ್ಳುತ್ತಿಲ್ಲ. ಸುಮ್ಮನೆ ಖೊಟ್ಟಿ ಸಹಿಗಳನ್ನು ಮಾಡುತ್ತಾರೆ, ಆ ಪೌರ ಕಾರ್ಮಿಕರು ಹೆದರುತ್ತಾರೆ. ಅಲ್ಲಿ outsource ಮಾಡಿಕೊಂಡ contractor ಹೇಳುತ್ತಾರೆ. ಇದಕ್ಕೆ ಸಹಿ ಮಾಡಿಲ್ಲ ನೋಡು ಎಂದು ಹೇಳುತ್ತಾರೆ. ಹೀಗಾಗಿ ತಾವು surprise visit ಮಾಡಿ, random check ಮಾಡಿ, ಆಗ ಅವರಿಗೆ ಕನಿಷ್ಠ ವೇತನ ಸಿಗುತ್ತಿದೆಯೋ, ಇಲ್ಲವೊ ಎಂಬುದು ಗೊತ್ತಾಗುತ್ತದೆ. ಕನಿಷ್ಠ ವೇತನ ಸಿಕ್ಕರೆ ಒಳ್ಳೆಯದು, ಆದರೆ ಸಿಗುತ್ತಿಲ್ಲ, ಇದನ್ನು ತಾವು verify ಮಾಡಿ. ಇನ್ನೊಂದು ವಿಷಯವೇನೆಂದರೆ, ಕೊನೆ ಪ್ರಶ್ನೆ ಪೌರಕಾರ್ಮಿಕರ ಸೇವೆಯನ್ನು ಖಾಯಂ ಮಾಡುವ ಬಗ್ಗೆ, ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಇವತ್ತು ಪೌರ ಕಾರ್ಮಿಕರನ್ನು ಖಾಯಂಗೊಳಿಸಬೇಕೆಂದು ತೀರ್ಮಾನ ತೆಗೆದುಕೊಂಡು ಇದನ್ನು ಹಂತ ಹಂತವಾಗಿ ಖಾಯಂಗೊಳಿಸಬೇಕೆಂದು ದಿನಾಂಕ:13.02.2017ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

24-03-2017/12.00/10/GG/PS

ಶ್ರೀ ಜಗದೀಶ್ ಶೆಟ್ಟರ್ (ಮುಂದುವರೆದುದು): ಅದರಂತೆ ನೇಮಕಾತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಕೆಲಸ ಪ್ರಾರಂಭವಾಗಿದೆ ಎಂದು ಹೇಳಿದ್ದೀರಿ. ನಾನು ಬಜೆಟ್ ಭಾಷಣದಲ್ಲೂ ಹೇಳಿದ್ದೇನೆ, ಬೇರೆಬೇರೆ ಹಂತಗಳಲ್ಲಿಯೂ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಟೇಟ್‌ಮೆಂಟ್‌ಅನ್ನೂ ಕೊಟ್ಟಿದ್ದರು ಮತ್ತು ಸಚಿವರೂ ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾದಂಥ ಪೌರಕಾರ್ಮಿಕರು ಒಟ್ಟು 15,454 ಜನರಿದ್ದಾರೆ. ದಯವಿಟ್ಟು ಇವರನ್ನು ಖಾಯಂ ಮಾಡಿ. ಅದಕ್ಕೆ ಸಂಬಂಧಪಟ್ಟಂತೆ ನೀವು ಏನು ನಿಯಮಗಳನ್ನು ಮಾಡುತ್ತೀರಿ, Bill ಅನ್ನು ತರುತ್ತೀರಿ, ಅದೆಲ್ಲದಕ್ಕೂ ನಾವು ಸಂಪೂರ್ಣವಾದ ಬೆಂಬಲ ಕೊಡಲು ತಯಾರಿದ್ದೇವೆ. ಇದನ್ನು ಡಿಲೇ ಮಾಡುವುದಕ್ಕೆ ಹೋಗಬೇಡಿ, ಆದಷ್ಟು ಬೇಗನೆ ಮಾಡಿ. ಕಾನೂನಿನ ಯಾವುದೇ ಸಮಸ್ಯೆಗಳು ಬಂದರೂ ನಾವೆಲ್ಲರೂ ಕೂಡಿ ಅದನ್ನು ನಿವಾರಣೆ

ಮಾಡೋಣವಂತೆ. ಹಿಂದೆ 23,000 ಜನ ದಿನಗೂಲಿ ನೌಕರರನ್ನು ಖಾಯಂ ಮಾಡುವಂಥ ಪ್ರಸಂಗ ಬಂದಾಗ, ಬಹಳಷ್ಟು ಕಾನೂನಿನ ಸೂಕ್ಷ್ಮತೆಗಳನ್ನು ನಮ್ಮ ಅಧಿಕಾರಿಗಳು ಹೇಳಿದರು. ಅದನ್ನು ಮೀರಿ, ಬೆಳಗಾವಿಯ ಅಧಿವೇಶನದಲ್ಲಿ Bill ತಂದು ಎಲ್ಲರೂ ಸರ್ವಾನುಮತದಿಂದ ಅದನ್ನು ಪಾಸ್ ಮಾಡಿದ್ದರಿಂದ ಇವತ್ತು ಆ 23,000 ದಿನಗೂಲಿ ನೌಕರರು ಖಾಯಂ ಆಗಿದ್ದಾರೆ, ಎಲ್ಲ ಸೌಲಭ್ಯಗಳು ಅವರಿಗೆ ಸಿಗುತ್ತಿದೆ. ಈ 15,000 ಜನ ಹೊರ ಗುತ್ತಿಗೆ ಪೌರಕಾರ್ಮಿಕರನ್ನು ದಯವಿಟ್ಟು ಮುಖ್ಯಮಂತ್ರಿಗಳು ಮತ್ತು ತಾವು ಮನಸ್ಸು ಮಾಡಿ, ಆದಷ್ಟು ಬೇಗನೆ ಖಾಯಂ ಮಾಡುವಂಥ ಕೆಲಸ ಆಗಬೇಕು. ಹಂತಹಂತವಾಗಿ ಮಾಡುತ್ತೇವೆ ಅಥವಾ ಮತ್ತೊಂದು ಎಂದು ಹೇಳಿದರೆ ಇದು ಇನ್ನು ಒಂದೆರಡು ವರ್ಷವಾದರೂ ಆಗುವುದಿಲ್ಲ. ಒಂದು ದೃಢ ನಿಶ್ಚಯ, ಒಂದು ರಾಜಕೀಯ ಇಚ್ಛಾಶಕ್ತಿಯಿಂದ ಇದನ್ನು ಮಾಡಿ. ಆಗ definitely ಅವರಿಗೆ ಖಂಡಿತವಾಗಿ ಒಳ್ಳೆಯ ಜೀವನ ಸಿಗಲು ಸಾಧ್ಯವಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಮ್ಮ ನಾಯಕರಾದ ಶ್ರೀಯುತ ಜಗದೀಶ್ ಶೆಟ್ಟರ್‌ರವರು ಹೇಳಿದ ಹಾಗೆ, ಇವರನ್ನು ಖಾಯಂಗೊಳಿಸುವುದಕ್ಕೆ ತಾವು ಹರಿಯಾಣಕ್ಕೆ ಒಂದು ತಂಡವನ್ನು ಕಳುಹಿಸಿ ಅಲ್ಲಿಂದ ವರದಿ ತರಿಸಿಕೊಳ್ಳುತ್ತೇವೆ ಎಂದೆಲ್ಲ ಹೇಳಿದ್ದೀರಿ. ಅದಕ್ಕೆ ಯಾವುದಾದರೂ ಕಾಲಮಿತಿ ಇದೆಯೋ, ಇಲ್ಲವೋ? ಕಾಲಮಿತಿ ಹಾಕದೇ ಹೋದರೆ ಹೀಗೇ ವರ್ಷಗಳು ಹೋಗುತ್ತಿರುತ್ತವೆ. ಅವರು ಕಷ್ಟವನ್ನು ಅನುಭವಿಸುತ್ತಲೇ ಇರಬೇಕಾದ ಸಂದರ್ಭ ಬರುತ್ತದೆ. ಹಾಗಾಗಿ, ಯಾವುದಾದರೂ ಒಂದು ಕಾಲಮಿತಿಯೊಳಗೆ ಹರಿಯಾಣದಿಂದ ವರದಿ ತರಿಸಿಕೊಂಡು ನೀವು ಅವರನ್ನು ಖಾಯಂಗೊಳಿಸುವ ಪ್ರಕ್ರಿಯೆ ಮಾಡಬೇಕು, ಆ ಕಾಲಮಿತಿ ಯಾವುದು ಎನ್ನುವುದನ್ನು ಹೇಳಬೇಕು. ಇತ್ತೀಚೆಗೆ, ಬೆಂಗಳೂರಿನಲ್ಲಿ ಮೂರು ಜನ ಮ್ಯಾನ್‌ಹೋಲ್‌ನಲ್ಲಿ ಸತ್ತು ಹೋಗಿದ್ದನ್ನು ನಾವು ನೋಡಿದ್ದೇವೆ. ವರ್ಷಕ್ಕೆ 5-10 ಜನ ಹೀಗೆ ಸಾಯುತ್ತಲೇ ಇರುತ್ತಾರೆ. ಇವರ ಯಂತ್ರಗಳು ಸರಿಯಿಲ್ಲ. ಅವರ ಅವ್ಯವಸ್ಥೆಯಂತೂ ಹೇಳತೀರದು. ನಾನು ಅದನ್ನು ಹೇಳಬೇಕೆಂದರೆ, ಸಮಯದ ಅಭಾವವಿರುವುದರಿಂದ ಈಗ ನಾನು ಅದನ್ನು ಹೇಳುವುದಿಲ್ಲ. ಹಾಗಾಗಿ, ನನ್ನ ಸಲಹೆ ಎಂದರೆ ಇವರು ಎಲ್ಲ ಯಂತ್ರಗಳನ್ನು ಸರಿಯಾಗಿಟ್ಟುಕೊಳ್ಳಬೇಕು. ಮಲ ಹೊರುವ ಪದ್ಧತಿ ರದ್ದು

ಮಾಡುತ್ತೇವೆ ಎಂದು ಹೇಳುತ್ತಾರೆ, ಯಂತ್ರಗಳು ಸರಿ ಇಲ್ಲದೇ ಪೌರಕಾರ್ಮಿಕರು ತೊಂದರೆ, ತೊಡಕುಗಳನ್ನು ಅನುಭವಿಸುತ್ತಾರೆ. ಇವನ್ನೆಲ್ಲ ಸರಿ ಮಾಡುವುದಕ್ಕೆ ಏನು ಮಾಡುತ್ತಾರೆ ಎನ್ನುವುದನ್ನು ಹೇಳಬೇಕು. ಕೊನೆಯದಾಗಿ, ಇವರಿಗೆ ಪಗಾರ ನೀಡಲು ಸ್ಥಳೀಯ ಸಂಸ್ಥೆಗಳು ಹಣ ಕೊಡಬೇಕು ಎಂದು ಹೇಳಿದ್ದೀರಿ. ಸ್ಥಳೀಯ ಸಂಸ್ಥೆಗಳಲ್ಲೇ ದುಡ್ಡಿಲ್ಲ, ಅವರಿಗೆ ಯಾವ ಆದಾಯವೂ ಇಲ್ಲ. ನೀವು ಅವರಿಗೆ ಕೊಡುವ ಹಣ ಕರೆಂಟ್ ಬಿಲ್, ನೀರು ಬಿಲ್ ಮುಂತಾದವುಗಳಿಗೆ ಹೋಗುತ್ತಿದೆ. ಸಂಬಳಕ್ಕೂ ನೀವು ಹಣ ಕೊಡಿ ಎಂದರೆ ಅವರಲ್ಲಿ ಅಭಿವೃದ್ಧಿಗೆ ಹಣವೇ ಇರುವುದಿಲ್ಲ. ಹಾಗಾಗಿ, ಇವರ ಸಂಬಳಕ್ಕೆ ಸ್ಥಳೀಯ ಸಂಸ್ಥೆಗಳಿಂದ ಹಣ ಕೊಡುವಂತಾಗಬಾರದು. ಸರ್ಕಾರವೇ ಅದನ್ನು ಭರಿಸುವಂತೆ ಆಗಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಈಶ್ವರ ಬಿ. ಖಂಡ್ರೆ: ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ 13ನೇ ತಾರೀಖು ಒಂದು ಸಭೆಯನ್ನು ಮಾಡಿ ಎಲ್ಲ ಪೌರ ಕಾರ್ಮಿಕರನ್ನು ಖಾಯಂ ಮಾಡುವುದರ ಬಗ್ಗೆ ಬಹಳ ಸವಿಸ್ತಾರವಾಗಿ ಚರ್ಚೆ ಮಾಡಿದ್ದೇವೆ. ಕೆಲವೊಂದು ಕಡೆ ಗುತ್ತಿಗೆದಾರರು ಪೌರಕಾರ್ಮಿಕರಿಗೆ ನಿಗದಿಪಡಿಸಿದಂಥ ಸಂಬಳವನ್ನು ಕೊಡುತ್ತಿಲ್ಲ ಮತ್ತು ಇತರ ಸೌಲಭ್ಯಗಳಾದ ESI, PF ಗಳನ್ನು ಕಟ್ಟುತ್ತಿಲ್ಲ ಎಂದು ಗೌರವಾನ್ವಿತ ಸದಸ್ಯರು ಹೇಳಿದ್ದಾರೆ. ಅದನ್ನು ಸರಿಪಡಿಸಬೇಕೆಂದು ಹೇಳಿ, ನೇರವಾಗಿ RTGS ಮುಖಾಂತರ ಸರ್ಕಾರದ ವತಿಯಿಂದ ಅಥವಾ ಸ್ಥಳೀಯ ಸಂಸ್ಥೆಗಳ ಮುಖಾಂತರವೇ ಅವರ ಖಾತೆಗಳಿಗೆ ಹಣ ಜಮಾ ಮಾಡಿಸುವ ಬಗ್ಗೆ ಬಹಳ ಸುದೀರ್ಘವಾದ ಚರ್ಚೆ ಮಾಡಿದ ನಂತರ, ಹರಿಯಾಣದಲ್ಲಿ ಈ ರೀತಿ ಮಾಡುತ್ತಿದ್ದಾರೆ ಎಂದು ಸಫಾಯಿ ಕರ್ಮಚಾರಿಯ ಅಧ್ಯಕ್ಷರು ಪ್ರಸ್ತಾಪ ಮಾಡಿದಾಗ, ಒಂದು ತಂಡವನ್ನು ರಚನೆ ಮಾಡಿ, ನಮ್ಮ ಅಧಿಕಾರಿಗಳು ಮತ್ತು ಸಫಾಯಿ ಕರ್ಮಚಾರಿಯ ಅಧ್ಯಕ್ಷರನ್ನೊಳಗೊಂಡಂತ ಒಂದು ಸಮಿತಿ ಈಗಾಗಲೇ ಹರಿಯಾಣ ರಾಜ್ಯಕ್ಕೆ ಭೇಟಿ ಕೊಟ್ಟು, ಹರಿಯಾಣ ರಾಜ್ಯದಿಂದ ಒಂದು ವರದಿಯನ್ನೂ ನಿನ್ನೆ ತಂದು ನಮ್ಮ ಇಲಾಖೆಗೆ ಒಪ್ಪಿಸಿದ್ದಾರೆ. ಅದಕ್ಕೆ ಕಾಲಮಿತಿಯನ್ನೂ ಕೊಟ್ಟಿದ್ದೇವೆ, ಆ ಕಾಲಮಿತಿಯಲ್ಲಿಯೇ ವರದಿಯನ್ನು ಅಧ್ಯಯನ ಮಾಡಿ, ಅದರ ಸಾಧಕ-ಬಾಧಕಗಳನ್ನು ನೋಡಿಕೊಂಡು, ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮತ್ತೊಂದು ಸಭೆ ಕರೆದು ಶೀಘ್ರದಲ್ಲಿಯೇ 15,454 ಜನ ಪೌರ ಕಾರ್ಮಿಕರನ್ನು ಹಂತಹಂತವಾಗಿ ಕಾಯಂ ಮಾಡುವಂಥ ಒಂದು ಪ್ರಕ್ರಿಯೆಯನ್ನು ಮಾಡಲಾಗುವುದು. ಅದರ

ಜೊತೆಯಲ್ಲಿ, ಈಗ ಮಾನ್ಯ ಗೌರವಾನ್ವಿತ ಸದಸ್ಯರು ಏನು ಹೇಳಿದ್ದಾರೆ, ಘನತ್ಯಾಜ್ಯ ವಿಲೇವಾರಿ ಮಾಡುವವರಿಗೆ ಸುರಕ್ಷತೆಯ ದೃಷ್ಟಿಯಿಂದ ಮತ್ತು ನಮ್ಮ ಸಲಕರಣೆಗಳನ್ನು ಸರಿಮಾಡಿಕೊಂಡು ಮಾಡುತ್ತೇವೆ. ಸ್ಥಳೀಯ ಸಂಸ್ಥೆಗಳವರು ತಮ್ಮ ಸ್ವಂತ ಆದಾಯವನ್ನೂ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಸರ್ಕಾರದಿಂದಲೇ ಸಂಪೂರ್ಣವಾದ ಅನುದಾನವನ್ನು ಕೊಡಲು ಸಾಧ್ಯವಾಗುವುದಿಲ್ಲ. ಎಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಅನುದಾನದ ಕೊರತೆಯಿದೆ, ಸಂಬಳ ಕೊಡಲು ಅನುದಾನ ಕಡಿಮೆಯಾದರೆ SFC ಅನುದಾನವನ್ನು ಬಳಕೆ ಮಾಡಿಕೊಳ್ಳಬೇಕು ಎಂದು ಈಗಾಗಲೆ ಅವರಿಗೆ ಸೂಚನೆಯನ್ನೂ ಕೊಟ್ಟಿದ್ದೇವೆ.

ಅಧ್ಯಕ್ಷರು: ಈಗ ಬಿ ನಾಗೇಂದ್ರರವರು.

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು: ಈಗ ಪುಟ್ಟಣ್ಣಯ್ಯನವರು

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

* * * * * *

**ಪ್ರಶ್ನೆ ಸಂಖ್ಯೆ 155 (821)**

**(ಉತ್ತರವನ್ನು ಲಗತ್ತಿಸಲಾಗಿದೆ)**

ಶ್ರೀ ಸೋಮಶೇಖರ್ ಎಸ್.ಟಿ: ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿದೆ. ನನ್ನ ಕ್ಷೇತ್ರದಲ್ಲಿ agriculture portion ಜಾಸ್ತಿ ಇದೆ. ನಮ್ಮಲ್ಲಿ ಬರುವ ಮೂರು ಹೋಬಳಿಗಳ ಪೈಕಿ ಒಂದು ಹೋಬಳಿಯಲ್ಲಿ ಮಾತ್ರ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರವನ್ನು ಸ್ಥಾಪನೆ ಮಾಡಲು ಕೃಷಿ ಸಚಿವರು ಹೊರಟಿದ್ದಾರೆ. ನಮ್ಮಲ್ಲಿ ಮೂರು ಹೋಬಳಿಗಳಿರುವುದರಿಂದ ಮೂರು ಹೋಬಳಿಗಳಲ್ಲೂ ಅದನ್ನು ಸ್ಥಾಪನೆ ಮಾಡಿದರೆ ಬಹುತೇಕ agriculture land ಅನ್ನು ಲೇಔಟ್‌ಗಳನ್ನಾಗಿ ಮಾಡುವುದು ನಿಲ್ಲುತ್ತದೆ ಎನ್ನುವುದು ನನ್ನ ಭಾವನೆ. ಆದ್ದರಿಂದ, ತಾವರೆಕೆರೆ ಹೋಬಳಿಯಲ್ಲಿ ಮಾಡಲು ಹೊರಟಿರುವ ಕೇಂದ್ರವನ್ನು ಕೆಂಗೇರಿ ಮತ್ತು ಉತ್ತರಹಳ್ಳಿ ಹೋಬಳಿಗಳಲ್ಲೂ ಮಾಡಿದರೆ agriculture landಅನ್ನು layout, industry ಮಾಡುವಂಥಾದ್ದನ್ನು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

avoid ಮಾಡಬಹುದು ಮತ್ತು greenery ಯನ್ನು ಉಳಿಸಿಕೊಳ್ಳಬಹುದು ಎನ್ನುವುದು ನಮ್ಮ ಚಿಂತನೆ. ಕೃಷಿ ಸಚಿವರು ಅದಕ್ಕೆ ಒಂದು ಆದೇಶವನ್ನು ಮಾಡಬೇಕು ಎಂದು ತಮ್ಮ ಮುಖಾಂತರ ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ: ನಮ್ಮ ಇಲಾಖೆಯ ಕಾರ್ಯಕ್ರಮವಾದ ಕೃಷಿ ಯಂತ್ರಧಾರೆ ಕೇಂದ್ರ ಅವರ ಕ್ಷೇತ್ರದ ಒಂದು ಹೋಬಳಿಯಲ್ಲಿ ಮಾತ್ರವಿದ್ದು, ಉಳಿದ ಎರಡು ಹೋಬಳಿಗಳಲ್ಲಿ ಮಾಡಬೇಕು ಎಂದು ಕೇಳಿದ್ದಾರೆ. ಬರುವ ಸಾಲಿನಲ್ಲಿ ಖಂಡಿತವಾಗಿ ಇನ್ನು ಎರಡು ಹೋಬಳಿಗಳಲ್ಲೂ ಮಾಡಿಕೊಡುತ್ತೇವೆ.

ಶ್ರೀ ಸೋಮಶೇಖರ್ ಎಸ್.ಟಿ.: ಧನ್ಯವಾದಗಳು.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

24-03-2017

**ಪ್ರಶ್ನೆ ಸಂಖ್ಯೆ 158 (1740)**

**(ಉತ್ತರವನ್ನು ಲಗತ್ತಿಸಲಾಗಿದೆ)**

ಶ್ರೀ ಯಾವಗಲ್ ಬಿ.ಆರ್.: ಉತ್ತರವನ್ನು ಕೊಟ್ಟಿದ್ದಾರೆ. ನರಗುಂದ ತಾಲ್ಲೂಕಿಗೆ 20 ಮೆಗಾ ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಕೊಟ್ಟಿದ್ದು, ದಿನಾಂಕ 27-09-2017ರೊಳಗಾಗಿ ಅನುಷ್ಠಾನವಾಗಬೇಕಾಗಿದೆ ಎಂದು ಹೇಳಿದ್ದಾರೆ. ಇದು ಯಾವ ಹಂತದಲ್ಲಿದೆ ಎನ್ನುವುದನ್ನು ಹೇಳಬೇಕು. ಅದರ ಜೊತೆಗೆ, ಬಹಳ ಮುಖ್ಯವಾಗಿ, ಇದು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ರೈತರಿಂದ ಜಮೀನನ್ನು ಪಡೆದು ಮಾಡುವಂಥಾದ್ದೋ ಅಥವಾ ಜಮೀನನ್ನು ಖರೀದಿ ಮಾಡುವಂಥಾದ್ದೋ ಎನ್ನುವುದನ್ನು ಹೇಳಬೇಕು. ತಾವು ಪಾವಗಡದಲ್ಲಿ ಮಾಡಿರುವ ಮಾದರಿಯಂತೆ ನಮ್ಮ ಭಾಗದಲ್ಲಿಯೂ ಸಾಕಷ್ಟು ಜನ ರೈತರು ಜಮೀನನ್ನು ಲೀಸ್ ಮೇಲೆ ಕೊಡಲು ತಯಾರಿದ್ದಾರೆ. ಅಲ್ಲೂ ಸಹ ಅದರಂತೆ ಮಾಡಲು ಸಚಿವರು ತಯಾರಿದ್ದಾರೆಯೋ ಎನ್ನುವುದನ್ನು ಹೇಳಬೇಕು. ಮತ್ತು ಮಾಡುತ್ತಿರುವವರು ಯಾರು, ಅದು ನಿಜವಾದ ಕಂಪನಿಯೋ ಅಥವಾ ಫೇಕ್ ಕಂಪನಿಯೋ ಅಥವಾ ಬೇರೆಯವರಿಗೆ ಕೊಟ್ಟು ಮಾಡಿಸುತ್ತಿದ್ದಾರೆಯೇ ಎನ್ನುವುದನ್ನೂ ಹೇಳಬೇಕು.

ಶ್ರೀ ಡಿ.ಕೆ. ಶಿವಕುಮಾರ್: ಇದು ಒಂದು ಹೊಸ concept. ಇಡೀ ರಾಜ್ಯದಲ್ಲಿ distributed generation ಆಗಬೇಕು ಎಂದು ನಾವು ಮಾಡಿದ್ದೇವೆ. ಒಂದೇ ಕಡೆ solar park ಇರಬಾರದು, ಇದು ಎಲ್ಲ ಕಡೆಯೂ ಇರಬೇಕೆಂದು ಈಗಾಗಲೇ ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಸ್ಟೇಷನ್‌ಗಳಿವೆ, infrastructure ಇವೆ. ಕೆಲವರು ಚಿತ್ರದುರ್ಗ ಮತ್ತು ಗದಗ್‌ನಂಥ ಜಿಲ್ಲೆಗಳಲ್ಲಿ ಮಾತ್ರ wind mill ಮಾಡುತ್ತಿದ್ದಾರೆ. ಕೆಲವರು ಪಾವಗಡದಲ್ಲಿ ಮಾತ್ರ solarಗೆ ಹೋಗುತ್ತಿದ್ದಾರೆ. ಆ ರೀತಿ, ಎಲ್ಲಿ ಅವಕಾಶ ಸ್ವಲ್ಪ ಜಾಸ್ತಿ ಇದೆಯೋ ಅಲ್ಲಿಗೆ ಮಾತ್ರ ಹೋಗುತ್ತಿದ್ದಾರೆ. ಅಲ್ಲಿ ಘಟಕವನ್ನು ಹಾಕುವುದಕ್ಕಿಂತ ಅಲ್ಲಿಂದ transmission ಮಾಡುವುದು ಬಹಳ ಸಮಸ್ಯೆಯಾಗುತ್ತದೆ. ಅಲ್ಲಿಂದ ಕರೆಂಟ್‌ನ್ನು ಬೆಂಗಳೂರಿಗಾಗಲೀ, ಬೆಳಗಾವಿಗಾಗಲೀ, ರಾಯಚೂರಿಗಾಗಲೀ ತರಬೇಕಾದರೆ ಬಹಳ ತೊಂದರೆಯಾಗುತ್ತದೆ. ಅದಕ್ಕೇ ನಾವೇನು ಯೋಚನೆ ಮಾಡಿದೆವು ಎಂದರೆ, first time in the country, distributed generation ಆಗಬೇಕು. ಅಲ್ಲಲ್ಲೇ ಉತ್ಪಾದನೆಯಾಗಬೇಕು ಎಂದು ಮಾಡಿದ್ದೇವೆ. ಏಕೆಂದರೆ,

ಎಲ್ಲ ಕಡೆಯೂ ಇರುವುದು ಒಂದೇ ಸೂರ್ಯ. ಶಾಖದ ಕಿರಣಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತದಷ್ಟೇ. ಶಾಖದಲ್ಲಿ ಒಂದೆರಡು ಡಿಗ್ರಿ ಸೆಲ್ಸಿಯಸ್‌ಗಳಷ್ಟು ಹೆಚ್ಚು ಕಡಿಮೆಯಾಗುತ್ತದೆ. ಮಲೆನಾಡು ಪ್ರದೇಶದಲ್ಲಿ ಹೆಚ್ಚು ಮಳೆ ಬೀಳುವುದರಿಂದ, ಮಲೆನಾಡು ಪ್ರದೇಶವೊಂದನ್ನು ಬಿಟ್ಟು ನಮ್ಮ ರಾಜ್ಯದಲ್ಲಿ ಉಳಿದ ಎಲ್ಲ ಕಡೆಗಳಲ್ಲಿ solarಗೆ ಪಕ್ವವಾಗಿರುವಂಥ ಭೂಮಿ ಇದೆ. ಅದಕ್ಕಾಗಿ ನಾನು 120 ತಾಲ್ಲೂಕುಗಳನ್ನು select ಮಾಡಿ ಒಟ್ಟು 1200 ಮೆಗಾ ವ್ಯಾಟ್‌ನಷ್ಟು ಒಂದೊಂದು ತಾಲ್ಲೂಕಿಗೆ 20 ಮೆಗಾವ್ಯಾಟ್ ನಂತೆ 60 ತಾಲ್ಲೂಕುಗಳದ್ದು ಒಂದು ಹಂತ ಮತ್ತು SECI (Solar Energy Corporation of India) ಎನ್ನುವ ಕೇಂದ್ರ ಸರ್ಕಾರದ ಏಜೆನ್ಸಿಗೆ 1,000 ಮೆಗಾ ವ್ಯಾಟ್ ಸಾಮರ್ಥ್ಯದ್ದು ಕೊಟ್ಟಿದ್ದೇವೆ. ಹೀಗೆ ಒಟ್ಟು 2,200 ಮೆಗಾ ವ್ಯಾಟ್‌ನಷ್ಟು distributed generationಗೆ ಅವಕಾಶ ಕೊಟ್ಟಿದ್ದೇವೆ. ಇದರಲ್ಲಿ government investment ಮಾಡುವುದಿಲ್ಲ. ನಾವು ಟೆಂಡರ್ ಕರೆದಿದ್ದೇವೆ. ಗುತ್ತಿಗೆದಾರರೇ investment ಮಾಡುತ್ತಾರೆ, ಅವರೇ ಜಾಗವನ್ನು purchase ಮಡುತ್ತಾರೆ, ಅವರೇ ಜಾಗವನ್ನು leaseಗೆ ತೆಗೆದುಕೊಳ್ಳುತ್ತಾರೆ. ನಂತರ ವಿದ್ಯುತ್ ಉತ್ಪಾದನೆ ಮಾಡಿ ನಮ್ಮ ಸರ್ಕಾರಕ್ಕೆ ಪ್ರತಿ ಯೂನಿಟ್ಟಿಗೆ 5.48 ರೂ.ಗಳಂತೆ ಕೊಡುತ್ತಾರೆ. ಅವರು ಹೀಗೆ ನಮ್ಮ ಸರ್ಕಾರಕ್ಕೆ supply ಮಾಡುತ್ತಾರೆ. Day power ಅನ್ನು ನಾವು ಅಲ್ಲೇ ಅವರಿಗೇ ಕೊಟ್ಟುಬಿಡುತ್ತೇವೆ.

(ಮುಂದುವರೆದಿದೆ)

24-03-2ಸ017 : 12-10 [11] kkd:vg 1

ಶ್ರೀ ಡಿ.ಕೆ. ಶಿವಕುಮಾರ್ (ಮುಂದು)

ಅಲ್ಲಿ ಯಾರು ಇದ್ದಾರೆ ಅವರು ನಮ್ಮ norms ಪ್ರಕಾರ guarantee ಕೊಡಬೇಕಾಗುತ್ತದೆ. ಏನು ನಮ್ಮ norms ಇದೆ ಆ ಪ್ರಕಾರ ಅವರು ಮಾಡಬೇಕಾಗುತ್ತದೆ. ಆದ್ದರಿಂದ, ಅವರು ಜಮೀನನ್ನು ಈಗಾಗಲೇ identify ಮಾಡಿದ್ದಾರಂತೆ, ಜಮೀನನ್ನು purchase ಮಾಡುತ್ತಿದ್ದಾರಂತೆ, ಲೆಕ್ಕದ ಪ್ರಕಾರ September ಅಷ್ಟೊತ್ತಿಗೆ ಈ project ಅನ್ನು ಅವರು complete ಮಾಡಬೇಕು. ಇನ್ನು 40 ತಾಲ್ಲೂಕುಗಳು ಹಾಗೆಯೇ ಉಳಿದುಕೊಂಡಿವೆ. KERC

ಯಿಂದ permission ತೆಗೆದುಕೊಳ್ಳಬೇಕಾಗಿದೆ. ಆ permission ಆದ ತಕ್ಷಣ ಇನ್ನು ಯಾವ್ಯಾವ ತಾಲ್ಲೂಕುಗಳಲ್ಲಿ interest ಇದೆ, ಈಗ ಹೆಚ್.ಕೆ. ಪಾಟೀಲರು ಗದಗಕ್ಕೆ ಬೇಕೆಂದು ಕೇಳಿದರು. ಮಧುಬಂಗಾರಪ್ಪನವರು ಅವರ ಕ್ಷೇತ್ರದಲ್ಲಿ ನಮ್ಮಲ್ಲಿ ಮಲೆನಾಡು ಇದ್ದರೂ ಕೂಡ ನಮ್ಮ ಹತ್ತಿರ ಅರೆಮಲೆನಾಡು ಇದೆ ಎಂದು ಅವರು ಕೇಳುತ್ತಿದ್ದಾರೆ. ಹೀಗಾಗಿ ಎಲ್ಲೆಲ್ಲಿ ಕೇಳುತ್ತಿದ್ದಾರೆ, irrespective of political parties, we are least bothered about politics here. ಎಲ್ಲೆಲ್ಲಿ ಒಳ್ಳೆಯ ಸೂರ್ಯನ ಉಷ್ಣಾಂಶ ಇದೆ, ಜಮೀನು ಬೆಲೆ ಎಲ್ಲಿ ಕಡಿಮೆ ಇದೆ, ಎಲ್ಲಾ ಕಡೆಯೂ ನಾವು ಆ solar **ಸ್ಥಾವರವನ್ನು** 20 MW ಅನ್ನು ಕೊಡಲಿಕ್ಕೆ ಬದ್ಧರಾಗಿದ್ದೇವೆ. ನಿಮ್ಮಲ್ಲಿ ಏನಾದರೂ ಸಮಸ್ಯೆ, problem ಆಯಿತು ಎಂದರೆ ನಾನು personal ಆಗಿ ತೆಗೆದುಕೊಳ್ಳುತ್ತೇನೆ. ಇನ್ನೂ 20 MW ಯಾವಗಲ್‌ರವರಿಗೋಸ್ಕರ ಕೊಡುತ್ತೇನೆ.

ಶ್ರೀ ಬಿ.ಆರ್. ಯಾವಗಲ್: ಮಾನ್ಯ ಅಧ್ಯಕ್ಷರೆ, ಇದು ಬಹಳ important ಪ್ರಶ್ನೆ. ಏನಾದರೂ ಪಾವಗಡ ಮಾದರಿಯಲ್ಲಿ ರೈತರು ಜಮೀನು ಕೊಡಲಿಕ್ಕೆ ಮುಂದೆ ಬಂದರೆ ನಮ್ಮ ಪ್ರದೇಶದಲ್ಲಿ ಮಾಡುತ್ತೀರಾ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್: ನೀವು ಕೊಡಿ. ಬೇಕಾದಷ್ಟು ಜನರು private ನವರು ಬರುತ್ತಾರೆ, Government ನಿಂದಲ್ಲ. ಏಕೆಂದರೆ, ನಾವು Government ನಿಂದ purchase ಮಾಡುವುದಕ್ಕೆ ಕಷ್ಟವಾಗುತ್ತದೆ. Private ನವರು ಬಂದರೆ ಒಂದು ತಾಲ್ಲೂಕಿಗೆ 200 MW ಉತ್ಪಾದನೆ ಮಾಡುವುದಕ್ಕೆ ಸೀಮಿತ ಮಾಡಿದ್ದೇವೆ. ಬೇಕಾದರೆ ಜಮೀನು ಕೊಡುತ್ತಾರೆಂದು ನನಗೆ ಮಾಹಿತಿ ಕೊಟ್ಟರೆ, ಬೇಕಾದಷ್ಟು ಜನರು private individual ನವರು ಬರುತ್ತಾರೆ, we will allow them.

ಅಧ್ಯಕ್ಷರು: O.k.

**ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:**

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಹನ್ನೊಂದನೇ ಪಟ್ಟಿಯಲ್ಲಿರುವ 213 ಪ್ರಶ್ನೆಗಳ ಪೈಕಿ 108 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ-1)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

**ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:**

ಅಧ್ಯಕ್ಷರು: ಈಗ ಶೂನ್ಯ ವೇಳೆಯಲ್ಲಿ ಪಿ. ರಾಜೀವ್ ಮಾತನಾಡಿ.

(ಮಾನ್ಯ ಸದಸ್ಯರಾದ ಶ್ರೀ ಪಿ. ರಾಜೀವ್‌ರವರು ಸದನದಲ್ಲಿರಲಿಲ್ಲ)

ಶ್ರೀ ಎನ್. ಹೆಚ್. ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, ..

ಅಧ್ಯಕ್ಷರು: ಕೋನರೆಡ್ಡಿಯವರೆ, ನೀವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಕೇಳಿದ ವಿಷಯವು ಅದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

**ವಿಷಯ: ರಾಯಚೂರು ಜಿಲ್ಲೆಯ CEOರವರು ರೈತರ ಬಗ್ಗೆ ಅಮಾನುಷವಾಗಿ ನಡೆದುಕೊಂಡಿರುವ ಬಗ್ಗೆ:**

ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸಗೂರು): ಮಾನ್ಯ ಅಧ್ಯಕ್ಷರೆ, ನಮ್ಮ ರಾಯಚೂರು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿ CEO ರವರು ನಿನ್ನೆ ಒಂದು ಕುಡಿಯುವ ನೀರಿನ ಜಾಗವನ್ನು ಪರಿಶೀಲಿಸಲು ಹೋದಾಗ ರೈತರ ಹೆಗಲ ಮೇಲೆ ಕುಳಿತುಕೊಂಡು ಹೋಗಿ ಪರಿಶೀಲಿಸಿರುವುದನ್ನು ನಾವು ಟಿವಿ ಮಾಧ್ಯಮ, ಪೇಪರ್‌ನಲ್ಲಿ ನೋಡಿದ್ದೇವೆ. ನಾನು ತಮಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಆ ಅಧಿಕಾರಿ ರೈತರ ಹೆಗಲ ಮೇಲೆ ಕುಳಿತುಕೊಂಡು ಏನು ವೀಕ್ಷಣೆ ಮಾಡಿದ್ದಾರೆ, ಇಡೀ ನಮ್ಮ ರಾಜ್ಯದ ಜನತೆಗೆ, 6 ಕೋಟಿ ಕನ್ನಡಿಗರಿಗೆ ಅವಮಾನವಾಗಿದೆ. ಅಂಥ ಅಧಿಕಾರಿ ನಮ್ಮ ರಾಯಚೂರು ಜಿಲ್ಲೆಗೆ ಬೇಕಾಗಿತ್ತೇ? ತಮ್ಮ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅಂಥ ಅಧಿಕಾರಿಯನ್ನು ತಕ್ಷಣವೇ ಅಮಾನತ್ತು ಮಾಡಬೇಕು. ಆ ಅಧಿಕಾರಿಯನ್ನು ಅಮಾನತ್ತು ಮಾಡಿ 6 ಕೋಟಿ ಕನ್ನಡಿಗರ ಗೌರವವನ್ನು ಎತ್ತಿಹಿಡಿಯಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ, ದಯಮಾಡಿ ಇದರ ಬಗ್ಗೆ ತಾವು ಮಾನ್ಯ ಮುಖ್ಯಮಂತ್ರಿಯವರಿಗೆ ನಿರ್ದೇಶನ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಆ ಅಧಿಕಾರಿ ತನ್ನ boots ಹೊಲಸು ಆಗುತ್ತದೆಂದು ರೈತರ ಹೆಗಲ ಮೇಲೆ ಕುಳಿತು ಆ ಸ್ಥಳವನ್ನು ವೀಕ್ಷಣೆ ಮಾಡುವಂಥದ್ದು, ಅಷ್ಟೊಂದು ಅಹಂಕಾರ, ಅಷ್ಟೊಂದು ದುರಹಂಕಾರ ಆ ಅಧಿಕಾರಿಗೆ ಬೇಕಾಗಿತ್ತೇ? ಇಂಥ ಅಧಿಕಾರಿಯಿಂದ ಈ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸದನದ ಸದಸ್ಯರೇ ತಲೆತಗ್ಗಿಸತಕ್ಕಂಥ ವ್ಯವಸ್ಥೆ ಆಗಿದೆ. ಆದ್ದರಿಂದ, ತಕ್ಷಣ ಕ್ರಮ ತೆಗೆದುಕೊಳ್ಳಬೇಕು, ತಕ್ಷಣ ಅಮಾನತ್ತಿನಲ್ಲಿಡಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಶ್ರೀ ಮಾನಪ್ಪ ವಜ್ಜಲ್‌ರವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದೂ ಕೂಡ ಲಿಖಿತವಾಗಿ ಏನೂ ಕೊಟ್ಟ ಹಾಗೆ ಕಾಣುತ್ತಿಲ್ಲ.

ಅಧ್ಯಕ್ಷರು: ಈಗತಾನೆ ಕೊಟ್ಟಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಆ ವರದಿಯನ್ನು ತರಿಸಿ ನಾಳೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಸೋಮವಾರ ಕೊಡಿ.

ಶ್ರೀ ಮಾನಪ್ಪ ಡಿ. ವಜ್ಜಲ್: ಮಾನ್ಯ ಅಧ್ಯಕ್ಷರೆ, ವರದಿ ತರಿಸಿಕೊಳ್ಳಿ. ಮೊದಲು ಅವರನ್ನು ಅಮಾನತ್ತಿನಲ್ಲಿಡಿ.

(ಗೊಂದಲ)

ಶ್ರೀ ಮಾನಪ್ಪ ಡಿ. ವಜ್ಜಲ್: ನಾನು ಮನವಿ ಮಾಡಿಕೊಳ್ಳುವುದಿಷ್ಟೆ, ಮೊದಲು ಅವರನ್ನು ಅಮಾನತ್ತು ಮಾಡಿ, ಆಮೇಲೆ ವರದಿ ತರಿಸಿಕೊಳ್ಳಿ. ಹೊತ್ತುಕೊಂಡು ಹೋಗುತ್ತಿದ್ದುದ್ದನ್ನು ಇಡೀ ರಾಜ್ಯ ಕಣ್ಣಾರೆ ನೋಡಿದೆ. Boot ಪಾಲಿಸು ಆಗುತ್ತದೆಯೆಂದು ರೈತರ ಮೇಲೆ ಕುಳಿತುಕೊಂಡು ಹೋಗಿರುವುದನ್ನು ನೋಡಿದ್ದೀರಿ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ಇಡೀ ರಾಜ್ಯದ ಅಧಿಕಾರಿಗಳ ಪರಿಸ್ಥಿತಿ ಹೀಗಾದರೆ ಹೇಗೆ. ಈ ರೀತಿಯಾದಂತಹ ಅಧಿಕಾರಿಗಳು ಬಹಳ ಜನರು ಇದ್ದಾರೆ.

ಅಧ್ಯಕ್ಷರು: ಇದು ಬಹಳ ಅವಮಾನವೀಯ ಆದಂಥ ಒಂದು ಕೃತ್ಯ. ತಕ್ಷಣ ತಾವು DC ಕಡೆಯಿಂದ ಇವತ್ತೇ ವರದಿಯನ್ನು ತರಿಸಿಕೊಂಡು ಅದರ ಬಗ್ಗೆ ಏನು action ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಟಿ.ಬಿ. ಜಯಚಂದ್ರ : ಇವತ್ತೇ ವರದಿ ತರಿಸಿಕೊಂಡು ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಬಿ.ಬಿ.ನಿಂಗಯ್ಯ: ಅವರ ಮೇಲೆ ಸರ್ಕಾರದಿಂದ ಸರಿಯಾದ ಕ್ರಮ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಇವತ್ತೇ ವರದಿ ತರಿಸಿಕೊಂಡು ಇವತ್ತೇ ಕ್ರಮ ತೆಗೆದುಕೊಳ್ಳುತ್ತಾರೆ ಬಿಡಿ.

ಶ್ರೀ ಬಿ.ಬಿ.ನಿಂಗಯ್ಯ: ಖಂಡಿತಾ ಸಾರ್. ಯಾಕೆಂದರೆ ಅಧಿಕಾರಿಯ ಇಷ್ಟೊಂದು ದುರಹಂಕಾರದಿಂದ ರಾಜ್ಯದ ಜನತೆಗೆ ಅವಮಾನ. ಇದು ಸರ್ಕಾರಕ್ಕೇ ಅವಮಾನ.

ಶ್ರೀ ಸಿ.ಎನ್.ಬಾಲಕೃಷ್ಣ: ಇದು T.V. ಮಾಧ್ಯಮದಲ್ಲೆಲ್ಲಾ ಬಂದಿದೆ.

ಶ್ರೀ ಮಾನಪ್ಪ ಡಿ. ವಜ್ಜಲ್: ಇವತ್ತೇ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಟಿ.ಬಿ. ಜಯಚಂದ್ರ: ಇವತ್ತೇ ವರದಿ ತರಿಸುತ್ತೇವೆ. ...

(ಗೊಂದಲ)

ಅಧ್ಯಕ್ಷರು: Action ತೆಗೆದುಕೊಳ್ಳುವುದಕ್ಕೆ ಏನಾದರೊಂದು ಆಧಾರ ಬೇಕಲ್ಲ. ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು by phone ತರಿಸಿಕೊಂಡು action ಇವತ್ತೇ ಏನು ಬೇಕೋ ಮಾಡುತ್ತಾರೆ.

(ಗೊಂದಲ)

ಶ್ರೀ ಮಾನಪ್ಪ ಡಿ. ವಜ್ಜಲ್: ಪ್ರತ್ಯಕ್ಷವಾಗಿ ಕಣ್ಣಿಗೆ ಕಾಣುತ್ತಿದೆ. ಇವರಿಗೆ ಇನ್ಯಾವ ವರದಿ ಬೇಕು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೃಷ್ಣ ಬೈರೇಗೌಡ: ಎರಡು ದಿನದ ಹಿಂದೆ ಮಾಧ್ಯಮದವರ ಬಗ್ಗೆ ಇನೊಂದು ತರಹ ಮಾತನಾಡಿದ್ದೀರಿ. ಹಾಗಾದರೆ T.Vಯವರು ತೋರಿಸುವುದೆಲ್ಲಾ ಸತ್ಯವೆ? ವರದಿ ತರಿಸಿಕೊಳ್ಳಲಿ.

ಅಧ್ಯಕ್ಷರು: Please ಎಲ್ಲರು ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈ ರೀತಿ ಅವಮಾನವೀಯ ರೀತಿಯಲ್ಲಿ ನಡೆದುಕೊಳ್ಳುವಂಥ ಅಧಿಕಾರಿಗಳು ಬಹಳಷ್ಟು ಜನ ಇದ್ದಾರೆ. ಇವತ್ತು mention ಮಾಡಿದ್ದಾರೆ, ಹೇಳಿದ್ದಾರೆ ಹಾಗೂ TV ಮಾಧ್ಯಮದಲ್ಲಿ ಬಂದಿದೆ. ಈ ರೀತಿ ಅಮಾನವೀಯ ರೀತಿಯಲ್ಲಿ ನಡೆದುಕೊಳ್ಳುವಂಥ ಅಧಿಕಾರಿಗಳ ಮೇಲೆ ಸರಿಯಾದಂಥ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ನಾನು ಹೇಳುತ್ತೇನೆ, ದಯವಿಟ್ಟು ತಡ ಮಾಡುವುದಕ್ಕೆ ಹೋಗಬೇಡಿ. ಒಂದು ತಾಸಿನಲ್ಲಿ ವರದಿ ತರಿಸಿಕೊಳ್ಳಿ. TV ಯಲ್ಲಿ ಮಾಧ್ಯಮದಲ್ಲಿ ಎಲ್ಲ ಕಡೆ ಬಂದಿದೆ. ಅದನ್ನು ನೋಡಿಕೊಂಡು ಇಂಥವರ ಮೇಲೆ immediately action ತೆಗೆದುಕೊಳ್ಳಿ. ದಯವಿಟ್ಟು late ಮಾಡುವುದಕ್ಕೆ ಹೋಗಬೇಡಿ. ಅವರಿಗೊಂದು ಪಾಠ ಆಗಬೇಕು. ಇಲ್ಲದಿದ್ದರೆ ಇವರೆಲ್ಲ ಎಲ್ಲರ ಮೇಲೂ ಗುಲಾಮಗಿರಿ ನಡೆಸಿಕೊಂಡು ಹೋಗುತ್ತಾರೆ. ಅದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರೆ, ನಿಯಮದ ಪ್ರಕಾರ ನಾನು ಎಲ್ಲರಿಗೂ allow ಮಾಡಿದ್ದೇನೆ. ಈಗ ಕೊಟ್ಟಿದ್ದಾರೆ. ಅದನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ. ತಕ್ಷಣ ಮಾಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ: ಈಗಲೇ ವರದಿ ತರಿಸಿಕೊಂಡು ಸಭೆಗೆ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: Immediately ಮಾಡಿರಿ.

ಅಧ್ಯಕ್ಷರು: O.k.

ಶ್ರೀ ಎನ್.ಹೆಚ್. ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ನಿಮ್ಮದು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಶ್ರೀ ಎನ್.ಹೆಚ್. ಕೋನರೆಡ್ಡಿ: ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಒಂದು ನೊಟೀಸ್ ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು: ಅದನ್ನು ಶೂನ್ಯ ವೇಳೆಯಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನಿಮಗೆ allow ಮಾಡಿಲ್ಲ.

(ಮುಂದು)

ವಿಸ:24-03-2017 12-20 (12) ಎಂಕೆಕೆ:ವಿಜಿ

ಶ್ರೀ ಎನ್.ಹೆಚ್. ಕೋನರೆಡ್ಡಿ: ನಾನು ಶೂನ್ಯವೇಳೆಯಲ್ಲಿ ಮಾತನಾಡಲು ಅವಕಾಶ ಕೇಳಿದ್ದೇನೆ.

ಅಧ್ಯಕ್ಷರು: ನಿಮ್ಮದು ಬರುವುದಿಲ್ಲ. ನಿಮಗೆ ಕೊಟ್ಟಿಲ್ಲ.

ಶ್ರೀ ಎನ್.ಹೆಚ್. ಕೋನರೆಡ್ಡಿ: ಕೇಂದ್ರಸರ್ಕಾರದ ಆರ್ಥಿಕ ಸಚಿವರು ಸಾಲ ಮನ್ನಾ ಮಾಡುವುದಿಲ್ಲವೆಂದು ಇವತ್ತು ಹೇಳಿಕೆ ಕೊಟ್ಟಿದ್ದಾರೆ.

ಅಧ್ಯಕ್ಷರು: ಇಲ್ಲ, ಅದು ಮಾಡುವುದಕ್ಕೆ ಬರುವುದಿಲ್ಲ. ಅದನ್ನು ಶೂನ್ಯವೇಳೆಯಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನಾನೇನು allow ಮಾಡಿಲ್ಲ. ಈ ಸಭೆಯ ಮುಂದಿಡಲಾಗುವ ಕಾಗದಪತ್ರಗಳು.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು): ಈಗಾಗಲೇ ಹೇಳಿದ್ದಾರೆ. ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಅದಾಯಿತು. ಇವರು ಬೇರೆ ವಿಷಯ ಕೇಳುವುದಕ್ಕೆ ಹೋದರು. ಅದು ಬರುವುದಿಲ್ಲವೆಂದು ನಾನು ಹೇಳಿದೆ.

**ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು): ಮಾನ್ಯ ಸಭಾಧ್ಯಕ್ಷರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕ ನಿಯಂತ್ರಕರು ಮತ್ತು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2016ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಮೇಲಿನ ವರದಿಯನ್ನು (2017ನೇ ವರ್ಷದ ವರದಿ ಸಂಖ್ಯೆ-1) ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು

ಅಧ್ಯಕ್ಷರು: ವರದಿಗಳನ್ನು ಒಪ್ಪಿಸುವುದು.

ಶ್ರೀ ಎನ್.ಹೆಚ್. ಕೋನರೆಡ್ಡಿ: ನಿಯಮ ಇರಲಿ. ಇಂಥ ಗಂಭೀರವಾದ ಸಮಸ್ಯೆ ಇದೆ. ಚರ್ಚೆಗೆ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು: ಯಾರು ಬೇಕಾದರೂ ಎದ್ದು ಏನು ಬೇಕಾದರೂ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಎನ್.ಹೆಚ್. ಕೋನರೆಡ್ಡಿ: ನನಗೆ ಅವಕಾಶವೇ ಕೊಡುತ್ತಿಲ್ಲ.

ಅಧ್ಯಕ್ಷರು: ಯಾವುದಕ್ಕೆ ಅವಕಾಶ ಕೊಡಬೇಕು?

ಶ್ರೀ ಎನ್.ಹೆಚ್. ಕೋನರೆಡ್ಡಿ: ಸ್ವಲ್ಪ ಅವಕಾಶ ಕೊಡಿ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ: ರಾಜ್ಯದಲ್ಲಿ ವಿದ್ಯುತ್ . . . .ಕುಮಾರಸ್ವಾಮಿಯವರು ಪ್ರಸ್ತಾಪ ಮಾಡಿದ ಮೇಲೆ ಸದನ ಸಮಿತಿ ನೇಮಕ ಮಾಡಿದರು.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ: ಇಲ್ಲಿಯವರೆಗೆ ಅದರ ಬಗ್ಗೆ ಏನೂ ಇಲ್ಲ.

(ಗೊಂದಲ)

**ವರದಿಗಳನ್ನೊಪ್ಪಿಸುವುದು**

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ (ಉಪ ಸಭಾಧ್ಯಕ್ಷರು ಹಾಗೂ ಅಧ್ಯಕ್ಷರು, ಅರ್ಜಿಗಳ ಸಮಿತಿ): ಮಾನ್ಯ ಸಭಾಧ್ಯಕ್ಷರೆ, 2016-17ನೇ ಸಾಲಿನ ಅರ್ಜಿಗಳ ಸಮಿತಿಯ 23ನೇ ವರದಿಯನ್ನು ನಾನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಒಪ್ಪಿಸಲಾಗಿದೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಶಿವಮೂರ್ತಿ (ಅಧ್ಯಕ್ಷರು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷನಾದ ನಾನು 14ನೇ ವಿಧಾನಸಭೆಯ 2016-17ನೇ ಸಾಲಿನ ಸಮಿತಿಯ 7ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ಒಪ್ಪಿಸಲಾಗಿದೆ.

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಅಧ್ಯಕ್ಷರು, ಸರ್ಕಾರಿ ಭರವಸೆಗಳ ಸಮಿತಿ): ಮಾನ್ಯ ಅಧ್ಯಕ್ಷರೆ, ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯ 2016-17ನೇ ಸಾಲಿನ ಅಧ್ಯಕ್ಷನಾದ ನಾನು ಸಮಿತಿಯ 7ನೇ ಮತ್ತು 8ನೇ ವರದಿಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಒಪ್ಪಿಸಲಾಗಿದೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಅಧ್ಯಕ್ಷರು: ಈಗ ವಿತ್ತೀಯ ಕಾರ್ಯಕಲಾಪಗಳು

**ವಿತ್ತೀಯ ಕಾರ್ಯಕಲಾಪಗಳು**

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು): ಮಾನ್ಯ ಸಭಾಧ್ಯಕ್ಷರೆ, 2016-17ನೇ ಸಾಲಿನ ಪೂರಕ ಅಂದಾಜುಗಳನ್ನು (ಮೂರನೇ ಹಾಗೂ ಅಂತಿಮ ಕಂತು) ತಮ್ಮ ಅನುಮತಿಯೊಡನೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಅಧ್ಯಕ್ಷರು: ಕಂದಾಯ ಸಚಿವರು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ತಮಗೆ ನಮ್ಮ ಪಕ್ಷದ ವತಿಯಿಂದ ಬೆಳಗ್ಗೆ notice ಕೊಟ್ಟಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ: ತಮ್ಮ ಗಮನಕ್ಕೆ ತಂದಿದ್ದೇವೆ.

ಅಧ್ಯಕ್ಷರು: ಯಾವುದು?

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ವಿದ್ಯುತ್ ಖರೀದಿಯಲ್ಲಿ ಆದಂಥ ಅವ್ಯವಹಾರಗಳ ಬಗ್ಗೆ ವರದಿ ಮಂಡಿಸಬೇಕೆಂದು ಕೇಳಿದ್ದೇವೆ. ಸುಮಾರು 2 ವರ್ಷಗಳಿಂದ . . .

ಅಧ್ಯಕ್ಷರು: ಈಗ ಕೊಟ್ಟಿದ್ದೀರಿ, ನಾನೇನು ಮಾಡುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಇದು important ಇದೆ.

(ಗೊಂದಲ)

ಅಧ್ಯಕ್ಷರು: ಯಾವಾಗ ಬೇಕಾದರೂ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ... ಜವಾಬ್ದಾರಿ ತೆಗೆದುಕೊಳ್ಳದೆ ಮಾತನಾಡಿದರೆ ಹೇಗೆ ಆಗುತ್ತದೆ. ವರದಿಯನ್ನೂ ಇನ್ನೂ ಮಂಡಿಸಿಲ್ಲ. ವಿಳಂಬವಾಗಿದೆ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಬಿ.ಬಿ. ನಿಂಗಯ್ಯ: ರಾಜ್ಯದಲ್ಲಿ ವಿದ್ಯುತ್ ಖರೀದಿಯಲ್ಲಿ ಆದಂತಹ ಅವ್ಯವಹಾರದ ಬಗ್ಗೆ ಕುಮಾರಸ್ವಾಮಿಯವರು ಸದನದಲ್ಲಿ ಮಾತನಾಡುತ್ತಾ, ಸಮಿತಿಯನ್ನು ರಚಿಸಬೇಕೆಂದು ಹೇಳಿದಾಗ ಸಮಿತಿ ರಚಿಸಿದ್ದೀರಿ. 2 ವರ್ಷಗಳಾದರೂ ಕೂಡ ಸಮಿತಿ ವರದಿ ಕೊಟ್ಟಿಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಸದನದ ವರದಿಯನ್ನು ಇನ್ನೂ ಮಂಡಿಸಿಲ್ಲ. 2 ವರ್ಷಗಳಾಗಿದೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: 2016ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ...

(ಗೊಂದಲ)

ಶ್ರೀ ಬಿ.ಬಿ.ನಿಂಗಯ್ಯ: ಅವಧಿಯನ್ನು ವಿಸ್ತರಣೆ ಮಾಡಿಲ್ಲ. ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಸನ್ಮಾನ್ಯ ಇಂಧನ ಸಚಿವರೆ, ತಾವು ಇಂಧನ ಸದನ ಸಮಿತಿಯ ವರದಿಯನ್ನು ಕೂಡಲೇ ಸದನದಲ್ಲಿ ಮಂಡಿಸಲು ಕ್ರಮ ಕೈಗೊಳ್ಳಬೇಕೆಂದು ನಾವು ಒತ್ತಾಯಿಸುತ್ತೇವೆಂದು ಕೊಟ್ಟಿದ್ದಾರೆ. ತಾವು ಇಂಧನ ಸದನ ಸಮಿತಿಯ ವರದಿಯನ್ನು ಕೊಟ್ಟಿಲ್ಲವೆನ್ನುವುದು ಅವರ ಆಪಾದನೆ ಈಗ ಇದೆ. ಏಕೆ ಕೊಟ್ಟಿಲ್ಲವೆನ್ನುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು): ಕುಮಾರಸ್ವಾಮಿಯವರು ಕೇವಲ ಮಾತನಾಡುವುದು, Assembly ಗೆ ಬರುವುದು ಹೊರಗಡೆ ಹೋಗಿ ಮಾತನಾಡುವುದು ಮಾಡುತ್ತಿದ್ದಾರೆ. ಬಿಜೆಪಿಯವರೂ ಅಷ್ಟೇ. ಯಾರೂ official ಆಗಿ ಅವರ opinion ಅನ್ನು ಬರೆದುಕೊಡುತ್ತಿಲ್ಲ. ನನ್ನದೇ ಆದಂಥ opinion ಕೊಡಬೇಕೆಂದರೆ I am ready to give it. 30 ರವರೆಗೆ time ಇದೆ, ಕೊಟ್ಟುಬಿಡುತ್ತೇನೆ. If the opposition party.., ಸದನ ಸಮಿತಿ ಎಂದರೆ ನಾನೊಬ್ಬನೇ ಅಲ್ಲ. It comprises of all the political parties. They also have to give their views. ಅವರು ಬಂದಿದ್ದಾರೆ, ಮೀಟಿಂಗ್‌ಗೆ ಹೋಗಿದ್ದಾರೆ, documents ತೆಗೆದುಕೊಂಡು ಹೋಗಿದ್ದಾರೆ. ಇವತ್ತು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅವರ ಪಕ್ಷದ ಸದಸ್ಯರು ಯಾರಿದ್ದಾರೆ ಅವರು writing ನಲ್ಲಿ ಅವರ opinion ಏನಿದೆ ಬರೆದುಕೊಡಲಿ, ಬಿಜೆಪಿಯವರೂ ಅವರ opinion ಏನಿದೆ ಬರೆದುಕೊಡಲಿ. By 30th, I am ready to give the report. ತಮ್ಮ ಅನುಮತಿಮೇಲೆ 30ನೇ ತಾರೀಖಿನೊಳಗಡೆ report ಕೊಡಲಿಕ್ಕೆ ನಾನು ತಯಾರಿದ್ದೇನೆ. ಅದರಲ್ಲೇನೂ hijack ಮಾಡಲಿಕ್ಕೂ ಆಗುವುದಿಲ್ಲ, ಏನಿಲ್ಲ. ವಾಸ್ತವಾಂಶ ಏನಿದೆ ಅದನ್ನು ಕೊಟ್ಟುಬಿಡುತ್ತೇನೆ. ಅವರು ನನ್ನ ಮೇಲೆ accuse ಮಾಡುತ್ತಿದ್ದಾರೆ. ಶೋಭಾ ಕರಂದ್ಲಾಜೆಯವರನ್ನು ಇವರು ಬೇಕೆಂದು ರಕ್ಷಣೆ ಮಾಡುತ್ತಿದ್ದಾರೆಂದು ಕುಮಾರಸ್ವಾಮಿಯವರು ನನ್ನ ಮೇಲೆ ಗೂಬೆ ಕೂರಿಸುತ್ತಿದ್ದಾರೆ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ: ಅದನ್ನು ನೀವು clear ಮಾಡಿಬಿಡಿ.

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ: ಎರಡೂ party ಯವರು ಕೊಟ್ಟಿಲ್ಲ. ಕೊಡಲಿಲ್ಲವೆಂದರೆ ಬೇಗ ವಾಸ್ತವತೆ ಏನಿದೆ ಅದನ್ನು ಸದನದ ಮುಂದಿಡಿ.

ಶ್ರೀ ಡಿ.ಕೆ. ಶಿವಕುಮಾರ್: ಬಸವರಾಜ ಬೊಮ್ಮಾಯಿಯವರು, ನಮ್ಮ ಅಭಿಪ್ರಾಯ ತೆಗೆದುಕೊಳ್ಳದೇ ಏನೂ ಮಾಡಬೇಡಿ ಎನ್ನುತ್ತಾರೆ. ಅವರೂ writing ನಲ್ಲಿ ಕೊಡುತ್ತಿಲ್ಲ. ಕುಮಾರಸ್ವಾಮಿಯವರ ಕಾಲದ್ದು ನೀವು ಸೇರಿಸಲೇಬೇಕೆಂದು ಬೊಮ್ಮಾಯಿಯವರು ಮತ್ತು ಕಾಗೇರಿಯವರು ಬಂದು ನನ್ನ ಮೇಲೆ ಗಲಾಟೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ: ಸತ್ಯಾಸತ್ಯತೆ ಏನಿದೆ ಅದನ್ನು. . .

ಶ್ರೀ ಬಸವರಾಜ ಬೊಮ್ಮಾಯಿ: ಎಲ್ಲ proceedings ನಲ್ಲಿ ನಾವು ಭಾಗವಹಿಸಿದ್ದೇವೆ. ಕೆಲವು ಮಾಹಿತಿಗಳನ್ನು ಕೇಳಿದ್ದೇವೆ. ಆ ಮಾಹಿತಿ ಬಂದ ತಕ್ಷಣ. . .

ಅಧ್ಯಕ್ಷರು: ಎಷ್ಟು ದಿವಸ ಬೇಕು?

ಶ್ರೀ ಬಸವರಾಜ ಬೊಮ್ಮಾಯಿ: ಹಾಗಲ್ಲ, ಸಾಮಾನ್ಯವಾಗಿ ಏನಾಗುತ್ತದೆಂದರೆ, meeting ನಲ್ಲೇ ಎಲ್ಲ ಅಂತಿಮವಾಗಿ conclusion ಮಾಡುತ್ತೇವೆ. ಆದರೆ, ಅವರು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

writing ನಲ್ಲಿ ಕೊಡಿ ಎಂದು ಕೇಳಿದ್ದಾರೆ. ನಮಗೆ ಪತ್ರವನ್ನೂ ಬರೆದಿದ್ದಾರೆ. ಕೆಲವು ಮಾಹಿತಿಗಳನ್ನು ಕೇಳಿದ್ದೇವೆ, ಅದು ಬಂದ ತಕ್ಷಣ ನಾವೂ writing ನಲ್ಲಿ ಕೊಡುತ್ತೇವೆ.

ಅಧ್ಯಕ್ಷರು: ಬಂದ ತಕ್ಷಣ ಎಂದರೆ ಏನು? 3 ವರ್ಷಗಳಾಯಿತು.

ಶ್ರೀ ಬಸವರಾಜ ಬೊಮ್ಮಾಯಿ: ಕೆಲವು ಹೊಸ ವಿಷಯಗಳನ್ನು ಹೇಳಿದ್ದಾರೆ. ಮಾಹಿತಿ ಇಲ್ಲದೆ ನಾವು ಕೊಡುವುದು ತಪ್ಪಾಗುತ್ತದೆ.

ಅಧ್ಯಕ್ಷರು: ತಾವು 30ನೇ ತಾರೀಖಿನೊಳಗೆ ಕೊಡುತ್ತೀರಾ?

ಶ್ರೀ ಹೆಚ್.ಡಿ. ರೇವಣ್ಣ: ಇಂಧನ ಮಂತ್ರಿಯವರು, ಕುಮಾರಸ್ವಾಮಿಯವರು ಕೊಟ್ಟಿಲ್ಲ, ಕೊಡಬೇಕೆಂದು ಹೇಳಿದರು. ಅವರು ಕೆಲವು ದಾಖಲೆಗಳನ್ನು ಕೇಳಿದ್ದಾರೆ, ಕೊಟ್ಟಿಲ್ಲವೆಂದು . . .

ಶ್ರೀ ಡಿ.ಕೆ. ಶಿವಕುಮಾರ್: ಎಲ್ಲಾ ದಾಖಲೆ ಕೊಟ್ಟಿದ್ದೇವೆ. ಇಲ್ಲೇ Secretary ಇದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಮಂತ್ರಿಯವರು 2 ನಿಮಿಷ yield ಆಗಬೇಕು. ನಾವು ಮಾತನಾಡಲು ಬಿಡಿ. ಇಲ್ಲವಾದರೆ ನೀವು ಮಾತನಾಡಿ. ನನ್ನ ಕಾಲದ್ದು ಸೇರಿಸಿ ಮಾಡಿ ಎಂದು ನಾನೇ ಬರೆದುಕೊಟ್ಟಿದ್ದೇನೆ. ನಾನು ಮುಖ್ಯಮಂತ್ರಿಯವರಿಗೆ, ಮಾನ್ಯ ಸಭಾಧ್ಯಕ್ಷರವರಿಗೆ, ನನ್ನ ಕಾಲದ್ದೂ ಸೇರಿಸಿ ಮಾಡಿ ಎಂದು ಬರೆದುಕೊಟ್ಟಿದ್ದೇನೆ. ಯಾರಾದರೂ ಒಬ್ಬರು ಮಂತ್ರಿ ಬರೆದುಕೊಟ್ಟಿದ್ದು ಇದೆಯೇ? ವಿಧಾನಸಭೆಯ ಇತಿಹಾಸದಲ್ಲಿ ಯಾರಾದರೂ ಒಬ್ಬರು ಮಂತ್ರಿ ನನ್ನದೂ ಸೇರಿಸಿ ಮಾಡಿ ಎಂದು ಬರೆದುಕೊಟ್ಟಿದ್ದು ಇದ್ದರೆ ಬೇಕಾದರೆ ಹೇಳಲಿ. ನನ್ನದೂ ಸೇರಿಸಿ ಮಾಡಿ ಎಂದು ನಾನೂ ಬರೆದುಕೊಟ್ಟಿದ್ದೇನೆ. ಕರಡು ವರದಿ ಕೊಟ್ಟು ಒಂದು ವರ್ಷವಾಗಿದೆಯೋ, ಇಲ್ಲವೋ ಎಂದು ದಯಮಾಡಿ ಮಂತ್ರಿಯವರು ಹೇಳಲಿ. ಮಂತ್ರಿಯವರಿಗೆ ನಿಮ್ಮ Legislative Assembly ಯಿಂದ ಕರಡು ವರದಿ ತಯಾರು ಮಾಡಿ ಒಂದು ವರ್ಷವಾಗಿದೆ. ಆ ವರದಿಯನ್ನು ಇವತ್ತು ಮಂಡಿಸಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಏನು? ಅದಕ್ಕೆ ಸಂಬಂಧಪಟ್ಟಂಥ ಕಾರ್ಯದರ್ಶಿಗಳಿದ್ದಾರೆ, ಅವರು ವರದಿ ಕೊಟ್ಟು ಎಷ್ಟು ದಿವಸವಾಯಿತು ಎನ್ನುವುದನ್ನು ಹೇಳಲಿ. ಮಾನ್ಯ ಮುಖ್ಯಮಂತ್ರಿಯವರೇ ತಾವು ದಯಮಾಡಿ ಹೇಳಬೇಕಾಗುತ್ತದೆ ಅಥವಾ ಇಂಧನ ಮಂತ್ರಿಯವರಾದರೂ ಹೇಳಲಿ. ಇಲ್ಲವೆಂದರೆ, ಕಾರ್ಯದರ್ಶಿ ಯಾರಿದ್ದಾರೆ, ಕರಡು ವರದಿ



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೊಟ್ಟಿದ್ದಾರೋ, ಇಲ್ಲವೋ ಎಂದರೆ ಕರಡು ವರದಿ ಕೊಟ್ಟಿಲ್ಲ ಒಂದು ವರ್ಷವಾಗಿದೆ ಎಂದು ಹೇಳಲಿ ನೋಡೋಣ.

ಶ್ರೀ ಡಿ.ಕೆ. ಶಿವಕುಮಾರ್: ರೇವಣ್ಣನವರೆ, as a political party ನಿಮ್ಮದೇನೇನು stand ಇದೆ ಅಷ್ಟನ್ನು ನಾವು ಮಾಡುವುದೇ? ಇಲ್ಲವೇ ನೀವೇನಾದರೂ ಬರೆದುಕೊಡುತ್ತೀರಾ?

ಶ್ರೀ ಹೆಚ್.ಡಿ. ರೇವಣ್ಣ: ಬರೆದುಕೊಡುತ್ತಾರೋ, ಬಿಡುತ್ತಾರೋ ಸಂಬಂಧ ಇಲ್ಲ. 2 ವರ್ಷಗಳಾದ ಮೇಲೆ ಸದನ ಸಮಿತಿ ಎಷ್ಟು ದಿನ ಕೊಡುವುದು? ಮತ್ತೆ extension ಮಾಡಿದ್ದೀರಾ? ದಯಮಾಡಿ ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್: ಮಾಡಿದ್ದಾರೆ. 30ನೇ ತಾರೀಖಿನವರೆಗೂ time ಇದೆ.

ಶ್ರೀ ಹೆಚ್.ಡಿ. ರೇವಣ್ಣ: ದಯಮಾಡಿ ಬೇಕಾದರೆ ಕೇಳಿ. ಕರಡು ವರದಿ ಕೊಟ್ಟು ಒಂದು ವರ್ಷವಾಗಿದೆ. ಕರಡು ವರದಿ ತಯಾರು ಮಾಡಿ ಕೊಟ್ಟಿದ್ದಾರೋ, ಇಲ್ಲವೋ ಎಂದು ಬೇಕಾದರೆ ಹೇಳಲಿ.

ಶ್ರೀ ಡಿ.ಕೆ. ಶಿವಕುಮಾರ್: ಕರಡು ವರದಿ ಇದೆಯಪ್ಪ, final ವರದಿ ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಕರಡು ವರದಿ ಕೊಟ್ಟಮೇಲೆ ಮಾಡುವುದಕ್ಕೆ ಇನ್ನೇನಂತೆ?

ಶ್ರೀ ಡಿ.ಕೆ. ಶಿವಕುಮಾರ್: O.k. ನೀವು ಕೊಡುವುದಿಲ್ಲವೆಂದರೆ we will go ahead with whatever we have.

ಶ್ರೀ ಹೆಚ್.ಡಿ. ರೇವಣ್ಣ: ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ಎಂದು ಈ ಸದನಕ್ಕೆ ಹೇಳಿ.

ಅಧ್ಯಕ್ಷರು: ಆಯಿತು. 30ನೇ ತಾರೀಖಿನೊಳಗಾಗಿ ಅವರು ಕೊಡಲಿ, ಕೊಡದಿರಲಿ ನಿಮ್ಮ ಅಭಿಪ್ರಾಯವನ್ನು ನೀವು ಕೊಟ್ಟುಬಿಡಿ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, 30ನೇ ತಾರೀಖಿನವರೆಗೂ time ಕೊಟ್ಟುಬಿಡಿ. ಅವರೇನು ಕೊಡುತ್ತಾರೋ ಕೊಡಲಿ. ಬಿಜೆಪಿಯವರೂ ಅವರೇನು ಕೊಡುತ್ತಾರೋ 30ನೇ ತಾರೀಖಿನೊಳಗೆ ಕೊಡಲಿ. Within 15th, I will give the report. 15 ದಿನ ನೋಡಬೇಕಲ್ಲವೇ? ನಮಗೂ election ಇದೆ. 10ನೇ ತಾರೀಖಿನವರೆಗೂ elections ಇದೆ. 15ನೇ ತಾರೀಖು I will give the report.

ಶ್ರೀ ಹೆಚ್.ಡಿ. ರೇವಣ್ಣ: ಒಂದು ವರ್ಷವಾಯಿತು. ಇನ್ನೆಷ್ಟು ದಿನ ಬೇಕು? ಕರಡು ವರದಿಯನ್ನು ಸಭೆಯ ಮುಂದಿಡಿ. ಕರಡು ವರದಿ ಏನಿದೆ ಅದನ್ನು ಸಭೆಯ ಮುಂದೆ ಇಡುವುದಕ್ಕೆ ಹೇಳಿ, ಚರ್ಚೆ ಮಾಡೋಣ.

ಅಧ್ಯಕ್ಷರು: ನೋಡೋಣ. ಕೊನೆಯ ಅವಕಾಶ ಕೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ದಯಮಾಡಿ, ಕರಡು ವರದಿಯನ್ನು ಸಭೆಯ ಮುಂದೆ ಇಡಿಸಿ.

ಅಧ್ಯಕ್ಷರು: ಅವರು ಕೊನೆಯದಾಗಿ 15ನೇ ತಾರೀಖು last date ಕೇಳಿದ್ದಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಬೇಗ ಮಂಡಿಸಿಕೊಡಿ. ಬೇಗ ಇದನ್ನು ಮಂಡಿಸಿ.

ಅಧ್ಯಕ್ಷರು: ಇಷ್ಟೇ ದಿವಸವಾಗಿದೆ, ಇನ್ನು 15 ದಿವಸ. . .

**(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರು ಧರಣಿಗೆಂದು ಸದನದ ಬಾವಿಗೆ ಆಗಮಿಸಿದರು)**

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು): ಸದನದ ಸಮಿತಿಯಾದ ಮೇಲೆ internal ವಿಚಾರವನ್ನೆಲ್ಲವನ್ನೂ ಕೂಡ ಇಲ್ಲಿ ಸಭೆಯಲ್ಲಿ ಮಾಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು: ಬರುವುದಿಲ್ಲ. ಹೌದು.

**(ಈ ಹಂತದಲ್ಲಿ ಶ್ರೀ ಹೆಚ್.ಡಿ.ರೇವಣ್ಣನವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)**

ಶ್ರೀ ಟಿ.ಬಿ. ಜಯಚಂದ್ರ: ನೀವು ಅದರೊಳಗೇ ಚರ್ಚೆ ಮಾಡಬೇಕೇ ವಿನ: ವಿಧಾನಸಭೆಯಲ್ಲಿ ಚರ್ಚೆ ಮಾಡಿದರೇನಾಗುತ್ತದೆ? ಅದನ್ನು ವಿಧಾನಸಭೆಯಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲವೆನ್ನುವ ಕಾರಣಕ್ಕೋಸ್ಕರ ಸದನ ಸಮಿತಿ ಮಾಡುವುದು.

ಅಧ್ಯಕ್ಷರು: ಸದನ ಸಮಿತಿ ಮಾಡಿರುತ್ತಾರೆ, ಹೌದು.

ಶ್ರೀ ಟಿ.ಬಿ. ಜಯಚಂದ್ರ: ಅದನ್ನು ಸಮಿತಿಯಲ್ಲೇ ಚರ್ಚೆ ಮಾಡಬೇಕು.

ಅಧ್ಯಕ್ಷರು: ಅದು ಹೇಗೆ ನಿಮಗೆ ಗೊತ್ತಾಯಿತು? ಕರಡು ವರದಿ ಬಂದಿದೆ ಎಂದು ಹೇಗೆ ಗೊತ್ತು? ಆಯಿತು, ನಮ್ಮ ಗಮನಕ್ಕೆ ತಂದಿದ್ದೀರಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಡಿ.ಕೆ. ಶಿವಕುಮಾರ್: ಅವರು writing ನಲ್ಲಿ ಕೊಟ್ಟಿಲ್ಲ. ಆಯಿತು, 30ನೇ ತಾರೀಖಿನವರೆಗೂ time ಇದೆ. ಬಿಜೆಪಿಯವರಿಗೂ ಹೇಳಿದ್ದೇವೆ. ಅವರಿಗೂ notice ಕೊಟ್ಟಿದ್ದೇವೆ. ಕೊಡಿ ಎಂದು ಹೇಳಿದ್ದೇವೆ. 15ನೇ ತಾರೀಖು I will release the report.

(ಗೊಂದಲ)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು) ಈಗ ಸಂಬಂಧಪಟ್ಟಂಥ ಮಂತ್ರಿಯವರು ಎರಡೂ ಪಕ್ಷಗಳವರಿಗೆ notice ಕೊಟ್ಟಿದ್ದೇನೆಂದು ಹೇಳುತ್ತಿದ್ದಾರೆ. Assembly ಮುಗಿದ ತಕ್ಷಣ bye election ಇದೆ. Election ಗೆ ಹೋಗಬೇಕು. 15ನೇ ತಾರೀಖು ಕೊಡುತ್ತೇನೆಂದು ಹೇಳಿದ್ದಾರೆ. 15ನೇ ತಾರೀಖು ಕೊಡುತ್ತಾರೆ. ಕೊಡುತ್ತೇವೆಂದ ಮೇಲೆ ಕೊಡದೇ ಹೋದರೆ ಎಂದರೆ ಹೇಗೆ? ನೂರಕ್ಕೆ ನೂರು ಕೊಡುತ್ತೇವೆ.

ಅಧ್ಯಕ್ಷರು: 15ನೇ ತಾರೀಖು ಕೊಡಬೇಕು.

**(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)**

ಅಧ್ಯಕ್ಷರು: ಆಯಿತು, 15ನೇ ತಾರೀಖು ಕೊಡುತ್ತಾರೆ.

ಶ್ರೀ ಶಿವರಾಜ್ ಎಸ್. ತಂಗಡಗಿ: ನಿನ್ನೆ ಕಂದಾಯ ಇಲಾಖೆಯ ಬಗ್ಗೆ ಮಾತನಾಡಿದಂಥ Bill ಅನ್ನು pass ಮಾಡಿ.

ಅಧ್ಯಕ್ಷರು: ಅದನ್ನು pass ಮಾಡಲಿಕ್ಕಾಗಿಯೇ ಬಂದಿದೆ. Agenda ದಲ್ಲೂ ಇದೆ. ಕಂದಾಯ ಸಚಿವರನ್ನು ಕರೆಯಿರಿ ಎಂದು ಹೇಳಿದೆ.

ಶ್ರೀ ಪಿ.ಎಂ. ಅಶೋಕ್ (Govt. Chief Whip): Council ನಲ್ಲಿದ್ದಾರೆ ಬರುತ್ತಾರೆ.

ಅಧ್ಯಕ್ಷರು: Council ನಲ್ಲಿದ್ದಾರಂತೆ ಬರುತ್ತಾರೆ. ಬಂದ ಕೂಡಲೇ Bill ತೆಗೆದುಕೊಂಡು ಯಾವುದೇ ಪ್ರಸಂಗವಾದರೂ ಇವತ್ತು ಅದನ್ನು pass ಮಾಡೋಣ.

ಶ್ರೀ ಕೆ. ಶಿವಮೂರ್ತಿ: ಮಾನ್ಯ ಮುಖ್ಯಮಂತ್ರಿಯವರು ಇಲ್ಲೇ ಇದ್ದಾರೆ.

ಶ್ರೀ ಪಿ.ಎಂ. ಅಶೋಕ್: ಅವರು ಆಗುವುದಿಲ್ಲ.

ಅಧ್ಯಕ್ಷರು: ಇಲ್ಲ, ಬರುತ್ತಾರೆ.

ಶ್ರೀ ಶಿವರಾಜ್ ಎಸ್.ತಂಗಡಗಿ: ಅವರನ್ನು ಬರುವುದಕ್ಕೆ ಹೇಳಿ ಸಾರ್.



ತಿದ್ದುಪಡಿಯಾಗದ /Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು: ಹೇಳಿ ಕಳುಹಿಸಿದ್ದೇನೆ, ಬರುತ್ತಾರೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: Business ನಲ್ಲಿ ಅದು list ಆಗಿದೆ.

ಅಧ್ಯಕ್ಷರು: ಶಿವಮೂರ್ತಿಯವರೆ, ಬರುವುದಕ್ಕೆ ಹೇಳಿ ಕಳುಹಿಸಿದ್ದೇನೆ, ಬರುತ್ತಾರೆ. ಬಂದಕೂಡಲೇ ಆ Bill ಅನ್ನು ತೆಗೆದುಕೊಂಡು pass ಮಾಡೋಣ.

ಶ್ರೀ ಕೆ. ಶಿವಮೂರ್ತಿ: ಸಾರ್, ಈಗಲೇ ಕರೆಸಿ.

ಅಧ್ಯಕ್ಷರು: ಕರೆಸುವುದಕ್ಕೆ ಹೇಳಿಕಳುಹಿಸಿದ್ದೇನೆ. ಬರುತ್ತಾರೆ.

ಶ್ರೀ ಪಿ.ಎಂ. ಅಶೋಕ್: ಬರುತ್ತಿದ್ದಾರೆ.

ಶ್ರೀ ಕೆ. ಶಿವಮೂರ್ತಿ: ಇದು ಪ್ರತಿಸಲ ಮುಂದೆ ಹೋಗುತ್ತಿದೆ.

ಅಧ್ಯಕ್ಷರು: ಇಲ್ಲ. ಮುಂದೆ ಹೋಗಲು allow ಮಾಡುವುದಿಲ್ಲ. ಇವತ್ತು ಆಗುತ್ತದೆ.

ಶ್ರೀ ಕೆ. ಶಿವಮೂರ್ತಿ: ಇವತ್ತು ದಯವಿಟ್ಟು ಆಗಲಿ.

ಅಧ್ಯಕ್ಷರು: ಇವತ್ತು ಯಾವುದೇ ಪ್ರಸಂಗವಿದ್ದರೂ ಆಗುತ್ತದೆ. ಕರೆಯುವುದಕ್ಕೆ ಕಳುಹಿಸಿದ್ದೇನೆ, ಬರುತ್ತಾರೆ.

ಶ್ರೀ ಎನ್.ಹೆಚ್. ಕೋನರೆಡ್ಡಿ: ನನ್ನದೊಂದು ಶೂನ್ಯವೇಳೆಯ ವಿಷಯವಿದೆ.

ಅಧ್ಯಕ್ಷರು: ಯಾವುದು? ನಿಮ್ಮ ಶೂನ್ಯವೇಳೆಯಲ್ಲಿನ ವಿಷಯ ಬರುವುದಿಲ್ಲ.

ಶ್ರೀ ಅಶೋಕ್ ಖೇಣಿ: ಇದು budget session ಇದೆ. ನಾನು ಬಜೆಟ್ ಮೇಲೆ one minute ಸಹ ಮಾತನಾಡಿಲ್ಲ.

ಅಧ್ಯಕ್ಷರು: ಬಜೆಟ್ ಮೇಲೆ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಅಶೋಕ್ ಖೇಣಿ: ನಾಳೆ, ನಾಡಿದ್ದು ಅಧಿವೇಶನ extend ಮಾಡಿ. We need to discuss about the budget and very important issues.

ಅಧ್ಯಕ್ಷರು: You can discuss whole day. Today is your chance.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಶ್ರೀ ಅಶೋಕ್ ಖೇಣಿ: Monday ಅವರು answer ಮಾಡುತ್ತಾರೆ. Session ಅನ್ನು ನಾಳೆಗೆ extend ಮಾಡಿ.

ಅಧ್ಯಕ್ಷರು: Entire day is only for discussion ಎಂದು ಇಟ್ಟಿದ್ದೇವೆ.

SRI ASHOK KHENY: Why should rest of the state sacrifice because 2 seats in Mysore are going for bye-election. Bye-election ಆಗಲಿ. But we need rest of the 224 …

ಅಧ್ಯಕ್ಷರು: ಈಗ 2017-18ನೇ ಸಾಲಿನ ಆಯವ್ಯಯದ ಅಂದಾಜುಗಳ ಮೇಲೆ ಚರ್ಚೆ ಮುಂದುವರಿಯುತ್ತದೆ. ಖೇಣಿಯವರು ಎರಡು ನಿಮಿಷ ಮಾತನಾಡುತ್ತಾರಂತೆ. ಅದಾದಮೇಲೆ ನಿಮಗೇ ಅವಕಾಶ ಕೊಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಸಾರ್, ನಾನು ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು: ಅವರು 5 ನಿಮಿಷ ಮಾತನಾಡುತ್ತಾರಂತೆ. You take much time. That is why I am telling you. ಖೇಣಿಯವರೆ, ಮಾತನಾಡಿ.

ಶ್ರೀ ಅಶೋಕ್ ಖೇಣಿ: ಬಜೆಟ್ ಮೇಲೆ ಏನೂ discussion ಆಗುತ್ತಿಲ್ಲ. Can I submit the copies to you.

(ಮುಂದು)

24-03-2017-(13)-12-30-ಎಸ್ಕೆ-ಸಿಪಿ

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಅವರು ಮಾತನಾಡುವುದಿಲ್ಲವಂತೆ, ಅವರು ಮಾತನಾಡುವ ವಿಷಯವನ್ನೆಲ್ಲಾ ತಮಗೆ ಅರ್ಪಿಸುತ್ತಿದ್ದಾರೆ. ಹೀಗಾಗಿ ಬೊಮ್ಮಾಯಿಯವರು ಮಾತನಾಡುತ್ತಾರೆ.

ಅಧ್ಯಕ್ಷರು : ತಾವು ಈಗ ಮಾತನಾಡುವುದಿಲ್ಲವೆ? ಆಯಿತು ಬಿಡಿ.



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಅಶೋಕ ಖೇಣಿ : Discussion ಯಾವಾಗ ಇದೆ?

(ಗೊಂದಲ)

ಅಧ್ಯಕ್ಷರು : ಈಗ ನೀವೇ ಮಾತನಾಡಿ.

ಶ್ರೀ ಅಶೋಕ ಖೇಣಿ : ಕೊಡಿ ಕೊಡಿ, ನಾನು ಈಗ ಕೊಟ್ಟಿರುವ copy ಕೊಡಿ.

ಅಧ್ಯಕ್ಷರು : ನೀವು ಮಾತನಾಡುತ್ತೀರೋ ಇಲ್ಲವೋ? Mr. Kheny whether you want to talk on budget today?

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮ್ಮ ಮಾತು ಕೇಳುತ್ತಿಲ್ಲ.

ಅಧ್ಯಕ್ಷರು : ಹೋಗಲಿ ಬಿಡಿ. ಬೊಮ್ಮಾಯಿರವರೇ ಪ್ರಾರಂಭಿಸಿ.

ಶ್ರೀ ಅಶೋಕ ಖೇಣಿ : ಬಜೆಟ್ ಮೇಲೆ ಈಗ ಮಾತನಾಡಬಹುದೇ?

(ಗೊಂದಲ)

ಅಧ್ಯಕ್ಷರು : ಬಜೆಟ್ ಮೇಲೆ ಮಾತನಾಡುತ್ತೇನೆಂದರೆ ಮಾತನಾಡಿ ಎಂದು ಹೇಳಿದ್ದೇನೆ.

ಶ್ರೀ ಬಸವರಾಜ್ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು 2017-18ರ ಬಜೆಟ್ ಮಂಡಿಸಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಬಜೆಟ್ ಮೇಲೆ ಅವರು ಎನು ಬೇಕಾದರೂ ಮಾತನಾಡಲಿ.

ಶ್ರೀ ಸಿದ್ದರಾಮಯ್ಯ : ಅವರು ಆ ರೀತಿ ಬರೆದು ಕೊಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಹೌದು ಅವರು ಆ ರೀತಿ ಬರೆದು ಕೊಡುವುದಕ್ಕೆ ಬರುವುದಿಲ್ಲ. ಬಜೆಟ್ ಮೇಲೆ ಮಾತನಾಡಿ ಎಂದು ಹೇಳಿದೆ. ನೀವು ಇಲ್ಲ ಎಂದರೆ ಬೊಮ್ಮಾಯಿರವರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರು ಆ ರೀತಿ ಬರೆದು ಕೊಡುವುದಕ್ಕೆ ಬರುವುದಿಲ್ಲ. Mr.Kheny, whatever you want to say, you please say.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು : ಆಯಿತು ಆಮೇಲೆ ನಿಮಗೆ ಅವಕಾಶ ಕೊಟ್ಟಾಗ ಹೇಳಿ, ಈಗ ತಾವು ಕುಳಿತುಕೊಳ್ಳಿ. ಆಮೇಲೆ ಅವಕಾಶ ಕೊಡುತ್ತೇನೆ ತಾವು ಕುಳಿತುಕೊಳ್ಳಿ. ಈಗ ನಾನು ಬೊಮ್ಮಾಯಿರವರನ್ನು ಕರೆದಿದ್ದೇನೆ ಅವರು ಈಗ ಮಾತನಾಡುತ್ತಾರೆ.

ಶ್ರೀ ಎನ್.ಹೆಚ್.ಕೋನರೆಡ್ಡಿ : ಬೊಮ್ಮಾಯಿರವರು ಮಾತನಾಡಲಿ, ನಾನು ಶೂನ್ಯವೇಳೆಯಲ್ಲಿ ಕೊಟ್ಟಿದ್ದು ಬರುತ್ತದೆಯೋ ಇಲ್ಲವೋ?

(ಗೊಂದಲ)

ಅಧ್ಯಕ್ಷರು : ನಿಮ್ಮದು ಯಾವ ವಿಷಯ ಇದೆ?

ಶ್ರೀ ಎನ್.ಹೆಚ್.ಕೋನರೆಡ್ಡಿ : ಕೇಂದ್ರ ಸರ್ಕಾರದ ಆರ್ಥಿಕ ತಜ್ಞರು ಸಾಲ ಮನ್ನಾ ಮಾಡುವುದಿಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ ಅದು ಶೂನ್ಯವೇಳೆಯಲ್ಲಿ ಬರುತ್ತದೆಯೋ ಇಲ್ಲವೋ?

ಅಧ್ಯಕ್ಷರು : ಅದು ಶೂನ್ಯವೇಳೆಯಲ್ಲಿ ಬರುವುದಿಲ್ಲ ಅದಕ್ಕೆ ಬೇರೆ notice ಕೊಡಿ. ಬೇರೆ ರೂಪದಲ್ಲಿ ಸೋಮವಾರ ತೆಗೆದುಕೊಂಡು ಬನ್ನಿ.

(ಗೊಂದಲ)

ಶ್ರೀ ಶಿವರಾಜ್ ಎಸ್.ತಂಗಡಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿರವರೇ ಒಂದು second. ಮಾನ್ಯ ಅಧ್ಯಕ್ಷರೆ, ದಯವಿಟ್ಟು ಆ bill ತೆಗೆದುಕೊಳ್ಳಿ.

ಅಧ್ಯಕ್ಷರು : ಬೊಮ್ಮಾಯಿರವರೇ ಒಂದು ನಿಮಿಷ ಕುಳಿತುಕೊಳ್ಳಿ. No, No ಈಗ ಒಂದು ನಿಮಿಷ ಕುಳಿತುಕೊಳ್ಳಿ. Please ಕುಳಿತುಕೊಳ್ಳಿ. ಈಗ ವಿಧೇಯಕಗಳನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ-2016. ಈಗಾಗಲೇ ಚರ್ಚೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಒಂದು ಸಣ್ಣ ತಿದ್ದುಪಡಿ ಮಾಡಬೇಕು ಎನ್ನುವ ಉದ್ದೇಶದಿಂದ ನಿನ್ನೆ ತೆಗೆದುಕೊಂಡಿದ್ದೆ. ಇದರ ಜನುಮದಾತರಾದಂಥ ನಮ್ಮ ಶಿವಮೂರ್ತಿಯವರು ಈಗ ಇದು ಆಗಲೇಬೇಕೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಹೌದು, ಆಯಿತು ಎಲ್ಲರೂ ಸೇರಿ ಮಾಡಿ ಬಿಡೋಣ ಬಿಡಿ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕಾಗೋಡು ತಿಮ್ಮಪ್ಪ : ನಾನು ಏಕೆ ಹೇಳುತ್ತಿದ್ದೇನೆಂದರೆ, ಭೂ ಸುಧಾರಣೆಗಳ ಕಾನೂನನ್ನು ನಾವು ತಂದಾಗ Section 48 ನ್ನು .,

ಶ್ರೀ ಜಗದೀಶ್ ಶೆಟ್ಟರ್ : Section 38.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಅಲ್ಲ ಸ್ವಲ್ಪ ತಾಳಿ. ಒಂದು concept ನ್ನು develop ಮಾಡಿದೆವು. Land held by or in possession is vested with the Government, same principle ಇಲ್ಲಿ ಮಾಡೋಣ ಅಂತ. ಅವರೇನು ಮಾಡಿದರು ಎಂದರೆ 79 ನಲ್ಲಿ ಇದೆ 38 ಗೆ ಒಂದು ತಿದ್ದುಪಡಿಯಾಗಿ ಕೊಟ್ಟಿದ್ದಾರೆ. ಅದು ಇವತ್ತಿನವರೆಗೆ ಜಾರಿಗೆ ಬಂದಿಲ್ಲ. ಅದನ್ನೇ ಇಟ್ಟುಕೊಂಡರೆ, ನಾನು ಇದನ್ನು ಏಕೆ ಹೇಳುತ್ತೇನೆಂದರೆ, ಇವರೆಲ್ಲಾ ಬಡವರಿರುತ್ತಾರೆ, 79 ನಿಂದ ಇರಬೇಕೆಂದರೆ ಅದಕ್ಕೆ ದಾಖಲೆ ಕೊಡಬೇಕು, ಎಲ್ಲಿಂದ ತರುತ್ತೀರಿ? ನನಗೆ ಒಂದು ನಿದರ್ಶನ ಇರುತ್ತದೆ. ಕಡಿದಾಳ್ ಮಂಜಪ್ಪನವರು Inam Abolition ಕಾಯಿದೆ ತಂದರು. ಅದರಲ್ಲಿ ಒಂದು Khadim tenant, permanent tenant, alternate tenant, quasi permanent tenant ಇತ್ತು. Quasi permanent tenantಗೆ ಹಕ್ಕು ಪತ್ರ ಸಿಕ್ಕಬೇಕಾದರೆ 1947 ಕ್ಕಿಂತ 6 ವರ್ಷದ ಹಿಂದೆ ಮಾಡಿರಬೇಕು. ಎಲ್ಲಿ ದಾಖಲೆ ತರುತ್ತೀರಿ? ಅದಕ್ಕೆ ನಾನು ಈ Act ಗೆ ಇದನ್ನು ತಂದಿದ್ದೇನೆ. ಈ Act ಬಂದ ದಿವಸ ಯಾರ್‍ಯಾರು ಸ್ವಾಧೀನದಲ್ಲಿದ್ದಾರೆ ಅವರೆಲ್ಲರಿಗೂ ಕೂಡ ownership ಕೊಡುವ ದೃಷ್ಟಿಯಿಂದ ನಾನು ಇದನ್ನು ಮಾಡಿರುವುದು. ಬೇರೆ ದೃಷ್ಟಿಯಿಂದ ಅಲ್ಲ. ಅದಕ್ಕೆ ನಾನು ನಿನ್ನೆ ಎಲ್ಲಾ ಹೇಳಿ draft ಮಾಡಿಕೊಂಡು ಬನ್ನಿ ಎಂದು ಹೇಳಿದರೆ, ಅಪ್ಪ ಸತ್ತು ಹೋಗಿದ್ದಾನೆಂದು ಅವನು ಹೋದನಂತೆ, ಅವ್ವ ಸತ್ತು ಹೋಗಿದ್ದಾನೆಂದು ಇವನು ಎಲ್ಲೋ ಹೋದನಂತೆ ಹೀಗೆ ಆಗಿದೆ. ಇದನ್ನೇ ಮಾಡುವುದಾದರೆ ಹೀಗೆ ಮಾಡಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಅದು ಬರಲಿ ತಾಳಿ ಸಂಜೆ ತೆಗೆದುಕೊಳ್ಳೋಣ.

ಶ್ರೀ ಕಾಗೋಡು ತಿಮ್ಮಪ್ಪ : ಏಕೆಂದರೆ, 38 ಗೆ, ವಿರೋಧ ಪಕ್ಷದ ನಾಯಕರೇ ತೀರ್ಮಾನವಾಗಿದೆಯೋ ಇಲ್ಲವೋ ಇವತ್ತಿನವರೆಗೆ ಜಾರಿಗೆ ಕೊಟ್ಟಿದ್ದೇವೆಯೆ? ಮೊದಲೇ ಇದನ್ನು ಮಾಡಿದ್ದು ಅದಕೋಸ್ಕರ ಅಷ್ಟೆ ಸಣ್ಣ ತಿದ್ದುಪಡಿ.

ಅಧ್ಯಕ್ಷರು : ಈಗ ಇದಕ್ಕೆ amendment ಮಾಡುತ್ತೀರೋ? ಇದನ್ನು move ಮಾಡುತ್ತೀರೋ ಹೇಗೆ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : Move ಮಾಡಿಯಾಗಿದೆ.

ಅಧ್ಯಕ್ಷರು : Move ಮಾಡಿಯಾಗಿದೆ, ಈಗ ಚರ್ಚೆ ಮಾಡಿ, pass ಮಾಡುತ್ತೀರಾ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಹೌದು.

(ಗೊಂದಲ)

ಅಧ್ಯಕ್ಷರು : ಮಾಡಿ. O.k.,

ಶ್ರೀ ಕಾಗೋಡು ತಿಮ್ಮಪ್ಪ : ನಿನ್ನೆ move ಆಗಿದೆ.

ಅಧ್ಯಕ್ಷರು : Move ಆಗಿದೆ ಪರ್ಯಾಲೋಚನೆಯಾಗಿದೆ ಚರ್ಚೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ನಿನ್ನೆ ಪರ್ಯಾಲೋಚನೆಯಾಗಿದೆ, ಈಗ ಏನೆಂದರೆ move ಮಾಡಿ Pass ಮಾಡುವುದಷ್ಟೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅದೇ ಇಲ್ಲಿ ತಾವು ಏನು ಖಂಡ 2 ಸೇರಿಸಿದ್ದೀರಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ತಿದ್ದುಪಡಿಯೊಂದಿಗೆ pass ಮಾಡುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಿದ್ದುಪಡಿಯೊಂದಿಗೆ, ಲಂಬಾಣಿ ತಾಂಡಾ, ಗೊಲ್ಲರ ಹಟ್ಟಿ, ಅವೆಲ್ಲಾ ಸೇರಿಸಿ specific ಆಗಿ ಇನ್ನೂ ಕೆಲವು ಹೆಸರುಗಳನ್ನು ಸೇರಿಸಬೇಕೆಂದು ಹೇಳಿದ್ದೀರಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಶ್ರೀ ಕಾಗೋಡು ತಿಮ್ಮಪ್ಪ : ಅದೆಲ್ಲಾ ಸೇರಿಸಿ 1979 ನಲ್ಲಿ ಸ್ವಾಧೀನದಲ್ಲಿರುವುದನ್ನು ತೆಗೆದು ಬಿಡಿ ಎನ್ನುವುದು ಮಾತ್ರ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬೇರೆ ಬೇರೆಯದು ನಮ್ಮದು., ಗೌಳಿಯೂ ಸೇರಿಸಬೇಕು.

ಶ್ರೀ ಕೆ.ಜಿ.ಬೋಪಯ್ಯ : 2016 amendment Act ರಲ್ಲಿ ಆಗಬೇಕು.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಆವತ್ತು ಆ ಕಾನೂನು ಮಾಡಿದ್ದರಿಂದ ಆದನ್ನು ಸೇರಿಸಿದ್ದರು.

ಶ್ರೀ ಕೆ.ಜಿ.ಬೋಪಯ್ಯ : ಈಗ ತಾವು ಸೇರಿಸಿದ್ದೀರಲ್ಲಾ ಅದು ಆಗಬೇಕು.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಇವತ್ತು ಅವನು ಸ್ವಾಧೀನದಲ್ಲಿದ್ದರೆ ಅವನಿಗೆ ಕೊಡುವ ದೃಷ್ಟಿಯಿಂದ ಮಾಡಿರುವುದು.

ಅಧ್ಯಕ್ಷರು : O.k.,

(ಗೊಂದಲ)

**ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ 2016**

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2016 ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂಬು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ:2 ಕ್ಕೆ ತಿದ್ದುಪಡಿ:-



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು) : ದಿನಾಂಕ:22-03-2017 ರಂದು ಪತ್ರ ಸಂಖ್ಯೆ: ಸಂವ್ಯಶಾಇ 54 ಶಾಸನ 2016ರಲ್ಲಿ ನೀಡಿದ ತಿದ್ದುಪಡಿಯನ್ನು ನಾನು ಹಿಂದಕ್ಕೆ ಪಡೆದು ಈಗ ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2016ಕ್ಕೆ (2016ರ ಕರ್ನಾಟಕ ವಿಧಾನ ಸಭೆ ವಿಧೇಯಕ ಸಂಖ್ಯೆ:37) ಈ ಮುಂದಿನ ತಿದ್ದುಪಡಿಯನ್ನು ತರುವ ನನ್ನ ಉದ್ದೇಶವನ್ನು ಈ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ, ಎಂದರೆ

ಖಂಡ-2

ಸದರಿ ವಿಧೇಯಕದಲ್ಲಿ, 2ನೇ ಖಂಡದಲ್ಲಿ, ಸೇರಿಸಲು ಉದ್ದೇಶಿಸಿರುವ 38ಎ ಪ್ರಕರಣದಲ್ಲಿ-

(I) (1) ನೇ ಉಪ ಪ್ರಕರಣಕ್ಕೆ, ವಿವರಣೆಯನ್ನು ಹೊರತುಪಡಿಸಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ-

" (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016ರ ಪ್ರಾರಂಭದ ದಿನಾಂಕದಂದು ಲಂಬಾಣಿ ತಾಂಡ, ಗೊಲ್ಲರಹಟ್ಟಿ, ಹಡ್ಡರಹಟ್ಟಿ, ಕುರುಬರಹಟ್ಟಿ, ನಾಯಕರ ಹಟ್ಟಿ, ಮಜಾರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲೋನಿಯಂಥ ದಾಖಲಿಸಿಲ್ಲದ ಜನವಸತಿಗಳಲ್ಲಿ ಅಥವಾ ನಿಯಮಿಸಲಾದ ವಿಧಾನದಲ್ಲಿ ಸರ್ವೇ ನಂಬರುಗಳು ಮತ್ತು ಗಡಿಗಳನ್ನು ನಿರ್ದಿಷ್ಟಪಡಿಸಿ, ಜಿಲ್ಲಾಧಿಕಾರಿಯು ಹಾಗೆ ಅಧಿಸೂಚಿಸಿದ ಆ ಗ್ರಾಮದ ಕ್ಷೇತ್ರ ವ್ಯಾಪ್ತಿಯೊಳಗೆ ಬರುವ ಯಾವುದೇ ಅಂಥ ಇತರ ದಾಖಲಿಸಿಲ್ಲದ ಜನವಸತಿಗಳಲ್ಲಿ, ಕೃಷಿ ಕಾರ್ಮಿಕನು ಯಾವುದೇ ಗ್ರಾಮದಲ್ಲಿ ತನಗೆ ಸೇರಿರದ ಭೂಮಿಯಲ್ಲಿರುವ ವಾಸದ ಮನೆಯಲ್ಲಿ ಸಾಮಾನ್ಯವಾಗಿ ವಾಸಿಸುತ್ತಿರುವಲ್ಲಿ ಮತ್ತು ಅಂಥ ವಾಸದ ಮನೆಯನ್ನು ಅಥವಾ ವಾಸದ ಮನೆಗಳನ್ನು ಅದು ಇರುವ ನಿವೇಶನದ ಸಹಿತವಾಗಿ ಮತ್ತು ಅದಕ್ಕೆ ನಿಕಟವಾಗಿ ತಾಗಿಕೊಂಡಿರುವ ಹಾಗೂ ಅದರ ಅನುಭೋಗಕ್ಕೆ ಅವಶ್ಯವಾಗಿರುವ ಭೂಮಿಯು, ಜಿಲ್ಲಾಧಿಕಾರಿಯು ಹೊರಡಿಸಿದ ಅಂಥ ಅಧಿಸೂಚನೆಯ ದಿನಾಂಕದಂದು, ಎಲ್ಲಾ ಉಪಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತಗೊಳ್ಳತಕ್ಕದ್ದು ಮತ್ತು ಕೃಷಿ ಕಾರ್ಮಿಕನು ಅದರ ಮಾಲೀಕನಾಗಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು ", ಮತ್ತು

(II) (2) ನೇ ಉಪ ಪ್ರಕರಣದಲ್ಲಿ " ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016ರ ಪ್ರಾರಂಭದ " ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ "(1)ನೇ ಉಪಪ್ರಕರಣದ ಅಡಿಯಲ್ಲಿ ಜಿಲ್ಲಾಧಿಕಾರಿಯು ಹೊರಡಿಸಿದ ಅಧಿಸೂಚನೆಯ" ಎಂಬ ಅಂಕಿಗಳು, ಆವರಣ ಚಿಹ್ನೆಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,



ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಸದರಿ ವಿಧೇಯಕದಲ್ಲಿ, 2ನೇ ಖಂಡದಲ್ಲಿ, ಸೇರಿಸಲು ಉದ್ದೇಶಿಸಿರುವ 38ಎ ಪ್ರಕರಣದಲ್ಲಿ-

(I) (1) ನೇ ಉಪ ಪ್ರಕರಣಕ್ಕೆ, ವಿವರಣೆಯನ್ನು ಹೊರತುಪಡಿಸಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ-

" (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016ರ ಪ್ರಾರಂಭದ ದಿನಾಂಕದಂದು ಲಂಬಾಣಿ ತಾಂಡ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರಹಟ್ಟಿ, ನಾಯ್ಕರ ಹಟ್ಟಿ, ಮಜಾರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲೋನಿಯಂಥ ದಾಖಲಿಸಿಲ್ಲದ ಜನವಸತಿಗಳಲ್ಲಿ ಅಥವಾ ನಿಯಮಿಸಲಾದ ವಿಧಾನದಲ್ಲಿ ಸರ್ವೇ ನಂಬರುಗಳು ಮತ್ತು ಗಡಿಗಳನ್ನು ನಿರ್ದಿಷ್ಟಪಡಿಸಿ, ಜಿಲ್ಲಾಧಿಕಾರಿಯು ಹಾಗೆ ಅಧಿಸೂಚಿಸಿದ ಆ ಗ್ರಾಮದ ಕ್ಷೇತ್ರ ವ್ಯಾಪ್ತಿಯೊಳಗೆ ಬರುವ ಯಾವುದೇ ಅಂಥ ಇತರ ದಾಖಲಿಸಿಲ್ಲದ ಜನವಸತಿಗಳಲ್ಲಿ, ಕೃಷಿ ಕಾರ್ಮಿಕನು ಯಾವುದೇ ಗ್ರಾಮದಲ್ಲಿ ತನಗೆ ಸೇರಿರದ ಭೂಮಿಯಲ್ಲಿರುವ ವಾಸದ ಮನೆಯಲ್ಲಿ ಸಾಮಾನ್ಯವಾಗಿ ವಾಸಿಸುತ್ತಿರುವಲ್ಲಿ ಮತ್ತು ಅಂಥ ವಾಸದ ಮನೆಯನ್ನು ಅಥವಾ ವಾಸದ ಮನೆಗಳನ್ನು ಅದು ಇರುವ ನಿವೇಶನದ ಸಹಿತವಾಗಿ ಮತ್ತು ಅದಕ್ಕೆ ನಿಕಟವಾಗಿ ತಾಗಿಕೊಂಡಿರುವ ಹಾಗೂ ಅದರ ಅನುಭೋಗಕ್ಕೆ ಅವಶ್ಯವಾಗಿರುವ ಭೂಮಿಯು, ಜಿಲ್ಲಾಧಿಕಾರಿಯು ಹೊರಡಿಸಿದ ಅಂಥ ಅಧಿಸೂಚನೆಯ ದಿನಾಂಕದಂದು, ಎಲ್ಲಾ ಉಪಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತಗೊಳ್ಳತಕ್ಕದ್ದು ಮತ್ತು ಕೃಷಿ ಕಾರ್ಮಿಕನು ಅದರ ಮಾಲೀಕನಾಗಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು ", ಮತ್ತು

(II) (2) ನೇ ಉಪ ಪ್ರಕರಣದಲ್ಲಿ, " ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016ರ ಪ್ರಾರಂಭದ " ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ "(1) ನೇ ಉಪಪ್ರಕರಣದ ಅಡಿಯಲ್ಲಿ ಜಿಲ್ಲಾಧಿಕಾರಿಯು ಹೊರಡಿಸಿದ ಅಧಿಸೂಚನೆಯ" ಎಂಬ ಅಂಕಿಗಳು, ಆವರಣ ಚಿಹ್ನೆಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ.

,

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಅಧ್ಯಕ್ಷರು : ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸುವುದು.

ಅಂಗೀಕಾರ ಪ್ರಸ್ತಾವ

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 2016ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕಕ್ಕೆ ತಿದ್ದುಪಡಿಯನ್ನು ಸೇರಿಸಿಕೊಂಡು ಈ ವಿಧೇಯಕವನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.

ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

2016ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಗಳೊಂದಿಗೆ ಈ ಸಭೆಯು ಅಂಗೀಕರಿಸಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

**ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ತಿದ್ದುಪಡಿಗಳೊಂದಿಗೆ ಅನುಮೋದನೆ ದೊರಕಿದೆ**

ಶ್ರೀ ಪಿ.ರಾಜೀವ್ (ಕುಡಚಿ) : ಮಾನ್ಯ ಅಧ್ಯಕ್ಷರೆ, ನಾನೇನು ಮಾತನಾಡುವುದಿಲ್ಲ, ಒಳ್ಳೆಯ ತಿದ್ದುಪಡಿಯನ್ನು ಈ ಸದನ ಅನುಮೋದನೆ ಕೊಟ್ಟಿದೆ. ಅದಕ್ಕಾಗಿ ಮಾನ್ಯ ಸಭಾಧ್ಯಕ್ಷರಿಗೆ, ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಕಂದಾಯ ಸಚಿವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಆಮೇಲೆ ಮೂರು ವರ್ಷಗಳವರೆಗೆ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಂಥ ಮಾನ್ಯ ಸದಸ್ಯರಾದ ಶ್ರೀ ಕೆ.ಶಿವಮೂರ್ತಿ ನಾಯಕ್‌ರವರಿಗೆ, ಇದರಿಂದ ಯಾರು ಜೀವನವನ್ನು ಕಂಡುಕೊಳ್ಳುತ್ತಾರೆ ಅವರೆಲ್ಲರ ಪರವಾಗಿ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಶ್ರೀ ಕೆ.ಶಿವಮೂರ್ತಿ (ಮಾಯಕೊಂಡ) : ಮಾನ್ಯ ಅಧ್ಯಕ್ಷರೆ, ನಾನು ಈ ದಿವಸ ಪವಿತ್ರವಾದ ದಿವಸ ಮಹತ್ವದ ದಿವಸ ಎಂದು ಹೇಳುತ್ತಾ, ಇಂಥ ಮಹತ್ವವಾಗಿರತಕ್ಕಂಥ ಮಸೂದೆಯನ್ನು ಅಂಗೀಕಾರ ಮಾಡಿರತಕ್ಕಂಥ ತಮ್ಮ ಪೀಠಕ್ಕೆ ವಂದನೆಗಳನ್ನು ಹೇಳುತ್ತೇನೆ. ಈ ಸಭಾ ನಾಯಕರಾದ ಮಾನ್ಯ ಸಿದ್ದರಾಮಯ್ಯನವರಿಗೆ, ಮಾನ್ಯ ಕಂದಾಯ ಸಚಿವರಾದ ಕಾಗೋಡು ತಿಮ್ಮಪ್ಪನವರು ಇದರ ರೂವಾರಿಗಳು ಮತ್ತು ಇದನ್ನು ಪರ್ಯಾಲೋಚನೆ ಮಾಡಿರತಕ್ಕಂಥವರು ಹೋರಾಟದ ಪ್ರತೀಕವಾಗಿದ್ದಾರೆ. ಹಾಗೆಯೇ Law Minister ಆಗಿರತಕ್ಕಂಥ ಮಾನ್ಯ ಜಯಚಂದ್ರರವರು, ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು, ಮಾನ್ಯ ಕುಮಾರಸ್ವಾಮಿಯವರು ಮತ್ತೇ ಖೇಣಿಯವರು, ಇನ್ನಿರತಕ್ಕಂಥವರೆಲ್ಲಾ ನಾಯಕರುಗಳೆಲ್ಲಾ ಸೇರಿ ಒಗ್ಗಟ್ಟಿನಿಂದ ಇದನ್ನು ಮಾಡಿರುತ್ತಾರೆ. ಈ ನಾಡಿನಲ್ಲಿರತಕ್ಕಂಥ ಹಾಡಿಗಳು, ಹಟ್ಟಿಗಳು, ತಾಂಡಾಗಳು, ವಾಡಿಗಳು, ಕ್ಯಾಂಪ್‌ಗಳು, ಕಾಲೋನಿಗಳನ್ನು ಸೇರಿಸಿ ಇವುಗಳಿಗೆ ಜೀವ ಕೊಟ್ಟಿದ್ದೀರಿ, ದಾಖಲೆ ಕೊಟ್ಟಿದ್ದೀರಿ, ಇದಕ್ಕಾಗಿ ತಮಗೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮನ:ಪೂರ್ವಕವಾಗಿ ಧನ್ಯವಾದಗಳನ್ನು ಹೇಳುತ್ತೇನೆ. ಏಕೆ ಈ ಮಾತು ಹೇಳುತ್ತೇನೆಂದರೆ, ಮುಂದಿನ ದಿವಸ ನಾವು ಹೊಸ ಚಂದ್ರಮಾನಕ್ಕೆ ಹೋಗುತ್ತೇವೆ. ಹೊಸ ಯುಗಕ್ಕೆ ನಾವು ಹೋಗುತ್ತೇವೆ. ಅದಕ್ಕೆ ಯುಗಾದಿ ನಮಗೆ ಪವಿತ್ರವಾದ ದಿವಸ. ಹೀಗಾಗಿ ಯುಗಾದಿ ಹಬ್ಬದ ಶುಭಾಶಯಗಳನ್ನು ಹೇಳಿ ಮಾನ್ಯ ಮುಖ್ಯಮಂತ್ರಿಗಳಿಗೆ ವಿಶೇಷವಾಗಿ ಕಾಂಗ್ರೆಸ್ ಪಕ್ಷ ಪ್ರಣಾಳಿಕೆಯಲ್ಲಿ ವಾಗ್ದಾನ ಮಾಡಿರತಕ್ಕಂಥದ್ದನ್ನು ತಾವು ಪೂರ್ಣಗೊಳಿಸಿರುವುದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಮುಂದಿನ ದಿವಸ ತಮ್ಮ ಪೀಠದ ಮೂಲಕ ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಇವರು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಇವರಿಗೆ ವಿಶೇಷವಾದ ಸೌಲಭ್ಯ ಕೊಡಬೇಕೆನ್ನುವ ವಿನಂತಿಯನ್ನು ಇಟ್ಟು ಅದಕ್ಕೆ ಸಹಕರಿಸಬೇಕೆಂದು ಹೇಳಿ ಮತ್ತೊಮ್ಮೆ ಅವರಿಗೆ ಧನ್ಯವಾದಗಳನ್ನು ಹೇಳುತ್ತಿದ್ದೇನೆ.

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ್ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಮುಖ್ಯಮಂತ್ರಿಗಳು ಮಾತನಾಡುತ್ತಾರಂತೆ ನೀವು ಎಲ್ಲಾ ಕುಳಿತುಕೊಳ್ಳಿ.

ಶ್ರೀ ಪಿ.ಟಿ.ಪರಮೇಶ್ವರ್ ನಾಯಕ್: Sir ನಾವೆಲ್ಲಾ ಮಾತನಾಡಿದ ಮೇಲೆ ತಾವು ಮಾತನಾಡಿ sir.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೀವು ಆಗಲೇ bill ಮೇಲೆ ಮಾತನಾಡಿಲ್ಲವೇ?

ಶ್ರೀ ಶಿವರಾಜ್ ಎಸ್.ತಂಗಡಗಿ : bill ಮೇಲೆ ಮಾತನಾಡಿದ್ದೇವೆ, ನಾವು ಧನ್ಯವಾದಗಳನ್ನು ಹೇಳುತ್ತೇವೆ.

ಶ್ರೀ ಪಿ.ಟಿ.ಪರಮೇಶ್ವರ ನಾಯಕ್ : ನಾವು ಮಾತನಾಡಿದ ಮೇಲೆ ತಾವು ಮಾತನಾಡಿ sir. ಅಭಿನಂದನೆಗಳನ್ನು ಹೇಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಅಭಿನಂದನೆಗಳನ್ನು ಹೇಳುತ್ತಾರಂತೆ ಒಂದು ನಿಮಿಷ ಅವಕಾಶ ಕೊಡೋಣ.

ಶ್ರೀ ಸಿದ್ದರಾಮಯ್ಯ : ನಾನೇ ನಿಮ್ಮೆಲ್ಲರ ಪರವಾಗಿ ಹೇಳುತ್ತಿದ್ದೆ.

ಅಧ್ಯಕ್ಷರು : ಆಯಿತು ಪರಮೇಶ್ವರ್ ನಾಯಕ್‌ರವರು ತಾವು ಹೇಳಿ.

(ಮುಂದು)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

24.03.2017 12.40 (14) KS:CP

ಶ್ರೀ ಪಿ.ಟಿ.ಪರಮೇಶ್ವರ ನಾಯಕ್ (ಹೂವಿನ ಹಡಗಲಿ):- ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ಈ ಸಂದರ್ಭವನ್ನು ಸುವರ್ಣಾಕ್ಷರದಲ್ಲಿ ಬರೆದಿಡುವಂತಹ ಒಂದು ಸುಸಂದರ್ಭವನ್ನು ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಕಂದಾಯ ಸಚಿವರು, ಮಾನ್ಯ ಕಾನೂನು ಸಚಿವರು ಹಾಗೂ ಈ ಸದನದ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಎಲ್ಲಾ ಮಾನ್ಯ ಸದಸ್ಯರು ನಮ್ಮ ಲಂಬಾಣಿ ಜನಾಂಗದವರಿಗೆ, ಗೊಲ್ಲ ಜನಾಂಗದವರಿಗೆ, ಬೋವಿ ಸಮಾಜದವರಿಗೆ ಮತ್ತು ಹಾಡಿ, ವಾಡಿ, ಹಟ್ಟಿ ಹಾಗೂ ಕ್ಯಾಂಪ್‌ಗಳೆಲ್ಲರಿಗೂ ಅನುಕೂಲವಾಗುವಂಥ ಈ ಒಂದು ಐತಿಹಾಸಿಕ ಮಸೂದೆಯನ್ನು ಈ ಸದನದಲ್ಲಿ ಪಾಸ್ ಮಾಡುವುದರ ಮೂಲಕ 2013 ರ ಚುನಾವಣೆ ನಮ್ಮ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನಡೆದಾಗ ಚುನಾವಣೆ ಪ್ರಣಾಳಿಕೆಯಲ್ಲಿ ಏನೊಂದು ಘೋಷಣೆ ಮಾಡಲಾಗಿತ್ತೋ ಆ ಘೋಷಣೆಯನ್ನು ಚಾಚುತಪ್ಪದೆ ಆ ಒಂದು ವರ್ಗಕ್ಕೆ ಶಕ್ತಿಯನ್ನು ಕೊಡತಕ್ಕಂಥ ಹಾಗೂ ಧ್ವನಿಯನ್ನು ತುಂಬತಕ್ಕಂಥ ಕೆಲಸವನ್ನು ಇವತ್ತು ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರ ನೇತೃದಲ್ಲಿ ಅದು ಅನುಷ್ಠಾನವಾಗಿದ್ದಕ್ಕೆ ನಾನು ಕೂಡ ಆ ಸಮಾಜದಿಂದ ಬಂದಿರುವುದರಿಂದ ಆ ಸಮಾಜದ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಈ ವಿಷಯವನ್ನು ಹಲವಾರು ಬಾರಿ ಅಂದರೆ, ಶಾಸಕಾಂಗ ಪಕ್ಷದ ಸಭೆಯಲ್ಲಿ ಮತ್ತು ಸಚಿವ ಸಂಪುಟ ಸಭೆಯಲ್ಲಿ ಹಾಗೂ ಬೇರೆ ಬೇರೆ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸನ್ಮಾನ್ಯ ಕಂದಾಯ ಸಚಿವರಿಗೆ ಹಾಗೂ ಸನ್ಮಾನ್ಯ ಕಾನೂನು ಸಚಿವರಿಗೆ ಅನೇಕ ಬಾರಿ ನಾವು ಒತ್ತಡವನ್ನು ಹಾಕಿ ಕೊನೆಪಕ್ಷ ಬಜೆಟ್ ಅಧಿವೇಶನದಲ್ಲಿ ಅದು ಅಂಗೀಕಾರ ಆಗಬೇಕೆಂದು ಮೊನ್ನೆದಿವಸವರೆಗೆ ನಾವೆಲ್ಲ ಶಾಸಕರು ಒತ್ತಾಯ ಮಾಡಿದ್ದೆವು. ಅದಕ್ಕೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಸಂಪೂರ್ಣ ಸಹಕಾರವನ್ನು ನೀಡಿ ಅದಕ್ಕೆ ಸ್ಪಂದನೆ ಕೊಟ್ಟು ಆ ವರ್ಗಕ್ಕೆ ಇವತ್ತು ಐತಿಹಾಸಿಕ ದಿವಸ ಎಂದು ನಾನು ಮತ್ತೊಮ್ಮೆ ಹೇಳುವುದಕ್ಕೆ ಬಯಸುತ್ತೇನೆ. ನಾನು ಆ ಸಮಾಜದ ಪರವಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ, ಮಾನ್ಯ ಕಂದಾಯ ಸಚಿವರಿಗೆ, ಮಾನ್ಯ ಕಾನೂನು ಸಚಿವರಿಗೆ ಹಾಗು ಮಾನ್ಯ ವಿರೋಧಪಕ್ಷದ ನಾಯಕರಿಗೆ ಮತ್ತು ಈ ಸದನದ ಎಲ್ಲಾ ಸದಸ್ಯರಿಗೆ ಹೃತ್ಪೂರ್ವಕವಾದಂತ ಧನ್ಯವಾದಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ.

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ(ಕನಕಗಿರಿ):- ಮಾನ್ಯ ಅಧ್ಯಕ್ಷರೆ, ಈಗ ಒಂದು ಹೊಸ ಬಿಲ್‌ಗೆ ಸದನ ಅನುಮತಿ ನೀಡಿದೆ. ಹಿಂದೆ ಕ್ಯಾಂಪ್‌ಗಳು ಅಥವಾ ಗೊಲ್ಲರಹಟ್ಟಿ ಇರಬಹುದು. ಇವುಗಳು ಸಣ್ಣ ಸಣ್ಣ ಊರುಗಳಾಗಿ ಪರಿವರ್ತನೆ ಆಗಿದ್ದರೂ ಸಹ ಅದಕ್ಕೆ ಸರ್ಕಾರದ ಸೌಲಭ್ಯ ಬರುತ್ತಿದ್ದರೂ ಸಹ ವಾಸ್ತವಸತ್ಯ ಕಂದಾಯ ಇಲಾಖೆಯಿಂದ ಆಗುತ್ತಿರುವ ಕೆಲಸಗಳು ಮಾತ್ರ ಆಗುತ್ತಿರಲಿಲ್ಲ. ಬಹಳಷ್ಟು ಜನರು ಈ ಬಗ್ಗೆ ಬೇಸರವನ್ನು ವ್ಯಕ್ತಪಡಿಸುತ್ತಿದ್ದರು. ಸನ್ಮಾನ್ಯ ಸಿದ್ದರಾಮಯ್ಯ ಸಾಹೇಬರು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಕಂದಾಯ ಗ್ರಾಮಗಳನ್ನಾಗಿ ಮಾಡುತ್ತೇವೆಂದು ಹಿಂದೆ ಘೋಷಣೆ ಮಾಡಿದ್ದರು. ಈಗ ಅದನ್ನು ಜಾರಿಗೆ ತಂದಿದ್ದಾರೆ. ಅದಕ್ಕೆ ಮಾನ್ಯ ಸಭಾಧ್ಯಕ್ಷರು ಬಹಳ ಸಹಕಾರ ನೀಡಿದ್ದಾರೆ. ಏಕೆಂದರೆ, ಈ ಬಗ್ಗೆ ಎರಡು ದಿವಸ ಸತತವಾಗಿ ನಾವು ಮಾತನಾಡಿದ ಮೇಲೆ ನಿನ್ನೆದಿವಸ ನಾವೆಲ್ಲ ಮಾತನಾಡಿದ ಸಮಯದಲ್ಲಿ ಇದರಲ್ಲಿರಕತಕ್ಕಂಥ ಅನ್ಯಾಯವನ್ನು ಸರಿಪಡಿಸುವುದಕ್ಕೋಸ್ಕರ ಇದನ್ನು ಯಾವುದೇ ಕಾರಣಕ್ಕೂ ಮಾಡಲೇಬೇಕು ಇದರಿಂದ ಒಳ್ಳೆಯ ಸಂದೇಶ ಹೋಗುತ್ತದೆ ಎಂದು ತಾವು ನಮಗೆ ಸಹಕಾರ ಮಾಡಿದ್ದೀರಿ. ಅದಕ್ಕಾಗಿ ನಿಮಗೆ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಸನ್ಮಾನ್ಯ ಕಂದಾಯ ಸಚಿವರು ಮತ್ತು ಕಾನೂನು ಸಚಿವರಿಗೆ ಹಾಗೂ ವಿರೋಧಪಕ್ಷದ ನಾಯಕರಿಗೆ ಮತ್ತು ಇಲ್ಲಿರುವ ಎಲ್ಲಾ ಸದಸ್ಯರು ಇದು ಅವಶ್ಯಕತೆ ಇದೆ ಮತ್ತು ಇದರಿಂದ ಸಮಾಜಕ್ಕೆ ಒಂದು ದೊಡ್ಡ ಕೆಲಸ ಮಾಡಿಕೊಟ್ಟಂತಾಗುತ್ತದೆ ಆದ್ದರಿಂದ, ಇದು ಬೇಕೆಂದು ನಾವೆಲ್ಲರು ಪಕ್ಷಾತೀತವಾಗಿ ಸಹಕಾರ ಕೊಟ್ಟಿದ್ದೇವೆ. ನಾನು ಆ ಒಂದು ಸಮುದಾಯದಿಂದ ಬಂದವನಾಗಿದ್ದು, ಈ ಸಮುದಾಯದಲ್ಲಿ ಎಷ್ಟು ಸಮಸ್ಯೆಗಳು ಮತ್ತು ತೊಂದರೆಗಳಿವೆ ಎಂದು ನಾನು ಅರಿತುಕೊಂಡಿದ್ದೇನೆ. ಹಾಗೆಯೇ ಇವೆಲ್ಲವನ್ನು ನಾನು ಅನುಭವಿಸಿದ್ದೇನೆ. ನಾವೆಲ್ಲರು ಇದ್ದು ಅದರ ಬಗ್ಗೆ ಮಾತನಾಡಿ ಅದನ್ನು ಕಾರ್ಯರೂಪಕ್ಕೆ ತಂದಿದ್ದೇವೆ. ಇದಕ್ಕೆ ಸಹಕಾರ ಮಾಡಿದಂತ ಎಲ್ಲರಿಗೂ ನಾನು ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಅಶೋಕ್ ಖೇಣಿ(ಬೀದರ್ ದಕ್ಷಿಣ):- ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಶಿವಮೂರ್ತಿ ನಾಯಕ್‌ರವರು ಈ ಬಗ್ಗೆ ಬಹಳ ವರ್ಷಗಳಿಂದ ಬಹಳ ಕೆಲಸ ಮಾಡಿದ್ದಾರೆ. ಆದ್ದರಿಂದ, ಅವರಿಗೆ ಮೊದಲು thanks ಹೇಳುತ್ತೇನೆ. ಹಾಗೆಯೇ, Chief Minister and Opposition Leader ಮತ್ತು Law Minister, Revenue Ministers

ಎಲ್ಲರೂ ಸಹ ಈ ಒಂದು ಬಿಲ್‌ಗೆ ಸಹಕಾರ ಕೊಟ್ಟಿದ್ದಾರೆ. This is first step. Second stepನಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಏನು request ಮಾಡುತ್ತೇನೆಂದರೆ, Electrical Department, PWD, Water Resource Department, Housing Departmentಗೆ ತಾವು direction ಕೊಡಬೇಕು, since these colonies were neglected for centuries. ಆದ್ದರಿಂದ, ಅವರು immediately, extra funds ಕೊಟ್ಟು they should be brought up with development. ಈ ಬಗ್ಗೆ ನಾನು request ಮಾಡುತ್ತೇನೆ. ಇದನ್ನು ಮಾಡಿದರೆ ನಿಮಗೆ ಪುಣ್ಯ ಸಿಗುತ್ತದೆ ಎಂದು ಹೇಳುತ್ತೇನೆ. Thank you.

ಶ್ರೀ ಬಿ.ಬಿ.ನಿಂಗಯ್ಯ(ಮೂಡಿಗೆರೆ):- ಸನ್ಮಾನ್ಯ ಸಭಾಧ್ಯಕ್ಷರೇ, ಸರ್ಕಾರ ಇವತ್ತು ಉತ್ತಮವಾದಂಥ ಒಂದು ತಿದ್ದುಪಡಿಯನ್ನು ತರುವುದರ ಮೂಲಕ ಹತ್ತಾರು ವರ್ಷಗಳಿಂದ ಹೋರಾಟ ನಡೆದಂಥದಕ್ಕೆ ನ್ಯಾಯ ದೊರಕಿಸಿಕೊಟ್ಟಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ತಾಂಡ, ಹಾಡಿ, ವಾಡಿ ಮತ್ತು ಹಟ್ಟಿ, ಕಾಲೋನಿಗಳಿಗೆ ಗ್ರಾಮಗಳ ಮಾನ್ಯತೆ ಇರಲಿಲ್ಲ, ಅದನ್ನು ಮಾಡಿಕೊಡಬೇಕೆಂದು ವಿಶೇಷವಾಗಿ ಮಾನ್ಯ ಶಿವಮೂರ್ತಿ ನಾಯಕ್‌ರವರು ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಕಂದಾಯ ಸಚಿವರು, ಮಾನ್ಯ ಕಾನೂನು ಸಚಿವರು ಇದರ ಬಗ್ಗೆ ವಿಶೇಷವಾಗಿ ಗಮನಿಸಿ ವಿರೋಧಪಕ್ಷ ಮತ್ತು ಆಡಳಿತ ಪಕ್ಷದ ಸದಸ್ಯರ ಕೋರಿಕೆಯಂತೆ ಅದಕ್ಕೆ ತಿದ್ದುಪಡಿ ತರುವುದರ ಮೂಲಕ ಒಂದು ಐತಿಹಾಸಿಕ ತೀರ್ಮಾನವನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ಎಲ್ಲಾ ಸಮಾಜದ ಪರವಾಗಿ ಅವರಿಗೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮತ್ತೆ ಮಾನ್ಯ ಶಿವಮೂರ್ತಿನಾಯಕರ್‌ರವರು ಹಾಗೂ ಎಲ್ಲ ಗೆಳೆಯರು ಇದರ ಬಗ್ಗೆ ವಿಶೇಷವಾಗಿ ಪ್ರಯತ್ನ ಮಾಡಿದ್ದಾರೆ. ಆದ್ದರಿಂದ, ಅವರೆಲ್ಲರನ್ನು ಅಭಿನಂದಿಸಿ ಇಂಥ ಒಳ್ಳೆಯ ಕ್ರಾಂತಿಕಾರಿಯಾದ ಬಿಲ್ ಅನ್ನು ತಂದು ಅವರಿಗೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾಗಳನ್ನರ್ಪಿಸುತ್ತೇನೆ.

ಶ್ರೀ ಮಾನಪ್ಪ ಡಿ.ವಜ್ಜಲ್(ಲಿಂಗಸುಗೂರು):- ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಒಳ್ಳೆಯ ಬಿಲ್ ಪಾಸ್ ಮಾಡಲಾಗಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ನಿರ್ಣಯ ತೆಗೆದುಕೊಳ್ಳುತ್ತಾರೆಂದು ನಾವು ಅಂದುಕೊಂಡಿರಲಿಲ್ಲ. ಆದರೆ, ಅವರ ಮೇಲೆ ನಮಗೆ ಅಭಿಮಾನ ಇತ್ತು. ದಲಿತರಿಗೆ ಮತ್ತು

ಹಿಂದುಳಿದವರ್ಗವರಿಗೆ ಸನ್ಮಾನ್ಯ ಮುಖ್ಯ ಮಂತ್ರಿಯವರು ಕೊಟ್ಟಂಥ ಕೊಡುಗೆ ಎಂದೆಂದೂ ಮರೆಯಲಾರದಂಥ ಯುಗಾದಿ ಹಬ್ಬದ ಕೊಡುಗೆಯನ್ನು ಕೊಟ್ಟಿದ್ದಾರೆಂದು ನಾನು ಭಾವಿಸುತ್ತೇನೆ. ಏಕೆಂದರೆ, ನಮ್ಮ ಲಿಂಗಸುಗೂರು ತಾಲ್ಲೂಕಿನಲ್ಲಿ 40 ತಾಂಡಾಗಳು, ವಡ್ಡರ ಹಟ್ಟಿ, ಗೊಲ್ಲರ ಹಟ್ಟಿಗಳು ಸುಮಾರು ಇವೆ. ಅನೇಕ ಜನರು ನಮ್ಮ ಹತ್ತಿರ ಬಂದು ಅನೇಕ ಸಮಸ್ಯೆಗಳನ್ನು ಹೇಳಿದ್ದರೂ ಕೂಡ ಅದನ್ನು ಪರಿಹಾರ ಮಾಡುವುದಕ್ಕೆ ನಮ್ಮಿಂದ ಆಗುತ್ತಿರಲಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡು ಆ ಬಗ್ಗೆ ಬಿಲ್ ತಂದು ಪಾಸ್ ಮಾಡಿದ್ದಾರೆ. ಇದಕ್ಕೆ ಸಹಕಾರ ಕೊಟ್ಟಂಥ ವಿರೋಧಪಕ್ಷದ ನಾಯಕರಾದಂಥ ಸನ್ಮಾನ್ಯ ಜಗದೀಶ್ ಶೆಟ್ಟರ್ ಮತ್ತು ನಮ್ಮ ನಾಯಕರಾದಂಥ ಮಾನ್ಯ ಹೆಚ್.ಡಿ.ಕುಮಾರಣ್ಣರವರು ಹಾಗೂ ಈ ಬಗ್ಗೆ ನಿರ್ಣಯ ತೆಗೆದುಕೊಂಡಂಥ ಸನ್ಮಾನ್ಯ ಶಿವಮೂರ್ತಿ ನಾಯಕ್‌ರವರಿಗೆ ಹಾಗು ಈ ನಿರ್ಣಯಕ್ಕೆ ಅನುಮತಿ ಕೊಟ್ಟಂಥ ಸರ್ಕಾರದ ಸನ್ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಸಚಿವರುಗಳಿಗೂ ಮತ್ತು ತಮಗೂ ಸಹ ನನ್ನ ಕೋಟಿಕೋಟಿ ಅಭಿನಂದನೆಗಳನ್ನು ಹೇಳಿ ನಾನು ಎಲ್ಲರಿಗೂ ಶುಭಾಶಯ ಗಳನ್ನು ಕೋರುತ್ತೇನೆ.

ಶ್ರೀ ಈ.ತುಕಾರಾಂ(ಸಂಡೂರು):- ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ಅಧಿವೇಶನದಲ್ಲಿ ಲಂಬಾಣಿ ತಾಂಡ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರಹಟ್ಟಿ, ನಾಯಕರ ಹಟ್ಟಿ, ಮಜಾರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್‌ಗಳನ್ನು ಇವತ್ತು ಕಂದಾಯ ಗ್ರಾಮಗಳನ್ನಾಗಿ ಮಾಡುವುದರ ಮೂಲಕ ಅನೇಕ ವರ್ಷಗಳ ಕನಸು ಇವತ್ತು ನನಸಾಗಿದೆ. ಅದಕ್ಕೋಸ್ಕರ ಈ ಅಧಿವೇಶನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ತಮಗೂ ಅಭಿನಂದನೆ ಸಲ್ಲಿಸುತ್ತೇನೆ. ಮತ್ತೆ ಮಾನ್ಯ ಶಿವಮೂರ್ತಿ ನಾಯಕ್‌ರವರು ಮೂರ್ನಲ್ಕು ವರ್ಷಗಳಿಂದ ಇದರ ಬಗ್ಗೆ ಹೋರಾಟ ಮಾಡಿಕೊಂಡು ಬಂದಿದ್ದರು. ಇವತ್ತು ಇದಕ್ಕೆ ಎಲ್ಲಾ ಸದಸ್ಯರು ಬೆಂಬಲ ವ್ಯಕ್ತಪಡಿಸಿದ್ದಕ್ಕೆ ನಾನು ಈ ಅಧಿವೇಶದನಲ್ಲಿ ಕೃತಜ್ಞತೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎನ್.ರಾಜಣ್ಣ(ಮಧುಗಿರಿ):- ಸನ್ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರು ಈಗ ವ್ಯಕ್ತಪಡಿಸಿದ ರೀತಿಯಲ್ಲಿ ಇದೊಂದು ಐತಿಹಾಸಿಕ ತಿದ್ದುಪಡಿ ಎಂದು ನಾನು ಸರ್ಕಾರಕ್ಕೆ ಮತ್ತು ಸದನದ ಎಲ್ಲಾ ಗೌರವಾನ್ವಿತ ನಾಯಕರು ಮತ್ತು ಸದಸ್ಯರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಬಗ್ಗೆ ಖಾಸಗಿ

ನಿರ್ಣಯವನ್ನು ತರತಕ್ಕಂಥ ಪ್ರಯತ್ನವನ್ನು ಮಾನ್ಯ ಶಿವಮೂರ್ತಿನಾಯಕ್‌ರವರು ಹಲವಾರು ಬಾರಿ ಮಾಡಿದ್ದಾರೆ. ಅದಾಗ್ಯೂ ಕೂಡ ಗೊಲ್ಲರಹಟ್ಟಿ, ತಾಂಡಗಳು ಇವೆಲ್ಲವನ್ನು ಮಾಡಬೇಕೆಂದು ಮಾನ್ಯ ಶಿವಮೂರ್ತಿಯವರು ಪ್ರಸ್ತಾಪ ಮಾಡಿದಾಗ ಕಿರಿಕ್ ಪಾರ್ಟಿ ಸಿನಿಮಾ ನಮಗೆ ಜ್ಞಾಪಕಕ್ಕೆ ಬರುತ್ತಿತ್ತು. ನಮ್ಮ ಸದನದಲ್ಲಿ ಒಂದು ಕಿರಿಕ್ ಪಾರ್ಟಿ ಇದೆ ಎಂದು ನಾವು ಹಾಸ್ಯ ಮಾಡುತ್ತಿದ್ದವು. ಆದರೂ ಕೂಡ ಈ ಒಂದು ವಿಧೇಯಕದ ತಿದ್ದುಪಡಿ ಬಹಳ ಮಹತ್ವ ಮತ್ತು ಸಮಾಜದಲ್ಲಿ ಅಸಹಾಯಕ ಸಮುದಾಯಗಳು ಮತ್ತು ಧ್ವನಿ ಇಲ್ಲದೆ ಇರತಕ್ಕಂಥ ಸಮುದಾಯಗಳು ಏನಿವೆ ಆ ಸಮುದಾಯಗಳಿಗೆ ನ್ಯಾಯಯುತವಾದಂಥ ಶಕ್ತಿಯನ್ನು ತುಂಬತಕ್ಕಂಥದು ಆಗಿದೆ ಎಂದು ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಹಾಗೆಯೇ ಇದಕ್ಕೆ ಸಹಕರಿಸಿದಂಥ ಎಲ್ಲ ವಿರೋಧ ಪಕ್ಷದ ನಾಯಕರಿಗೂ ಮತ್ತು floor leaders ಗೂ ಕೂಡ ನಾನು ಅಭಿನಂದನೆ ಸಲ್ಲಿಸುತ್ತಾ ವಿಶೇಷವಾಗಿ ಮಾನ್ಯ ಶಿವಮೂರ್ತಿ ನಾಯಕ್‌ರವರಿಗೂ ಸಹ ನನ್ನ ವೈಯಕ್ತಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಪ್ರತಾಪ್‌ಗೌಡ ಪಾಟೀಲ್(ಮಸ್ಕಿ):- ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಐತಿಹಾಸಿಕವಾಗಿರತಕ್ಕಂಥ ಬಿಲ್ ಅನ್ನು ಪಾಸ್ ಮಾಡಿರುವುದಕ್ಕೆ ಕಾರಣಿಕರ್ತರಾಗಿರತಕ್ಕಂಥ ತಮಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಕಂದಾಯ ಸಚಿವರು ಮತ್ತು ಮಾನ್ಯ ಕಾನೂನು ಸಚಿವರಗೆ ಹಾಗೂ ಈ ಸದನದ ಎಲ್ಲಾ ಸದಸ್ಯರಿಗೆ ಅಭಿನಂದನೆಯನ್ನು ಸಲ್ಲಿಸುತ್ತಾ ಈ ಒಂದು ಬಿಲ್ ಬಹಳಷ್ಟು ಮುಖ್ಯವಾಗಿರತಕ್ಕಂಥ ಬಿಲ್ ಆಗಿತ್ತು. ನನ್ನ ಕ್ಷೇತ್ರದಲ್ಲಿಯು ಸಹ ಸುಮಾರು 30 ಲಂಬಾಣಿ ತಾಂಡಗಳು ಸುಮಾರು 20 ಗೊಲ್ಲರಹಟ್ಟಿಗಳು, 30 ಆಂಧ್ರಕ್ಯಾಂಪ್‌ಗಳನ್ನು ಹೊಂದಿರತಕ್ಕಂಥ ಕ್ಷೇತ್ರವಾಗಿರುವುದರಿಂದ ಅಲ್ಲಿ ಬಹಳಷ್ಟು ಅಭಿವೃದ್ಧಿ ಆಗಬೇಕಾಗಿತ್ತು. ಇವತ್ತು ಈ ಒಂದು ಬಿಲ್ ಅನ್ನು ಪಾಸ್ ಮಾಡುವುದಕ್ಕೆ ಮುಖ್ಯ ಕಾರಣಿಕರ್ತರೆಂದರೆ, ನಮ್ಮ ಸದಸ್ಯರಾಗಿರುವ ಸನ್ಮಾನ್ಯ ಶಿವಮೂರ್ತಿ ನಾಯಕರು ಎಂದರೆ ತಪ್ಪಾಗಲಾರದು. ಅವರ ಒಂದು ಹೋರಾಟದಿಂದ ಮತ್ತು ಎಲ್ಲರ ಒಂದು ಸಹಕಾರದಿಂದ ಇವತ್ತು ಈ ಬಿಲ್ ಪಾಸ್ ಮಾಡಿರುವುದಕ್ಕೆ ಮತ್ತೊಮ್ಮೆ ಎಲ್ಲಾ ನಾಯಕರಿಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

24-03-2017

ಶ್ರೀ ಎಂ.ಪಿ.ರವೀಂದ್ರ(ಹರಪನಹಳ್ಳಿ):- ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಅನುಮೋದನೆ ಕೊಟ್ಟಿರತಕ್ಕಂಥ ಮಸೂದೆಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿರತಕ್ಕಂಥ ಒಂದು ಸಮಸ್ಯೆ ಇದಾಗಿತ್ತು. ಅದರಲ್ಲಿಯೂ ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಸಾಕಷ್ಟು ಲಂಬಾಣಿ ತಾಂಡಗಳಿವೆ. ಇವುಗಳನ್ನು ನಾವು ಚಿಕ್ಕ ವಯಸ್ಸಿನಿಂದ ನೋಡಿದ್ದೇವೆ. ಏಕೆಂದರೆ, ಇಡೀ ತಾಂಡ ಒಂದು ಗ್ರಾಮವಾಗಿದ್ದು, ಅಲ್ಲಿ ಒಬ್ಬರು ಹಟ್ಟಿ ನಾಯಕರೆಂದು ಇರುತ್ತಾರೆ. ಈಗಲೂ ಸಹ ಅದು ಹಟ್ಟಿ ನಾಯಕರ ಹೆಸರಿಗೆ ಇರುತ್ತದೆ. ಸುಮಾರು 15-20 ವರ್ಷಗಳ ಕೆಳಗಡೆಯಿಂದ ನಾವು ನೋಡಿಕೊಂಡು ಬಂದ ಪ್ರಕಾರ ಅಲ್ಲಿ ಬೇರೆ ಯಾರಾದರು ಅನುಭವದ ಆಧಾರದ ಮೇಲೆ ಅಲ್ಲೊಂದು ಹೊಸ ಮನೆಯನ್ನು ಕಟ್ಟಿಕೊಳ್ಳಬೇಕಾದರೆ ಹಟ್ಟಿ ನಾಯಕರ ಮನೆಯಲ್ಲಿ ಜೀತ ಮಾಡತಕ್ಕಂಥ ಪರಿಸ್ಥಿತಿ ಆ ತಾಂಡಗಳಲ್ಲಿತ್ತು.

(ಮುಂದು)

24-3-2017/12-50/15/YBG-HS

ಶ್ರೀ ಎಂ.ಪಿ.ರವೀಂದ್ರ(ಮುಂದು)

ಇವತ್ತು ಕಂದಾಯ ಗ್ರಾಮಗಳನ್ನು ಮಾಡುವುದರ ಮುಖಾಂತರ ಬಹಳ ದಿವಸಗಳಿಂದ ಸಮಸ್ಯೆ ಇರುವಂಥದ್ದಕ್ಕೆ ಪರಿಹಾರ ಕೊಟ್ಟಿರುವಂಥ ನಮ್ಮ ಮುಖ್ಯಮಂತ್ರಿಗಳಿಗೆ, ಕಾನೂನು ಮಂತ್ರಿಗಳಿಗೆ ಮತ್ತು ಕಂದಾಯ ಮಂತ್ರಿಗಳಿಗೆ ಮತ್ತು ಸಹಕರಿಸಿದಂಥ ಎಲ್ಲರಿಗೂ ಹಾಗೂ ವಿಶೇಷವಾಗಿ ಶಿವಮೂರ್ತಿ ನಾಯಕ್‌ರವರು, ನಾನು 2013ರಲ್ಲಿ ಶಾಸಕನಾಗಿ ಬಂದಂಥ ಸಂದರ್ಭದಲ್ಲಿ ನಾವು ಅವರು ಇದರ ಬಗ್ಗೆ ಸಾಕಷ್ಟು ಬಾರಿ ಚರ್ಚೆ ಮಾಡಿದ್ದೇವೆ, ಸಾಕಷ್ಟು ಬಾರಿ ಶಿವಮೂರ್ತಿ ನಾಯಕ್‌ರವರು ಮುಖ್ಯಮಂತ್ರಿಗಳ ಹತ್ತಿರ ಮತ್ತು ಸದನದಲ್ಲಿ ಪ್ರಸ್ತಾಪ ಮಾಡುವುದರ ಮುಖಾಂತರ ಇವತ್ತು ಪರಿಹಾರವನ್ನು ನಮ್ಮ ಸರ್ಕಾರ ಕೊಡುತ್ತಿದೆ ಅದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬಹಳ ದಿವಸಗಳಿಂದ ಅನ್ಯಾಯ, ದೌರ್ಜನ್ಯ ನಡೆಯತಕ್ಕಂಥ ಪರಿಸ್ಥಿತಿಯನ್ನು ತಡೆಗಟ್ಟತಕ್ಕಂಥದ್ದು. ಬರೀ ಮಸೂದೆ ತರುವುದರ ಜೊತೆಗೆ ಪ್ರತಿಯೊಂದು ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನಾವು ಆದಷ್ಟು ಬೇಗ ಅನುಭವದ ಆಧಾರದ ಮೇಲೆ ಅಲ್ಲಿರತಕ್ಕಂಥ ಜನರಿಗೆ ಅವರವರ ಆಸ್ತಿಪಾಸ್ತಿಗಳು ಏನಿವೆ, ಅವರಿಗೆ ಪರಿವರ್ತನೆ ಮಾಡಿ ಅವರ ಹೆಸರಿಗೆ ಪಟ್ಟಾ ಕೊಡತಕ್ಕಂಥ ಕೆಲಸ ಕೂಡ ನಮ್ಮ ಮುಖ್ಯಮಂತ್ರಿಗಳು ಮಾಡಬೇಕೆನ್ನುವ ಒತ್ತಾಯವನ್ನು ಮಾಡಿ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಈ ಮುಖಾಂತರ ಮತ್ತೊಮ್ಮೆ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದನೆಗಳು.

ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ದಲಿಂಗಪ್ಪ(ಶಿರಹಟ್ಟಿ): ಮಾನ್ಯ ಅಧ್ಯಕ್ಷರೆ, ಈ ಬಿಲ್ ಅನ್ನು ಏನು ಪಾಸ್ ಮಾಡಿದ್ದಾರೆ, ಬಹುತೇಕ ಈಗ ಎರಡನೆಯ ಸ್ವಾತಂತ್ರ್ಯ ಸಿಕ್ಕಿತು ಎಂದು ನಾನು ಭಾವಿಸುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿರತಕ್ಕಂಥ ಸುಮಾರು ತಾಂಡಾಗಳು, ವಡ್ಡರಪಾಳ್ಯ, ನಂತರ ಚನ್ನಪಟ್ಟಣ ಎನ್ನುವಂಥ ಒಂದು ಏರಿಯಾದಲ್ಲಿ 250 ಮನೆಗಳು ಇವೆ. ಬಹುತೇಕ ನಾನು ಆ ಹಳ್ಳಿಗೆ ಹೋದ ತಕ್ಷಣ ಅವರು ನನ್ನನ್ನು ಕೇಳತಕ್ಕಂಥದ್ದು ನಮಗೆ ಯಾವಾಗ ಸ್ವಾತಂತ್ರ್ಯ ಸಿಗುತ್ತದೆಂದು ಅವರು ಕೇಳುತ್ತಿದ್ದರು. ನಮಗೆ ಕೂಡ ಬಹಳ ಬೇಜಾರು ಆಗಿತ್ತು, ಅವರಿಗೆ ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಹಾಕುತ್ತಿದ್ದೆವು, ಅವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಬರುತ್ತಿರಲಿಲ್ಲ. ರಸ್ತೆ, ಕುಡಿಯುವ ನೀರು ಎಲ್ಲವನ್ನು ಕೊಟ್ಟಿದ್ದೇವೆ. ಆದರೆ ಅವರಿಗೆ ಆಶ್ರಯ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಬರುತ್ತಿರಲಿಲ್ಲ. ಆದರೆ ಇವತ್ತು ಈ ಬಿಲ್ ಪಾಸ್ ಆಗಿರುವುದನ್ನು ನೋಡಿ ಬಹಳಷ್ಟು ಸಂತೋಷವಾಯಿತು. ಈ ಬಿಲ್ ಪಾಸ್ ಮಾಡಿರತಕ್ಕಂಥ ಮುಖ್ಯಮಂತ್ರಿಗಳಿಗೆ, ಸಭಾಧ್ಯಕ್ಷರಿಗೆ, ಕಾಗೋಡು ಚಳುವಳಿ ಮೂಲಕ ಬಂದಿರತಕ್ಕಂಥ ನಮ್ಮ ಕಂದಾಯ ಸಚಿವರು ಒಂದು ಒಳ್ಳೆಯ ಬಿಲ್ ಅನ್ನು ಪಾಸ್ ಮಾಡಿದ್ದಾರೆ, ಇವತ್ತು ಬಹುತೇಕ ಬಹಳಷ್ಟು ಜನರಿಗೆ, ಧ್ವನಿ ಇಲ್ಲದಿರತಕ್ಕಂಥ ಜನರಿಗೆ ಧ್ವನಿ ಸಿಕ್ಕಿರತಕ್ಕಂಥದ್ದು, ಒಳ್ಳೆಯ ಈ ಬಿಲ್ ಅನ್ನು ಪಾಸ್ ಮಾಡಿದ್ದಕ್ಕಾಗಿ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ( ಮುಖ್ಯಮಂತ್ರಿಗಳು): ಮಾನ್ಯ ಜಗದೀಶ್ ಶೆಟ್ಟರೆ, ನೀವು ಮಾತನಾಡಿ, ಕೊನೆಯಲ್ಲಿ ನಾನು ಮಾತನಾಡುತ್ತೇನೆ.

ಅಧ್ಯಕ್ಷರು: ಆಯಿತು, ಜಗದೀಶ್ ಶೆಟ್ಟರ್ ನೀವು ಮಾತನಾಡಿ.

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು): ಅವರಿಗೆ, ನಮಗೆ ಹೊಂದಾಣಿಕೆ ಇರುವುದರಿಂದ ಅವರು ಮೊದಲು ಮಾತನಾಡಲಿ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಸದನದ ಒಂದು ಸೌಹಾರ್ದಯುತವಾದವಾದ ಒಂದು ವಾತಾವರಣ ಇದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ನಿನ್ನೆ ಈ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬಿಲ್ ತೆಗೆದುಕೊಂಡು ಬಂದಾಗ, ಹಿಂದೆ ಒಂದು ಸಲ ಈ ಬಿಲ್ ಅನ್ನು present ಮಾಡಿದ್ದರು. ಆವತ್ತು ಆ ಸ್ವರೂಪ ಬೇರೆ ಇತ್ತು. ನಿನ್ನೆ ಬಿಲ್ ಬರುವಾಗ ಶಿವಮೂರ್ತಿ ನಾಯಕ್‌ರವರು ಬಹಳ ಪ್ರಭಾವ ಬೀರಿದಂತೆ ಕಾಣುತ್ತದೆ. ಹೀಗಾಗಿ ಮೂಲ ಸ್ವರೂಪದ ಬಿಲ್ ಏನಿತ್ತು, ಹಿಂದೆ ಅದು ಬಂದಾಗ ಮೂಲ ಸ್ವರೂಪದಲ್ಲಿರುವಂಥ ಬಿಲ್ ಬಗ್ಗೆ, ಅದರಲ್ಲಿರುವ contents ಬಗ್ಗೆ ಬಹಳಷ್ಟು ಶಾಸಕರಲ್ಲಿ ಬೇಡ ಎನ್ನುವಂಥ ಒಂದು ಅಭಿಪ್ರಾಯ ಇತ್ತು. ಅದಕ್ಕಾಗಿ ಕಾಗೋಡು ತಿಮ್ಮಪ್ಪನವರು ತಮ್ಮದೇ ಆದಂಥ ಒಂದು ರೀತಿಯಲ್ಲಿ ಬಿಲ್ ತಂದು Land reforms Act ನಲ್ಲಿ ಅದನ್ನು ಜಾರಿ ಮಾಡಬೇಕೆನ್ನುವ ಒಂದು intention, ಇತ್ತು. ಸದನದಲ್ಲಿ ಬಹಳ ವರ್ಷಗಳಿಂದ ಅದರ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿತ್ತು. ಈ ಸರ್ಕಾರ ಬಂದ ಮೇಲೆ ಈ ಸದನದಲ್ಲಿಯೂ ಬಂಜಾರ ಸಮಾಜದ ಗೊಲ್ಲರಹಟ್ಟಿ, ಇವೆಲ್ಲಾ ತಾಂಡಾಗಳು ಏನಿವೆ, ಅವರಿಗೆ ಒಂದು right create ಆಗುವಂಥ ಒಂದು ಅವಶ್ಯಕತೆ ಇತ್ತು. ಅವರು ಅಲ್ಲಲ್ಲಿ, ಊರಿನ ಹೊರಗಡೆ, ಗುಡ್ಡ ಗಾಡುಗಳಲ್ಲಿ ಮನೆಗಳನ್ನು ಮಾಡಿಕೊಂಡು ಸುಮಾರು 20-40 ವರ್ಷಗಳಿಂದ ಅಲ್ಲಿದ್ದಾರೆ. ಆದರೆ ಆ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಬೇಕೆನ್ನುವಂಥದ್ದು ಎಲ್ಲಾ ಸರ್ಕಾರದಲ್ಲಿಯೂ ಆಲೋಚನೆ ಇದ್ದಾಗ್ಯೂ ಯಾವುದಾದರೊಂದು ಕಾನೂನುಗಳ ತೊಡಕು ಬಂದು ಅದು ಹಾಗೆ ನೆನೆಗುದಿಗೆ ಬೀಳುತ್ತಿತ್ತು. ನಾನು ಹಿಂದೆ ಕಂದಾಯ ಸಚಿವನಾಗಿದ್ದಾಗಲೂ ಸಹಿತ ನಾನು ನಮ್ಮ ಅಧಿಕಾರಿಗಳನ್ನು ಕರೆದು Principal Secretary ಮತ್ತು ಎಲ್ಲಾ ಅಧಿಕಾರಿಗಳನ್ನು ಕರೆದು ಈ ಎಲ್ಲಾ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲೇ ಬೇಕೆಂದು ನಾನೊಂದು ನಿರ್ದೇಶನವನ್ನು ಕೊಟ್ಟಿದ್ದೇನೆ. ಅದಕ್ಕೆ ಒಂದು ವರದಿ ತರಿಸುತ್ತೇವೆ, report ಮಾಡುತ್ತೇವೆಂದು ಹೇಳಿ ಕೇವಲ ನೆನೆಗುದಿಗೆ ಬೀಳುವಂಥದ್ದು. ವರದಿಯನ್ನು ತರಿಸೋಣ, ಮಾಡೋಣ, ಎಷ್ಟು ತಾಂಡಾಗಳು ಇವೆ, ಎಷ್ಟು ಮನೆಗಳು ಇವೆ, ಯಾವ ರೀತಿ ಅವರಿಗೆ right create ಮಾಡಬೇಕು, ಇದರಲ್ಲಿಯೇ time ಹಾಳು ಮಾಡುತ್ತಿದ್ದರು ಹೊರತು, ಏನಾದರೊಂದು ನಿರ್ದಿಷ್ಟವಾದಂಥ ಪರಿಹಾರವನ್ನು ಕೊಡುವುದರಲ್ಲಿ ಯಾರು ಪ್ರಯತ್ನ ಮಾಡುತ್ತಿರಲಿಲ್ಲ. ಹೊಸ ಸರ್ಕಾರ ಬಂದ ಮೇಲೆಯೂ ಸಹಿತ ಇದು ಚರ್ಚೆಯಾಗುತ್ತಾ ಇತ್ತು. ಚರ್ಚೆಗೆ ಬಂದಾಗ ನಾನು ಪ್ರತಿ ಹಂತದಲ್ಲಿಯೂ ಹೇಳಿದೆ, ತಾಂಡಾಗಳಿಗೆ ಕಂದಾಯ ಗ್ರಾಮಗಳೆಂದು recognize ಮಾಡುವುದಕ್ಕೆ, ಕಾನೂನು ಬದ್ಧತೆ ಮಾಡಲಿಕ್ಕೆ ನೀವು

ಏನು ಮಾಡುತ್ತೀರಿ ಎಲ್ಲದಕ್ಕೂ ನಾವು support ಮಾಡಲಿಕ್ಕೆ ತಯಾರಿದ್ದೇವೆನ್ನುವಂಥ ಮಾತನ್ನು ಹೇಳಿದ್ದೆ. ಶಿವಮೂರ್ತಿಯವರು ಇದನ್ನು ಹಗಲೆಲ್ಲಾ ಪ್ರಸ್ತಾಪ ಮಾಡಿದಾಗ ನಾವು ಹೇಳಿದೆವು, ಇದಕ್ಕೆ ನಮ್ಮ ಸಂಪೂರ್ಣವಾದ ಬೆಂಬಲ ಇದೆ ಎಂದು ನಾನು ಕೂಡ ಬಜೆಟ್ ಅಧಿವೇಶನದಲ್ಲಿ, Governor's Address ನಲ್ಲಿ ಸಂಪೂರ್ಣವಾಗಿ ಪ್ರಸ್ತಾಪ ಮಾಡಿರುತ್ತೇನೆ. ಹೀಗಾಗಿ ಒಂದು ಹಂತದಲ್ಲಿ ಮಾನ್ಯ ಕಂದಾಯ ಸಚಿವರು ಮೂಲ ತಿದ್ದುಪಡಿ 38(ಎ) ಏನಿತ್ತು, ಅದನ್ನು ಬದಲಾವಣೆ ಮಾಡಿ, ಈ ಅಧಿನಿಯಮದಲ್ಲಿ ತತ್‌ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಇದ್ದರು ಲಂಬಾಣಿ ತಾಂಡಾ, ವಡ್ಡರಹಟ್ಟಿ, ಗೊಲ್ಲರಹಟ್ಟಿ, ಕುರುಬರಹಟ್ಟಿ, ನಾಯಕರ ಹಟ್ಟಿ, ಮಜಾರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲೋನಿಯಂಥ ದಾಖಲಿಸಿಲ್ಲದ ಜನವಸತಿಗಳಲ್ಲಿ ಅಥವಾ ನಿರ್ಮಿಸಲಾದ ವಿಧಾನದಲ್ಲಿ ಸರ್ವೆ ನಂಬರುಗಳನ್ನು ಮತ್ತು ಗಡಿಗಳನ್ನು ನಿರ್ದಿಷ್ಟಪಡಿಸಿ, ಜಿಲ್ಲಾಧಿಕಾರಿಯು ಹಾಗೆ ಅಧಿಸೂಚಿಸಿದ ಆ ಗ್ರಾಮದ ಕ್ಷೇತ್ರ ವ್ಯಾಪ್ತಿಯೊಳಗೆ ಬರುವ ಯಾವುದೇ ಅಂಥ ಇತರ ದಾಖಲಿಸಿಲ್ಲದ ಜನವಸತಿಗಳಲ್ಲಿ, 1979ರ ಜನವರಿ ಒಂದನೇ ದಿನಕ್ಕೆ ನಿಕಟಪೂರ್ವದಲ್ಲಿ ಕೃಷಿ ಕಾರ್ಮಿಕನು ಯಾವುದೇ ಗ್ರಾಮದಲ್ಲಿ ತನಗೆ ಸೇರಿರದ ಭೂಮಿಯಲ್ಲಿರುವ ವಾಸದ ಮನೆಯಲ್ಲಿ ಸಾಮಾನ್ಯವಾಗಿ ವಾಸಿಸುತ್ತಿರುವಲ್ಲಿ ಕರ್ನಾಟಕ ಭೂ ಸುಧಾರಣೆಗಳ(ತಿದ್ದುಪಡಿ)ಅಧಿನಿಯ, 2016ರ ಪ್ರಾರಂಭದ ದಿನಾಂಕದಂದು ಅಂಥ ವಾಸದ ಮನೆಯಲ್ಲಿ ವಾಸಿಸುತ್ತಿರುವುದನ್ನು ಮುಂದುವರಿಸಿದಲ್ಲಿ, ಅಂಥ ವಾಸದ ಮನೆಗಳಿಗೆ ಇವತ್ತು ಹಕ್ಕು ಕೊಡುವಂಥ ನಿರ್ಧಾರವನ್ನು ಮಾಡಿರುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, 1979 ರಲ್ಲಿ 38ಗೆ ಒಂದು ತಿದ್ದುಪಡಿ ಆಗಿತ್ತು. ಆ 38 ತಿದ್ದುಪಡಿಯನ್ನು ಜಾರಿಗೆ ಕೊಡುವುದರ ಸಂದರ್ಭದಲ್ಲಿ ಅದನ್ನು ಬಳಸಿಕೊಂಡಿರುವುದು. ಈಗ ನಾನು ತಿದ್ದುಪಡಿ ಮಾಡುವಾಗ ಇವತ್ತಿನ ದಿವಸದಿಂದ ಎಂದು ಮಾಡಿರುವುದು.

ಶ್ರೀ ಜಗದೀಶ್ ಶೆಟ್ಟರ್: ಅದನ್ನೊಂದು specific ಮಾಡಬೇಕಾಗುತ್ತದೆ. ಏಕೆಂದರೆ 1979ರ ಪೂರ್ವದಲ್ಲಿ ಎಂದರೆ ಅದಕ್ಕೆ ದಾಖಲೆ ಇರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಏಕೆಂದರೆ ಅದು ಬಂದು ಸುಮಾರು 16-17 ವರ್ಷವಾಗಿದೆ. ಆ ದಾಖಲೆ ಕೊಡಿ ಎಂದರೆ ಅವರು ಎಲ್ಲಿಂದ ಕೊಡುತ್ತಾರೆ?



ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಜಗದೀಶ್ ಶೆಟ್ಟರ್: ಮತ್ತೇ ಅದೇ ಮೊದಲಿನಂತೆ ಚಾಲು ಆಗುತ್ತದೆ. ಮತ್ತೆ ಆ ಕಮಿಟಿಗೆ ಬರಬೇಕು, ಅದು ಹಾಗೆ ಪೆಂಡಿಂಗ್ ಉಳಿಯುತ್ತದೆ. ಇನ್ನು ನಿರ್ದಿಷ್ಟವಾಗಿ ಏನಾದರೂ specific ಹೇಳುವುದಿದ್ದರೆ ಹೇಳಿ. ಈ ರೀತಿ ಮಾಡುವುದರ ಮೂಲಕ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನನಗೆ ಹೇಗೆ ಪ್ರಜ್ಞೆ ಬಂತು ಎಂದರೆ, ಈ ಭೂ ಸುಧಾರಣೆಯ ಹಕ್ಕು ಕೊಡುವಂಥ ಸಂದರ್ಭದಲ್ಲಿ ಜನರು ಎಲ್ಲಾ ತೊಂದರೆಯನ್ನು ಅನುಭವಿಸಿದ್ದಾರೆ. ನಾನು ಆವತ್ತು Joint Committee ಯಲ್ಲಿದ್ದೆ. ಆವತ್ತು ಆ land was vested with the Government. ನಾವು ಆವತ್ತು ಯಾವ ದಾಖಲೆಯನ್ನು ಕೇಳಲಿಲ್ಲ, ಅವನು ಆ ಜಾಗದಲ್ಲಿ ಇದ್ದು ಬಿಟ್ಟಿದ್ದರೆ ಅವನಿಗೆ ಹಕ್ಕು ಪತ್ರ ಕೊಡುವ ಒಂದು ತತ್ವ ತಂದಿದ್ದರಿಂದ ಒಬ್ಬರನ್ನು ಬಿಡದೇ ಹಕ್ಕು ಪತ್ರವನ್ನು ಕೊಟ್ಟಿರುತ್ತೇನೆ. ಏಕೆಂದರೆ ನನಗೆ ದು:ಖ ಬರುತ್ತದೆ. ಏಕೆಂದರೆ, 25 ವರ್ಷ ಹೋರಾಟ ಮಾಡಿರುತ್ತೇನೆ. ನಾನು Land Tribunal member ಆಗಿದ್ದೆ. ಒಂದು ಊರಿತ್ತು, ಅಲ್ಲಿ ಎಲ್ಲರೂ ರೈತರಿದ್ದರು, ಅವರೇ ಒಕ್ಕಲಿನಲ್ಲಿದ್ದರು. ಒಬ್ಬರು ನನ್ನ ಹತ್ತಿರ ಬಂದು ಅವರಿಗೆ ಪಹಣಿ ಇಲ್ಲ, ಹೇಗೆ ಕೊಡುವುದಕ್ಕಾಗುತ್ತದೆಂದು ಕೇಳಿದರು. ನಿಮಗೆ ಒಂದು ಟೈಮ್ ಕೊಡುತ್ತೇನೆ, ಆಮೇಲೆ ಬಂದು ಹೇಳಿ ಎಂದೆ. ಅವರು next ಬಂದಾಗ ಮಾಡಿ ಬಿಡಿ ಎಂದು ಹೇಳಿದರು. ಆ ದಿಟ್ಟ ನಿಲುವು ತೆಗೆದುಕೊಂಡಿದ್ದರಿಂದ 100 ಕ್ಕೆ 100 ರಷ್ಟು ಶಾಶ್ವತವಾಗಿ ನ್ಯಾಯ ಕೊಡುವ ಕೆಲಸ ಮಾಡಿರುವುದರಿಂದ ಯಾರು ಇದರಿಂದ ವಂಚಿತರಾಗಬಾರದು, ಸ್ವಾಧೀನದಲ್ಲಿದ್ದರೆ ಸಾಕು. ಅದಕ್ಕಾಗಿ ಈ ರೀತಿ ಮಾಡಿರುವುದು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ತಿದ್ದುಪಡಿಯೊಂದಿಗೆ ಈ ಬಿಲ್ ಅನ್ನು ಏನು ತಾವು ತಂದಿರುತ್ತೀರಿ ಅದಕ್ಕೆ ನಾವು ಸ್ವಾಗತ ಮಾಡಿರುತ್ತೇವೆ. ಸಂಪೂರ್ಣ support ಕೊಟ್ಟಿರುತ್ತೇವೆ. ಇದನ್ನು ಸರ್ವಾನುಮತದಿಂದ ಪಾಸ್ ಮಾಡುವಂಥದ್ದನ್ನು ನಾವೆಲ್ಲರೂ ಕೂಡಿಕೊಂಡು ಮಾಡಿರುತ್ತೇವೆ. ಈ ರೀತಿ ಪರಿಣಾಮಕಾರಿಯಾದಂಥ ಒಂದು ಕಾನೂನು ಬೇಕು. ಯಾರು ಕೆಳವರ್ಗದವರು, ಶೋಷಿತರು, ದುರ್ಬಲ ವರ್ಗದವರು ಇದ್ದಾರೆ ಅವರ ಪರವಾಗಿ ನಾವೆಲ್ಲರೂ ಧ್ವನಿಯನ್ನು ಎತ್ತಬೇಕಾಗುತ್ತದೆ. ಅದಕ್ಕಾಗಿ ಈ ಸದನ ಧ್ವನಿ ಎತ್ತಬೇಕಾಗುತ್ತದೆ. ಅಂಥವರ ರಕ್ಷಣೆಯ ಸಲುವಾಗಿ ಎಲ್ಲರೂ ಕೂಡಿಕೊಂಡು ಇವತ್ತು ಈ ಬಿಲ್ ಅನ್ನು ಪಾಸ್ ಮಾಡಿದ್ದೇವೆ ಇದು ಬಹಳ ಒಳ್ಳೆಯದು. ಈ

ರೀತಿ ಸಮಾಜದಲ್ಲಿ ದುರ್ಬಲ ವರ್ಗದವರು, ಶೋಷಿತ ವರ್ಗದ ಜನಾಂಗ ಏನಿದೆ, ಅವರ ಹಿತಾಶಕ್ತಿಯ ಸಲುವಾಗಿ ಎಲ್ಲಾ ರೀತಿಯಲ್ಲಿ ಇಡೀ ಸದನ ಸಂಪೂರ್ಣವಾಗಿ ಈ ರೀತಿ ಒಂದು ನಿರ್ಣಯವನ್ನು ಕೈಗೊಂಡಾಗ, ಆ ಜನಾಂಗಕ್ಕೆ ಒಳ್ಳೆಯದಾಗುತ್ತದೆನ್ನುವುದು ನಮ್ಮ ಭಾವನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು. Land Reforms Act ಬಂದಾಗ Form-7A ತುಂಬುವಂಥ ಸಂದರ್ಭದಲ್ಲಿ ಕೋರ್ಟಿನಲ್ಲಿ ಪ್ರಕರಣಗಳು ನಡೆದಾಗ, High Court ವರೆಗೆ ಹೋದವು. ಎಷ್ಟೋ ಕೇಸ್‌ಗಳು remand ಆದವು. ಎಷ್ಟೋ ಜನ ರೈತರಿಗೆ ಸಿಕ್ಕವು. It is deemed to be vested with the Government ಎಂದು ಆದಾಗಲೂ ಸಹಿತ ಅದನ್ನು challenge ಮಾಡುವಂಥದ್ದು, ಕೋರ್ಟಿಗೆ ಹೋಗುವಂಥದ್ದು, ಟ್ರಿಬ್ಯೂನಲ್‌ಗೆ ಹೋಗುವಂಥದ್ದು. ಟ್ರಿಬ್ಯೂನಲ್ ಆಗ ಮತ್ತೊಂದು ಸಲ amendment ಆಗಿ ಜಿಲ್ಲೆಯಲ್ಲಿಯೇ ಒಂದು Appellate Tribunal ಆಯಿತು. ಅಲ್ಲಿಗೂ ಅಡ್ಡಾಡುವುದು ಆಯಿತು. ಆಮೇಲೆ ಅದನ್ನು ತೆಗೆದರು. ಎಷ್ಟೋ ಕೇಸ್‌ಗಳಲ್ಲಿ ನಾನು ಹೋಗಿ argument ಮಾಡಿರುತ್ತೇನೆ. ಆಮೇಲೆ High Court ಗೆ ಹೋಗುವುದು, remand ಮಾಡುವುದು. Land Reforms Act ಬಂದ ಮೇಲೆ, ಯಾವ ರೈತರು ಉಳುಮೆ ಮಾಡುತ್ತಾರೆ ಅವರ ಹಕ್ಕನ್ನು ಯಾರ ಕಡೆಯಿಂದಲೂ ಕಸಿದುಕೊಳ್ಳುವುದಕ್ಕಾಗಲಿಲ್ಲ. ಎಷ್ಟೋ ಪ್ರಕರಣಗಳನ್ನು High Court ಗೆ ಹೋದಂಥ ಸಂದರ್ಭದಲ್ಲಿ ನ್ಯಾಯಾಧೀಶರು ಸಹಿತ, ರೈತ actually possession ದಲ್ಲಿ ಇದ್ದಾನಲ್ಲಾ, ಅವನ ಸರಿಯಾದಂಥ ದಾಖಲೆಗಳು ಅದಾವೋ ಇಲ್ಲವೋ? ಎಷ್ಟೋ ಕಡೆ compromise petition file ಮಾಡಿಕೊಂಡು ಆ ರೈತನಿಂದ ಹಕ್ಕು ಬಿಡಿಸಿಕೊಂಡಿರುವಂಥದ್ದು ಕೋರ್ಟಿನಲ್ಲಿ ಪ್ರಕರಣಗಳು ಆಗಿರುತ್ತವೆ.

(ಮುಂದು)

24.3.2017/1.00(16)/UD.HS

ಶ್ರೀ ಜಗದೀಶ್ ಶೆಟ್ಟರ್ (ಮುಂದು. . . .)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

Original suite ನಲ್ಲಿ compromise petition file ಮಾಡಿ ರೈತರಿಂದ ನನಗೆ ಇದರಲ್ಲಿ ಏನೂ ಹಕ್ಕಿಲ್ಲ ಎಂದು ಬರೆಸಿಕೊಂಡಿದ್ದು ಇದ್ದಾಗೂ ಹೈಕೋರ್ಟ್‌ನಲ್ಲಿ ಬಂದಾಗ, ಇಲ್ಲ ಇದರಲ್ಲಿ ಏನೋ ಮೋಸ ಕಾಣುತ್ತಿದೆ, ಆ ರೀತಿ compromise ಆಗಲು ಸಾಧ್ಯವಿಲ್ಲ. ಆತ actual possession ನಲ್ಲಿದ್ದಾನಲ್ಲಾ, ಇದನ್ನು ಮತ್ತೆ ನಾನು ಅಲ್ಲಿಗೆ ವಾಪಸ್ ಕಳುಹಿಸುತ್ತೇನೆ ಎಂದು ಹೇಳುತ್ತಾರೆ. ಇದರಲ್ಲಿ ಏನೋ ಮೋಸ ಆಗಿದೆ ಎಂದು ಹೈಕೋರ್ಟ್‌ನ ನ್ಯಾಯಾಧೀಶರು ಸದ್ಯಕ್ಕೆ ಎಷ್ಟೋ ಸಲ Tribunal ಗೆ ವಾಪಸ್ಸು ಕಳುಹಿಸಿರುವುದು ನಮಗೆಲ್ಲಾ ಗೊತ್ತಿದೆ. ಹೀಗಾಗಿ ಆ ರೀತಿ ಒಂದು ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದನ್ನು ನಾವೆಲ್ಲಾ ಮಾಡಬೇಕಾಗಿದೆ. ಇವತ್ತು ಇದೊಂದು ಬಹಳ ಒಳ್ಳೆಯದಾದ ಬಿಲ್ ಅನ್ನು ಪಾಸ್ ಮಾಡಿದ್ದೀರಿ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಇದನ್ನು ಅನುಷ್ಠಾನ ಮಾಡುವಂತಹ ಸಂದರ್ಭದಲ್ಲಿ ಕೆಲವೊಂದು ತಕರಾರುಗಳು, ಕಾನೂನು ಸೂಕ್ಷ್ಮತೆಗೆ ಬರುತ್ತವೆ. ಅದನ್ನೂ ನಿವಾರಣೆ ಮಾಡುವುದಕ್ಕೆ ಏನಾದರೂ ಮುಂದೆ ತೊಂದರೆಯಾದರೆ ಮತ್ತೊಮ್ಮೆ ಏನಾದರೂ amendment ತರಬೇಕೆಂದರೆ ತೆಗೆದುಕೊಂಡು ಬನ್ನಿ. ಇಲ್ಲಿ ಒಂದು ಬಾರಿ ಬಿಲ್ ಪಾಸ್ ಆದ ಮೇಲೆ ಇಡೀ ಸದನ ಒಪ್ಪಿದ ಮೇಲೆ ಅದು ಪ್ರಾಮಾಣಿಕವಾಗಿ ಅನುಷ್ಠಾನವಾಗುವಂತಹ ಕೆಲಸ ಆಗಬೇಕು. ಆ ಒಂದು ತಾಂಡಾದಲ್ಲಿರುವ ಜನರಿಗೆ ನೇರವಾಗಿ ಇದರ ಲಾಭ ತಲುಪಬೇಕು. ಎಲ್ಲಾದರೂ ತೊಂದರೆಯಾದರೆ, ಏನಾದರೂ ಲೋಪದೋಷ ಇದ್ದರೆ ತಕ್ಷಣ ಸರಿ ಮಾಡುವಂತಹ ಕೆಲಸ ಮಾಡಿ, ನಮ್ಮ ಅಧಿಕಾರಿಗಳಿಗೆ ಸ್ವಲ್ಪ ದಯವಿಟ್ಟು ಹೇಳಿ. ಅನುಷ್ಠಾನ ಮಾಡುವಾಗ ಏನೋ ಒಂದು rules ಮತ್ತೊಂದು ಹೇಳಿ, ಇಲ್ಲ ಇದು ಬರುವುದಿಲ್ಲ, ಆ ರೀತಿ ಇದೆ, ಈ ರೀತಿ ಎಂದು ಹೇಳುತ್ತಾರೆ. ಅದು ಆಗಬಾರದು. ಅದನ್ನು ಅನುಷ್ಠಾನ ಮಾಡುವಂತಹ ಕೆಲಸ ಆಗಬೇಕು. ನೀವೇ ಸಾಕಷ್ಟು ಬಾರಿ ಅಧಿಕಾರಿಗಳನ್ನು ಬೈದಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ: ಕೆಲವು ಅನುಭವ ಹೇಳಿದರೆ ನನಗೇ ಒಂದೊಂದು ಬಾರಿ ತಲೆ ತಗ್ಗಿಸುವಂತಾಗುತ್ತದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿದ್ದಾರೆ. ಬಗರ್‌ಹುಕುಂ ಮಂಜೂರು ಮಾಡುವುದಕ್ಕೆ ಎಲ್ಲಾ ಕಳುಹಿಸಲಾಗಿತ್ತು. ತೀರ್ಮಾನ ಮಾಡಿದ ಕೂಡಲೇ ಸಾಗುವಳಿ ಚೀಟಿಯನ್ನೆಲ್ಲಾ ಕೊಟ್ಟಿದ್ದೇವೆ. ಕೆಲವು ತಹಶೀಲ್ದಾರರು ಅರಣ್ಯ ಇಲಾಖೆಗೆ ಕಳುಹಿಸುತ್ತಾರೆ. ಅದಕ್ಕೆ ಮತ್ತೊಂದು ಸುತ್ತೋಲೆಯನ್ನು ಕಳುಹಿಸಲಾಯಿತು.

ಶ್ರೀ ಕೆ.ಜಿ.ಬೋಪಯ್ಯ: ಮುಜರಾಯಿ ಇಲಾಖೆಯಿಂದ ದೇವಸ್ಥಾನಕ್ಕೆ ಜಾಗ ಕೊಟ್ಟರೆ ಅರಣ್ಯ ಇಲಾಖೆಯಿಂದ NOC ಕೊಡುತ್ತಾರೆ. ಇದು ಯಾವ ಕಾನೂನು ಎಂದು ಗೊತ್ತಾಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಅಲ್ಲ. ಭೂಮಿಯ ಹಿಡಿತ ಇರುವುದೇ ತಹಶೀಲ್ದಾರ ಬಳಿ. ರೆಕಾರ್ಡ್ ಇಡುವುದು ಅವರ authority. ಅವರು ಯಾವ ಜಮೀನಿನಲ್ಲಿದೆ ಅದನ್ನು ಪಕ್ಕಾ ಪೋಡಿ ಮಾಡುವ ಬುದ್ಧಿ ಅವರಿಗೆ ಇಲ್ಲವೆಂದರೆ ನಾನು ಇಲ್ಲಿಂದ ಮತ್ತೊಮ್ಮೆ ಸುತ್ತೋಲೆ ಕಳುಹಿಸಿ ನೀವು ಕಳುಹಿಸಬೇಕಾದೆಲ್ಲಾ ವಾಪಸ್ಸು ತೆಗೆದುಕೊಳ್ಳಿ ನೀವೇ ಪಕ್ಕಾ ಪೋಡಿ ಮಾಡಿ ಅರಣ್ಯ ಜಾಗಕ್ಕೆ ಯಾವುದು ಸೇರಿದೆ ಅದಕ್ಕೊಂದು ಬೇರೆ ನಂಬರ್ ಕೊಡಿ. ನಿಮ್ಮ ಜಾಗದಲ್ಲಿ ನಿಮ್ಮ ಪಾಡಿಗೆ ಕೆಲಸ ಮಾಡಿ ಎಂದು ಕೊಟ್ಟಿದ್ದೇವೆ. ಆದರೂ ಇನ್ನೂ ಕೆಲವರಿಗೆ ಅದು ಹೋಗುವುದಿಲ್ಲ. ಅವರಿಗೆ ಬೈದಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ಅದಕ್ಕಾಗಿ ಸ್ವಲ್ಪ ನಿಗಾವಹಿಸಿ, Rules frame ಮಾಡಿ ಆದಷ್ಟು implement ಆಗುವುದಕ್ಕೆ ಅಧಿಕಾರಿಗಳಿಗೆ clear direction ಕೊಡಿ. ತಾವು ಇಂತಹ ಒಂದು progressive Bill ಅನ್ನು ತೆಗೆದುಕೊಂಡು ಬಂದಿದ್ದೀರಿ. ನಾವು ಸ್ವಾಗತ ಮಾಡಿದ್ದೇವೆ. ಅದನ್ನು ಪಾಸ್ ಕೂಡ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಸಹಿತ ಎಲ್ಲರೂ ಇದಕ್ಕೆ ಸಹಕಾರ ಕೊಟ್ಟಿದ್ದಾರೆ. ಎಲ್ಲರಿಗೂ ನಾನು ಅಭಿನಂದನೆಯನ್ನು ಸಲ್ಲಿಸಿ ಇವತ್ತು ಏನು ಈ ಬಿಲ್ ಅನ್ನು ಮಂಡನೆ ಮಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ, ಮಾನ್ಯ ಅಧ್ಯಕ್ಷರೆ ತಾವೂ ನಿನ್ನೆ ಇದಕ್ಕಾಗಿ ಸದನ ಸಮಿತಿ ಮತ್ತೊಂದು ಏನೂ ಬೇಡ ತಕ್ಷಣ ಪಾಸ್ ಮಾಡಿ ಎಂದು remark pass ಮಾಡಿದಿರಿ ಹೀಗಾಗಿ ಅದು ಒಳ್ಳೆಯದಾಯಿತು. ಇವತ್ತು ಪಾಸ್ ಮಾಡಿದ್ದೇವೆ. ಇದೊಂದು ಒಳ್ಳೆಯ ಬಿಲ್. ಒಳ್ಳೆಯ ಬೆಳವಣಿಗೆ ಎಂದು ನಾನು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ ನನ್ನದು ಒಂದೇ ಒಂದು ವಾಕ್ಯ. ಈ ಬಿಲ್ ಅನ್ನು ಸದನ ಸರ್ವಾನುಮತದಿಂದ ಒಪ್ಪಿದೆ. ಅದು ಅನುಷ್ಠಾನ ಆಗಲೇಬೇಕು. ಇದುವರೆಗೆ ಹೇಳಿರುವವರೆಲ್ಲರಿಗೂ ನಾನು ಧ್ವನಿ ಸೇರಿಸುತ್ತೇನೆ. ಕೆಲವು ಬಿಟ್ಟು ಹೋಗಿರುವ ಶಬ್ಧಗಳು ಇವೆ. ಉದಾಹರಣೆಗೆ ನಮ್ಮ ಭಾಗದಲ್ಲಿ ಗೌಳಿಗಳು ಉಳಿದುಕೊಳ್ಳುವ ಸ್ಥಳಗಳು ಇವೆ. ನಿನ್ನೆ ಇಲ್ಲಿ ಉಲ್ಲೇಖ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಆಯಿತು. ಅದೆಲ್ಲಾ ಈ ಬಿಲ್‌ನಲ್ಲಿ ಬರಲಿಲ್ಲ. ಆ ರೀತಿ ಬಿಟ್ಟು ಹೋಗಿರುವಂತಹ ಬೇರೆ ಬೇರೆ ಪ್ರದೇಶಗಳು, ಬೇರೆ ಬೇರೆ ಭಾಗದಲ್ಲಿ ಬೇರೆ ಬೇರೆ ಹೆಸರಿನಲ್ಲಿದೆ. ಆ ರೀತಿ ಇದನ್ನು ಸೇರಿಸಿಕೊಳ್ಳುವುದಕ್ಕೆ ಮುಂದೆ ಯಾವುದಾದರೂ ಒಂದು ರೀತಿಯಲ್ಲಿ ಅವಕಾಶ ಮಾಡಿಕೊಡಬೇಕು.

ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಇದರಲ್ಲಿಯೇ ಅವಕಾಶ ಇದೆ. ತಾವು ಓದಿ. ನಾವು amendment ನಲ್ಲಿ ಏನು propose ಮಾಡಿದ್ದೇವೆ ಎಂದರೆ, ' ದಾಖಲಿಸಿಲ್ಲದ ಜನವಸತಿಗಳಲ್ಲಿ, 1979 ರ ಜನವರಿ ಒಂದನೇ ದಿನಕ್ಕೆ ನಿಕಟ ಪೂರ್ವದಲ್ಲಿ ಕೃಷಿ ಕಾರ್ಮಿಕನು ಯಾವುದೇ ಗ್ರಾಮದಲ್ಲಿ ತನಗೆ ಸೇರಿರದ ಭೂಮಿಯಲ್ಲಿರುವ ವಾಸದ ಮನೆಯಲ್ಲಿ ಸಾಮಾನ್ಯವಾಗಿ ವಾಸಿಸುತ್ತಿರುವಲ್ಲಿ ಮತ್ತು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016ರ ಪ್ರಾರಂಭದ ದಿನಾಂಕದಂದು ಅಂಥ ವಾಸದ ಮನೆಯಲ್ಲಿ ವಾಸಿಸುತ್ತಿರುವುದನ್ನು ಮುಂದುವರಿಸಿದಲ್ಲಿ, ಅಂಥ ವಾಸದ ಮನೆಯನ್ನು ಅಥವಾ ವಾಸದ ಮನೆಗಳನ್ನು, ಅದು ಇರುವ ನಿವೇಶನದ ಸಹಿತವಾಗಿ ಮತ್ತು ಅದಕ್ಕೆ ನಿಕಟವಾಗಿ ತಾಗಿಕೊಂಡಿರುವ ಹಾಗೂ ಅದರ ಅನುಭೋಗಕ್ಕೆ ಅವಶ್ಯವಾಗಿರುವ ಭೂಮಿಯು, ಜಿಲ್ಲಾಧಿಕಾರಿಯು ಹೊರಡಿಸಿದ ಅಧಿಸೂಚನೆಯ ದಿನಾಂಕದಂದು, ಎಲ್ಲಾ ಉಪಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತಗೊಳ್ಳತಕ್ಕದ್ದು' ಎಂದು ಇದೆ. ಹಾಗಾಗಿ ಯಾವುದೇ ಹೆಸರಿನಲ್ಲಿದ್ದರೂ ಕೂಡ Deputy Commissioner ರವರು notification ಮಾಡಿದರೆ automatically the land vests with the Government.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಆ ಸ್ಪಷ್ಟತೆಯನ್ನು ಜಿಲ್ಲಾಧಿಕಾರಿಗಳಿಗೆ ಮೂಡಿಸಬೇಕು.

ಶ್ರೀ ಟಿ.ಬಿ.ಜಯಚಂದ್ರ: ಇದೆ.

ಅಧ್ಯಕ್ಷರು: ಯಾವುದೇ ಹೆಸರಿನಲ್ಲಿ ಎಂದು ಬರೆದಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವುದು.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಇವತ್ತು ಈ ಸದನ ಒಂದು ಐತಿಹಾಸಿಕ ವಿಧೇಯಕವನ್ನು ಅಂಗೀಕಾರ ಮಾಡಿದೆ. ಬಹುಶ: ಸ್ವಾತಂತ್ರ್ಯದ ನಂತರ 'ಉಳುವವನೆ ಭೂಮಿಯ ಒಡೆಯ', ಎಂದು ಮಾಡಿದಂತಹ ಒಂದು ವಿಧೇಯಕ, ಕಾನೂನು ಏನಿತ್ತು, ಆ ಕಾನೂನಿನ ನಂತರ ಇದೂ ಕೂಡ ಒಂದು ಐತಿಹಾಸಿಕವಾದಂತಹ ಕಾನೂನು. ಮಾನ್ಯ ಕಾಗೋಡು ತಿಮ್ಮಪ್ಪನವರು ಕಂದಾಯ ಸಚಿವರಾದ ಮೇಲೆ, ಮಾನ್ಯ ಕಾಗೋಡು ತಿಮ್ಮಪ್ಪನವರ ಬಗ್ಗೆ ಇಡೀ ಸದನಕ್ಕೆ ಗೊತ್ತಿದೆ. ಅವರಿಗೆ ಭೂಮಿ ಉಳುವವನಾಗಲಿ, ಈ ರೀತಿ ಪ್ರದೇಶಗಳಲ್ಲಿ ವಾಸ ಮಾಡತಕ್ಕಂಥವರಾಗಲಿ, ಅವರಿಗೆ ಹಕ್ಕು ಪತ್ರ ಕೊಡಬೇಕು ಎನ್ನುವುದು ಅವರ ಇರಾದೆ. ಅದಕ್ಕಾಗಿ ಅವರು ತಮ್ಮ ಜೀವನದುದ್ದಕ್ಕೂ ಹೋರಾಟ ಮಾಡಿಕೊಂಡು ಬಂದಿದ್ದಾರೆ, ಕಾಗೋಡು ಚಳುವಳಿ, ಅಲ್ಲೆಲ್ಲಾ ಭಾಗವಹಿಸಿದಂಥವರು, ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದಂಥವರು. ಅವತ್ತಿನಿಂದಲೂ ಕೂಡ ಇಂತಹ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ಮಾಡಿಕೊಂಡು ಬರುತ್ತಿದ್ದಾರೆ. ಅವರು ಕಂದಾಯ ಸಚಿವರಾದ ಮೇಲೆ ಇದಕ್ಕೆ ವೇಗ ಸಿಕ್ಕಿತು. ಏಕೆಂದರೆ ಇದು ಇವರು ಕಂದಾಯ ಸಚಿವರಾದ ಮೇಲೆ ಉದ್ಭವಿಸಿದಂತಹ ವಿಚಾರ ಅಲ್ಲ. ನಾವು ಇದನ್ನು ನಮ್ಮ manifesto ದಲ್ಲಿಯೇ ಹೇಳಿದ್ದೆವು. ಅದು ನಿಮಗೂ ಗೊತ್ತಿದೆ. ಇಂತಹ ಗ್ರಾಮಗಳು ಯಾವ್ಯಾವುದು ಇವೆ, ಅದು ತಾಂಡಾ ಇರಬಹುದು, ಗೊಲ್ಲರಹಟ್ಟಿ ಇರಬಹುದು, ನಾಯಕರ ಹಟ್ಟಿ ಇರಬಹುದು, ಕುರುಬರ ಹಟ್ಟಿ ಇರಬಹುದು, ಮಜರೆ ಇರಬಹುದು, ಇಂತಹ ಯಾವುದಾದರೂ ಇರಬಹುದು, ಮಾನ್ಯ ಸದಸ್ಯರು ಹೇಳಿದರಲ್ಲಾ ಅದಕ್ಕೆ ಯಾವುದಕ್ಕೂ ಅವಕಾಶವಿಲ್ಲ. ಜಿಲ್ಲಾಧಿಕಾರಿಗಳಿಗೆ ಪೂರ್ಣ ಅಧಿಕಾರ ಇದೆ. ಅದರ ಜೊತೆಗೆ ನಮ್ಮ ಕಂದಾಯ ಇಲಾಖೆಯಲ್ಲಿ ಯಾವ್ಯಾವುದು ದಾಖಲೆ ರಹಿತವಾದ ಜನವಸತಿಗಳು ಇವೆ ಅವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವುದಕ್ಕೆ ಒಂದು ವಿಶೇಷ ಕೋಶವನ್ನೇ ನಾವು ರಚಿಸಿದ್ದೇವೆ. ಏನೂ ದಾಖಲೆ ಇಲ್ಲದಿರುವುದು, ಯಾರು ವಾಸ ಮಾಡುತ್ತಾರೆ ಅವರಿಗೆ ಹಕ್ಕು ಪತ್ರ ಕೊಡುವುದಕ್ಕೆ ಒಂದು ವಿಶೇಷ ಕೋಶ ರಚನೆ ಮಾಡಿದ್ದೇವೆ. ಆದ್ದರಿಂದ ಇದರಲ್ಲಿ ಯಾವುದೇ ಗೊಂದಲಗಳು ಇಲ್ಲ. ಅಧಿಸೂಚನೆ ಹೊರಡಿಸುವುದಕ್ಕೆ, ಎಲ್ಲದ್ದಕ್ಕೂ ಜಿಲ್ಲಾಧಿಕಾರಿಗಳಿಗೆ ಎಲ್ಲಾ ಅಧಿಕಾರ ಇದೆ. ಈ ವಿಧೇಯಕದಲ್ಲಿಯೂ ಕೂಡ ಬಹಳ ಸ್ಪಷ್ಟವಾಗಿದೆ. ಈಗಾಗಲೇ ಅದನ್ನು ನಮ್ಮ ಕಾನೂನು ಸಚಿವರು ಓದಿ ಹೇಳಿದ್ದಾರೆ. ನಾನು ಇದಕ್ಕೋಸ್ಕರವಾಗಿ ಶ್ರೀ ನರಸಿಂಹಯ್ಯ, Retired Special D.C ಅವರ ನೇತೃತ್ವದಲ್ಲಿ ಒಂದು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸಮಿತಿ ರಚನೆ ಮಾಡಿದೆ. ಮಾನ್ಯ ಶಿವಮೂರ್ತಿಯವರು ಇಲ್ಲಿದ್ದಾರೆ. ಅವರು ಸಾರ್ ನೀವು manifesto ದಲ್ಲಿ ಘೋಷಣೆ ಮಾಡಿದ್ದೀರಿ ಅದನ್ನು ಅನುಷ್ಠಾನ ಮಾಡಬೇಕು ಎಂದು ನಮ್ಮ ಸರ್ಕಾರ ಬಂದಾಗಿನಿಂದಲೂ ಕೂಡ ಮತ್ತು ಈ ವರ್ಗಕ್ಕೆ ಸೇರಿದ ಅನೇಕ ಮಾನ್ಯ ಸದಸ್ಯರುಗಳು ಮೇಲಿಂದ ಮೇಲೆ ಒತ್ತಡ ಮಾಡುತ್ತಿದ್ದರು. ಇಲ್ಲಪ್ಪಾ ಅದಕ್ಕೆ ಕಾನೂನು ತರಬೇಕಾಗುತ್ತದೆ. ಹಾಗೆಯೇ ನೇರವಾಗಿ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಒಂದು ವರದಿಯನ್ನು ತರಿಸಿಕೊಳ್ಳೋಣ ಎಂದು ನಾನು Retired Special D.C, ಅವರು ಕಂದಾಯ ಇಲಾಖೆಯಲ್ಲಿ ಕೆಲಸ ಮಾಡಿದವರು, ಅನುಭವ ಇರತಕ್ಕವರು ಅವರ ನೇತೃತ್ವದಲ್ಲಿ ಒಂದು ಸಮಿತಿ ರಚನೆ ಮಾಡಿದೆ ಮತ್ತು ಅದಕ್ಕೆ ಕಾನೂನಿನ ಬೆಂಬಲ ಇರಬೇಕಲ್ಲಾ, ಅದಕ್ಕೋಸ್ಕರ ಕಾನೂನು ಇಲಾಖೆಯ ಕಾರ್ಯದರ್ಶಿಯಾಗಿದ್ದಂತಹ ಶ್ರೀ ಎಂ.ಆರ್ ಹೆಗಡೆ ಅವರು ನಿಮಗೂ ಗೊತ್ತಿರಬಹುದು, he is well equipped in Law. ಅವರನ್ನೂ ಕೂಡ ಅದಕ್ಕೆ ಸದಸ್ಯರನ್ನಾಗಿ ಮಾಡಿದೆವು. ಇನ್ನೊಬ್ಬರು ನಿವೃತ್ತ ಹಿರಿಯ ಕೆ.ಎ.ಎಸ್ ಅಧಿಕಾರಿ, ಅವರ ಜೊತೆಗೆ ಶ್ರೀ ಅನಂತರಾಮಯ್ಯ, ನಿವೃತ್ತ ಜಂಟಿ ನಿರ್ದೇಶಕರು ಇವರನ್ನೆಲ್ಲಾ ಸೇರಿಸಿ ಒಂದು ಸಮಿತಿ ರಚನೆ ಮಾಡಲಾಯಿತು. ಅವರು ಒಂದು ವರದಿ ಕೊಟ್ಟರು. ಆ ವರದಿಯನ್ನೂ ಕೂಡ ಇಟ್ಟುಕೊಂಡು ನಾವು ಇದನ್ನು ಮಾಡಲು ಪ್ರಾರಂಭ ಮಾಡಿದೆವು.

ಮುಂದು. . . .

24-03-2017-1-10-17-MS-SSD.

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು): (ಮುಂದು)

ಕಾನೂನಿನ ಬಗ್ಗೆ ಏನೆಲ್ಲಾ ತೊಡಕುಗಳಿವೆ ಅದನ್ನು ನಿವಾರಣೆ ಮಾಡುವುದಕೋಸ್ಕರವಾಗಿ ಅದಕ್ಕೆ ನಮ್ಮ ಕಾನೂನು ಸಚಿವರು ಕೂಡ ಕೈಜೋಡಿಸಿದ್ದಾರೆ. High Court Judgeಗಳ ಜೊತೆಯಲ್ಲಿ ಚರ್ಚೆ ಮಾಡಿ ಈ ವಿಧೇಯಕವನ್ನು ತಯಾರು ಮಾಡಿದ್ದಾರೆ. ಹಾಗಾಗಿ ಇವತ್ತು ಯಾರ್ಯಾರು ವಾಸವಾಗಿದ್ದಾರೆ ಅವರೆಲ್ಲರಿಗೂ ಕೂಡ ಮಾಲೀಕರಾಗುತ್ತಾರೆ. ಹೇಗೆ ಎಂದರೆ " ಉಳುವವನೆ ಭೂಮಿಯ ಒಡೆಯ " ಎಂದು ಹೇಳುತ್ತಿದ್ದೇವಲ್ಲಾ. ಹಾಗೆಯೇ ಎಲ್ಲಾ ಜನವಸತಿಗಳಲ್ಲಿರುವ ಎಲ್ಲರೂ ಕೂಡ ಅವರು ಮಾಲೀಕರಾಗುತ್ತಾರೆ. ಆದರೆ ಇದು ಒಂದು ಪ್ರಗತಿದಾಯವಾದುದು ಎನ್ನುವುದಕ್ಕಿಂತ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕ್ರಾಂತಿಕಾರಕವಾದಂತಹದ್ದು. Not only progressive, it is revolutionary. ಕ್ರಾಂತಿಕಾರಕವಾದಂತಹ ವಿಧೇಯಕ. ಇದನ್ನು ಈ ಸದನ ಇವತ್ತು ಎಲ್ಲರೂ ಕೂಡ ಸರ್ವಾನುಮತದಿಂದ ಒಪ್ಪಿಕೊಂಡಿದ್ದಾರೆ. ಈ ಸದನದಲ್ಲಿ ಸುವರ್ಣಾಕ್ಷರಗಳಲ್ಲಿ ಇಡಬೇಕಾದಂತಹ ಒಂದು ದಾಖಲಾತಿ ಎನ್ನುವುದನ್ನು ಹೇಳಬೇಕಾಗುತ್ತದೆ. ಇವತ್ತು ಆ ಜನರೆಲ್ಲರೂ ಕೂಡ ಸ್ವತಂತ್ರರಾದರು ಮತ್ತು ಹಕ್ಕುದಾರರಾದರು. ಅನೇಕ ವರ್ಷಗಳಿಂದ ಅನೇಕ ಸವಲತ್ತುಗಳಿಂದ ವಂಚಿತರಾಗಿದ್ದಂತಹ ಜನರಾಗಿದ್ದರು. ಆ ಎಲ್ಲಾ ಜನರೆಲ್ಲರೂ ಇವತ್ತು ಒಂದು ರೀತಿಯಲ್ಲಿ ಸ್ವಾತಂತ್ರ್ಯ ಸಿಕ್ಕಿದ ರೀತಿಯಲ್ಲಿ ಅವರೆಲ್ಲರೂ ಕೂಡ ಮಾಲೀಕರಾಗುತ್ತಿದ್ದಾರೆ. ಅಂತಹ ಒಂದು ಘಳಿಗೆ ಇದು ಎಂದು ಹೇಳಿ ನಾನು ಇವತ್ತು ನೆನಪು ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ. ಇಂತಹ ಒಂದು ಕಾಯಿದೆಯನ್ನು ಪಾಸು ಮಾಡುವುದಕ್ಕೆ ವಿರೋಧಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು, ಜೆಡಿಎಸ್ ನಾಯಕರಾದಂತಹ ಕುಮಾರಸ್ವಾಮಿಯವರು, ಎರಡು ಸದನದ ಎಲ್ಲಾ ಮಾನ್ಯ ಸದಸ್ಯರುಗಳು, ಎಲ್ಲರೂ ಕೂಡ ಒಕ್ಕೊರಲಿನಿಂದ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರವಾಗಿ ಇವರೆಲ್ಲರಿಗೂ ಕೂಡ ನಾನು ಅಭಿನಂದನೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಅದರಲ್ಲಿಯೂ ವಿಶೇಷವಾಗಿ ಕಾಗೋಡುತಿಮ್ಮಪ್ಪನವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಮಗೆ ಸಂತೋಷ ಏನೆಂದರೆ, ನಾವು ಅತ್ಯಂತ ಪ್ರಾಮುಖ್ಯವಾದಂತಹ ಭರವಸೆಯನ್ನು ಈ ನಾಡಿನ ಜನರಿಗೆ ಇಂತಹ ಸ್ಥಳಗಳಲ್ಲಿ ವಾಸ ಮಾಡತಕ್ಕಂತಹ ಜನರಿಗೆ manifesto ಮೂಲಕ ಕೊಟ್ಟಿದ್ದೇವು. ನಮ್ಮ manifesto ನಲ್ಲಿದ್ದಂತಹ ಪ್ರಮುಖವಾದಂತಹ ಭರವಸೆಯು ಜಾರಿಯಾಗಿದೆ ಎನ್ನುವ ಕಾರಣಕ್ಕಾಗಿ ಹೇಳುತ್ತಿದ್ದೇನೆ. ನಾನು ಮತ್ತೊಮ್ಮೆ ಎಲ್ಲರಿಗೂ ಧನ್ಯವಾದಗಳನ್ನು ಹೇಳಿ ಅದರಲ್ಲಿಯೂ ಮಾನ್ಯ ಸಭಾಧ್ಯಕ್ಷರಾದ ನೀವು ವಿಶೇಷವಾಗಿ ಕಾಳಜಿ ವಹಿಸಿದ್ದೀರಿ. ನಿಮ್ಮ ಕ್ಷೇತ್ರದಲ್ಲಿಯೂ ಬಹಳ ಜನರು ಇದ್ದಾರೆ.

ಅಧ್ಯಕ್ಷರು: ಇದ್ದಾರೆ.

ಶ್ರೀ ಕೆ.ಶಿವಮೂರ್ತಿ: ಆಗ ರಾಹುಲ್ ಗಾಂಧಿಯವರು ಬಂದಿದ್ದರು.

ಅಧ್ಯಕ್ಷರು:ಮುಖ್ಯಮಂತ್ರಿಗಳೆ, ರಾಹುಲ್ ಗಾಂಧಿಯವರು ನಮ್ಮ ಊರಿಗೆ ಬಂದಿದ್ದರಲ್ಲಾ. ಆಗಲೂ ಸಹಿತ ಅವರ ಗಮನಕ್ಕೆ ತಂದಿದ್ದೇವು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು): ಹೌದು, ಹೌದು. ರಾಹುಲ್‌ಗಾಂಧಿಯವರು ಮತ್ತು ನೀವು ಒಂದು ಪಾದಯಾತ್ರೆ ಮಾಡಿದ್ದೀರಲ್ಲಾ. ಆ ಟೈಮ್‌ನಲ್ಲಿ ಶಿವಮೂರ್ತಿಯವರು ಅಲ್ಲಿಗೆ ಒಂದು ದೊಡ್ಡ ನಿಯೋಗವನ್ನೆ ಕರೆದುಕೊಂಡು ಬಂದುಬಿಟ್ಟಿದ್ದರು. ಅಲ್ಲಿ ಒಂದು ದೊಡ್ಡ ಸಭೆಯಾಯಿತು. ಅಲ್ಲಿ ರಾಹುಲ್‌ಗಾಂಧಿಯವರು, ನಾನು ಮತ್ತು ನೀವು ಎಲ್ಲರೂ ಇದ್ದೆವು.

ಅಧ್ಯಕ್ಷರು: ಹೌದು.

ಶ್ರೀ ಸಿದ್ದರಾಮಯ್ಯ: ಅವರೂ ಕೂಡ ಇದು ಆಗಲೇ ಬೇಕೆಂದು ಒತ್ತಡ ಮಾಡಿ ಹೇಳಿದ್ದರು. ಅವರಿಗೂ ಸಹ ಧನ್ಯವಾದಗಳನ್ನು ಹೇಳುತ್ತೇನೆ. ಮತ್ತೊಮ್ಮೆ ನಿಮಗೆಲ್ಲರಿಗೂ ಧನ್ಯವಾದಗಳನ್ನು ಹೇಳುತ್ತೇನೆ. ಇವತ್ತು ಈ ರಾಜ್ಯದ ಜನರು ಯಾರು ಅಲ್ಲಿ ವಾಸ ಮಾಡುವಂತಹ ಜನರಿಗೆ ಶುಭವಾಗಲಿ, ಇವರು ಸ್ವತಂತ್ರರಾದರು ಅಂತ ಹೇಳಿ ಅವರಿಗೂ ಕೂಡ ಶುಭ ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಎಲ್ಲರೂ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು): ಮಾನ್ಯ ಸಭಾಧ್ಯಕ್ಷರು, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ರೀತಿಯಲ್ಲಿ ಇದು ಒಂದು ಕ್ರಾಂತಿಕಾರಕವಾಗಿರುತ್ತದೆ ಮತ್ತು ಈ ಶಾಸನಸಭೆಯಲ್ಲಿ ಶಾಶ್ವತವಾಗಿ ನೆಲೆಯೂರಿ ನಿಲ್ಲುವಂತಹ ಗುರುತಾಗಿದೆ. ಈ ಸನ್ನಿವೇಶದಲ್ಲಿ ಭಾಗವಹಿಸುವ ಭಾಗ್ಯ ಸಿಕ್ಕಿದೆಯಲ್ಲಾ, ಅದಕ್ಕಾಗಿ ನಾನು ಅತ್ಯಂತ ಸಂತೋಷಪಡುತ್ತೇನೆ. ಏಕೆಂದರೆ **" ಉಳುವವನೆ ಹೊಲದ ಒಡೆಯ "** ಎನ್ನುವಂತಹ ಘೋಷಣೆ ಇತ್ತು , ತತ್ವ ಸಿದ್ಧಾಂತ ಇತ್ತು. ಆದರೆ ವಾಸ ಮಾಡುವವನಿಗೆ ಒಡೆಯ ಎನ್ನತಕ್ಕಂತಹದ್ದು ಘೋಷಣೆಯಾಗಿ ಬಂದಿರಲಿಲ್ಲ, ತತ್ವವಾಗಿ ಕಂಡಿರಲಿಲ್ಲ. ಏಕೆಂದರೆ ಇದೇ ಜಾಗದಲ್ಲಿ 1961ರಲ್ಲಿ ಭೂಸುಧಾರಣೆ ಕಾಯಿದೆಯು ಬಂದರೆ ಅದು 1964ರಲ್ಲಿ ಜಾರಿಗೆ ಕೊಟ್ಟರು. ಇದನ್ನು 1964ರಲ್ಲಿ ಜಾರಿಗೆ ಕೊಟ್ಟರೆ 1972ರವರೆಗೆ ಒಬ್ಬನೇ ಒಬ್ಬ ಗೇಣಿ ರೈತನಿಗೆ ಹಕ್ಕು ಸಿಕ್ಕಿರಲಿಲ್ಲ, ಅದು ಸತ್ತುಹೋಗಿತ್ತು. ಆದರೆ ದೇವರಾಜುಅರಸುರವರು, ಶ್ರೀಮಾನ್ ಸಿದ್ದರಾಮಯ್ಯನವರು ಆ ಜಾಗದಲ್ಲಿ ಕುಳಿತಿದ್ದಾರಲ್ಲಾ, ಅವರು ಆ ಜಾಗದಲ್ಲಿ ಕುಳಿತಾಗ ಅದಕ್ಕೆ ಹೊಸ ಜೀವ ಬಂದು ತಿದ್ದುಪಡಿ ಕಾನೂನು ತರುವುದರ ಮುಖಾಂತರವಾಗಿ ಯಾವ ತತ್ವವನ್ನು ಅನುಸರಿಸಿಕೊಂಡಿದ್ದರೊ ಅದೇ ತತ್ವವನ್ನು ಸೇರಿಸಿದರು. ಅವತ್ತು ಯಾರ್‍ಯಾರು ಗೇಣಿ ರೈತರು ಸಾಗುವಳಿ ಮಾಡುತ್ತಿದ್ದರೋ ಅವರಿಗೆ ಹಕ್ಕುಪತ್ರವನ್ನು ಕೊಡುವಂತಹ ಒಂದು ಹೊಸ ತಿದ್ದುಪಡಿ ಕಾನೂನನ್ನು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತರುವುದರ ಮುಖಾಂತರ ತತ್ವಕ್ಕೆ ಒಂದು ಶಾಶ್ವತವಾದಂತಹ ನೆಲಗಟ್ಟನ್ನು ತಂದುಕೊಟ್ಟಿದ್ದಾರೆ. ಇವತ್ತು ಬೇರೆಯವರ ಜಾಗದಲ್ಲಿ ಕೂಲಿಕಾರ್ಮಿಕರು ಇವತ್ತು ಅಲ್ಲಿ ವಾಸವಾಗಿದ್ದಾರೆ, ಅವರಿಗೆ ಯಾವುದೇ ದಾಖಲೆ, ವಗೈರೆ ನೋಡದೆಯೇ ವಾಸವಾಗಿರುವುದನ್ನೆ ಶಾಶ್ವತವಾದ ದಾಖಲೆ ಎಂದು ತಿಳಿದುಕೊಂಡು ಅವರಿಗೆ ಹಕ್ಕುಪತ್ರ ಕೊಡುವಂತಹ ಕೆಲಸ ಮಾಡಿರುವುದು ಇದೆಯಲ್ಲಾ ಮಾನ್ಯಮುಖ್ಯಮಂತ್ರಿಗಳು ಹೇಳಿದ್ದಾರಲ್ಲಾ ಇದು ಇತಿಹಾಸವನ್ನು ಸೃಷ್ಟಿಮಾಡುವಂತಹ ಕೆಲಸ ಆಗಿದೆ. ಮಾನ್ಯ ಅಧ್ಯಕ್ಷರೆ, ಸರ್ಕಾರದ ಭೂಮಿ ಎಂದರೆ ನಾವು ಹಕ್ಕು ಪತ್ರ ಕೊಡುವುದಕ್ಕೆ 94(ಸಿ)ಯಲ್ಲಿ ತಂದಿದ್ದೇವೆ. ಏಕೆ ನಾನು ಈ ಮಾತನ್ನು ಹೇಳುತ್ತೇನೆಂದರೆ ಒಬ್ಬ ಮನುಷ್ಯ ಬದುಕಿದ್ದಾನೆ, ಬದುಕಿರುವಂತಹ ಮನುಷ್ಯನಿಗೆ ಅವನು ಬದುಕುವಂತಹ ಜಾಗದ ಹಕ್ಕು ಇಲ್ಲದೆಹೋದರೆ ಈ ಜಗತ್ತಿನಲ್ಲಿ ಅವನು ಏನು ಕಾಣುತ್ತಾನೆ ಎನ್ನುವಂತಹ ಸಿದ್ದಾಂತದಲ್ಲಿ ನಂಬಿಕೆ ಇಟ್ಟು ಅದರಲ್ಲಿಯೂ ಕೂಡ ಅಷ್ಟೆ ನಾನು ತೀವ್ರವಾಗಿ ಪ್ರಯತ್ನಗಳನ್ನು ಮಾಡಿ ಸಮಯಬದ್ಧವಾಗಿ ಹಕ್ಕುಪತ್ರ ಕೊಟ್ಟಿದ್ದೇನೆ. ಇವತ್ತು ಮತ್ತೊಂದು ಹೊಸ ದಾಖಲೆಯಾಗಿದೆ. ತಾವು ವಿಶೇಷವಾಗಿ ಕುಳಿತುಕೊಂಡು ಇದಕ್ಕಾಗಿ ಪ್ರೋತ್ಸಾಹವನ್ನು ನೀಡಿದ್ದೀರಿ. ನಾನು ಈ ಸದನದ ಪ್ರತಿಯೊಬ್ಬ ಸದಸ್ಯರಿಗೂ, ವಿರೋಧ ಪಕ್ಷದ ನಾಯಕರಿಗೂ ವಿಶೇಷವಾದಂತಹ ಕೃತಜ್ಞತೆಯನ್ನು ಸಲ್ಲಿಸಿ ಈ ಒಂದು ಕ್ರಾಂತಿಕಾರವಾದಂತಹ ಹೆಜ್ಜೆಗೆ ನಾವು ಮತ್ತು ನೀವುಗಳೆಲ್ಲರೂ ಸೇರಿ ದಾರಿ ತುಳಿಯೋಣ ಎನ್ನುವಂತಹ ಮಾತನ್ನು ಹೇಳಿ ತಮ್ಮೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಆಂಜನೇಯ( ಸಮಾಜಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಫಲಾನುಭವಿಗಳು ಯಾರು ಇದ್ದಾರೆ. ಇವರೆಲ್ಲರೂ ಕೂಡ ಸಮಾಜಕಲ್ಯಾಣ ಇಲಾಖೆಗೆ ಬರತಕ್ಕಂತಹವರಾಗಿದ್ದಾರೆ. ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಕ್ಕೆ ಸೇರಿದಂತಹ ಜನರಾಗಿದ್ದಾರೆ. ಬಹುದಿನಗಳಿಂದ ನಾವು ಎಲ್ಲಿಗೆ ಹೋದರೂ ಕೂಡ ನಾವು ಹಟ್ಟಿಯಲ್ಲಿ , ತಾಂಡದಲ್ಲಿ ವಾಸಮಾಡುತ್ತೇವೆ ಕಂದಾಯ ಗ್ರಾಮಗಳನ್ನಾಗಿ ಮಾಡಬೇಕೆಂದು ಹೇಳಿ ಆಗಿಂದಾಗ್ಗೆ ನಮಗೆ ಮನವಿಯನ್ನು ಕೊಡುವಂತಹ ದೃಶ್ಯವನ್ನು ನೋಡುತ್ತಿದ್ದೇವು. ಅಂತಹದಕ್ಕೆ ಶಾಶ್ವತವಾದಂತಹ ಪರಿಹಾರ ನೀಡುವಂತಹ ಕೆಲಸವನ್ನು ಇವತ್ತು ನಮ್ಮ ಸರ್ಕಾರವು ಮಾಡಿದೆ. ಅದಕ್ಕಾಗಿ ಸಮಾಜಕಲ್ಯಾಣ ಸಚಿವನಾಗಿ ವಿಶೇಷವಾಗಿ ಆ ವರ್ಗದ ಜನರನ್ನು ಪ್ರತಿನಿಧಿಸುವಂತಹ ಪ್ರಧಾನ ಇಲಾಖೆಯ ಮಂತ್ರಿಯಾಗಿದ್ದೇನೆ. ಈ ಸದನದ ಎಲ್ಲಾ ಸದಸ್ಯರಿಗೂ ಈ

ಬಿಲ್ ಪಾಸ್ ಮಾಡಿರುವುದಕ್ಕಾಗಿ ಹಾಗೂ ವಿಶೇಷವಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀಮಾನ್ ಸಿದ್ದರಾಮಯ್ಯನವರಲ್ಲಿ ಇರತಕ್ಕಂತಹ ಸಾಮಾಜಿಕ ನ್ಯಾಯದ ಒಂದು ಬದ್ಧತೆ ಇವತ್ತು ಸಹಕಾರಗೊಳಿಸಿದೆ. ಅದೇ ರೀತಿಯಾಗಿ ಸಮಾಜವಾದದ ಹಿನ್ನೆಲೆಯಿಂದ ಬಂದಿರತಕ್ಕಂತಹ ನಮ್ಮ ಕಂದಾಯ ಸಚಿವರಾದಂತಹ ಶ್ರೀಮಾನ್ ಕಾಗೋಡು ತಿಮ್ಮಪ್ಪನವರಿಗೂ ಮತ್ತು ನಮ್ಮ ಶಿವಮೂರ್ತಿಯವರಿಗೂ, ಉಳಿದಂತಹ ಎಲ್ಲಾ ಸದಸ್ಯರುಗಳಿಗೂ ಮತ್ತೊಮ್ಮೆ ಧನ್ಯವಾದಗಳನ್ನು ಹೇಳುತ್ತೇನೆ. ಎಲ್ಲರಿಗೂ ನಮಸ್ಕಾರ.

ಅಧ್ಯಕ್ಷರು: ಸದನದಲ್ಲಿ ಇವತ್ತು....

ಶ್ರೀ ಬೈರತಿ ಬಸವರಾಜ್: ಬಹಳ ಮುಖ್ಯವಾಗಿರುವಂತಹ ವಿಷಯವಾಗಿದೆ.

ಅಧ್ಯಕ್ಷರು: ನಿಮಗೆ ಆಗಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನಲ್ಲಾ.

ಶ್ರೀ ಬೈರತಿ ಬಸವರಾಜ್: ಬೆಂಗಳೂರು ನಗರದಲ್ಲಿ ಏನಾಗಿದೆ ಎಂದರೆ ಹಲವಾರು ಕೆರೆಗಳು ಇವತ್ತು ನಿರ್ಜೀವವಾಗಿ ಕಳೆದುಕೊಂಡಿದೆ.

ಅಧ್ಯಕ್ಷರು: ಕೆರೆಗೆ ಸಂಬಂಧಪಟ್ಟಂತೆ ಈಗ ಚರ್ಚೆಯಾಗುತ್ತಿಲ್ಲ. ಸಂಬಂಧವಿಲ್ಲದಿರುವಂತಹ ವಿಷಯದ ಬಗ್ಗೆ ಮಾತನಾಡಿದರೆ ಹೇಗೇ? ಆಯಿತು ಬಿಡಿ. ಈಗ ಸದನದಲ್ಲಿ ಒಕ್ಕೊರಲಿನಿಂದ ಎಲ್ಲಾ ಸದಸ್ಯರು, ಮುಖ್ಯಮಂತ್ರಿಗಳು, ವಿರೋಧಪಕ್ಷದ ನಾಯಕರು, ಕಾನೂನು ಸಚಿವರು, ರೆವಿನ್ಯೂ ಸಚಿವರು, ಎಲ್ಲರೂ ಸಹ ಅಭಿನಂದನೆಗಳನ್ನು ಸಲ್ಲಿಸಿದ್ದೀರಿ. ಪ್ರತಿಯೊಬ್ಬ ಸದಸ್ಯರು ಸಹ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ನಾನು ಏತಕ್ಕಾಗಿ ಸಲ್ಲಿಸಬಾರದು. ನಾನು ಸಹ ಅಭಿನಂದನೆಯನ್ನು ಸಲ್ಲಿಸಬೇಕೆಂದು ಮನಸ್ಸು ಇದೆ. ಇದು ಒಂದು ಕ್ರಾಂತಿಕಾರಕವಾದಂತಹ ಇದೊಂದು ವಿಧೇಯಕವನ್ನು ಇವತ್ತು ನಾವು ಪಾಸು ಮಾಡಿದ್ದೇವೆ. ಏಕೆ ಕ್ರಾಂತಿಕಾರಕ ಎಂದು ಹೇಳಿದರೆ ಹಿಂದೆ ನಾನು ಮೊದಲನೆ ಬಾರಿ 1972ರಲ್ಲಿ ಎಂಎಲ್ಎ ಆದಾಗ ದೇವರಾಜ್ ಅರಸುರವರು, ಶ್ರೀಮತಿ ಇಂದಿರಾಗಾಂಧಿಯವರ 20 ಅಂಶಗಳ ಕಾರ್ಯಕ್ರಮಗಳಾದ "ಉಳುವವನೇ ಭೂಮಿಯ ಒಡೆಯ" ಎನ್ನುವಂತಹ ಕ್ರಾಂತಿಕಾರಕವಾದಂತಹ ಬದಲಾವಣೆಗಳನ್ನು ಅಂದು ತಂದರು. Bank Nationalization ಮಾಡಿದರು. Privy purse ತಂದರು. ಇಂತಹ ಕ್ರಾಂತಿಕಾರಕವಾದಂತಹ ಒಂದು ವಿಧೇಯಕ ಪುನ: ಇವತ್ತು ಈ ಸದನದಲ್ಲಿ ಕಾಣುತ್ತಿದ್ದೇವೆ. ಈ ಒಂದು ಕ್ರಾಂತಿಕಾರಕವಾದಂತಹ ವಿಧೇಯಕವನ್ನು ತಂದು ಇವತ್ತು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಎಲ್ಲರೂ ಒಮ್ಮತದಿಂದ ಇದನ್ನು ನಾವು ಪಾಸು ಮಾಡಿದ್ದೇವೆ. ಅಂದು Land Reforms Act ಅನ್ನು ಉಳುವವನೇ ಒಡೆಯ ಆದರೆ ಇವತ್ತು ವಾಸವಾಗಿರುವವನೆ ಆ ಮನೆಯ ಒಡೆಯ ಅನ್ನತಕ್ಕಂತಹ ಈ ಕಾರ್ಯಕ್ರಮವನ್ನು ನಾವು ತಂದಿದ್ದೇವೆ. ಇದಕ್ಕೆ ಯಾವುದೇ ಹೆಸರು ಇರಲಿ, ಹಿಂದೆ ನಾವು Land Reforms Act ತಂದಾಗ ನಾನು ಕೂಡ ಶಾಸಕನಾಗಿದ್ದೆ. ಆ ಕಮಿಟಿಯಲ್ಲಿ ನಾನು ಕೂಡ ಭಾಗಿಯಾಗಿದ್ದೆ.

(ಮುಂದು)

ವಿಸ.24.03.2017/1.20/18/ಎನ್.ಸಿ.ಕೆ/ಎಸ್.ಎಸ್.ಡಿ

(ಮುಂದು)

ಅಧ್ಯಕ್ಷರು: ಸುಮಾರು 7,000 ಕೇಸುಗಳನ್ನು ನನ್ನ ತಾಲ್ಲೂಕಿನಲ್ಲಿ ಮಾಡಿ 99% ರೈತರಿಗಾಗಿಯೇ ಮೀಸಲಾಗಿರುವಂತೆ ಮಾಡಿಕೊಟ್ಟಿದ್ದೆನ್ನು. ಅದು ಒಂದು ಹೆಮ್ಮೆ ಇದೆ. ಆಗ ಯಾವುದೇ evidence ಇಲ್ಲದೆ, oral evidence, spot inspection ಮೂಲಕ ನಾವು ಕೊಟ್ಟಿದ್ದೇವೆ. ಇವತ್ತು ಇಲ್ಲಿಯೂ ಸಹಿತ ಯಾವುದೇ ದಾಖಲೆಗಳು ಇದೆಯೋ ಇಲ್ಲವೋ ಅವರು ವಾಸವಾಗಿದ್ದಾರೆಯೇ ಇಲ್ಲವೇ ಇಷ್ಟೇ ನೋಡಿಕೊಂಡು ಅವರಿಗೆ ಅವರ ಹಕ್ಕುಪತ್ರವನ್ನು ಕೊಡತಕ್ಕಂಥ ಕಾರ್ಯಕ್ರಮ ಬಂದಿದೆ. ಇದು ಬಹಳ ಸ್ವಾಗತಾರ್ಹವಾದುದು. ನನ್ನ ಸುದೈವ ಏನೆಂದರೆ ಅಂದು Land Reforms ಮಾಡತಕ್ಕಂಥ ಕಾಲದಲ್ಲಿ ನಾನು ಒಬ್ಬ ಸಾಮಾನ್ಯ ಸದಸ್ಯನಾಗಿದ್ದಂಥವನು ಇವತ್ತು ಈ ಕುರ್ಚಿಯಲ್ಲಿ ಕುಳಿತು ಇಂಥ ಕ್ರಾಂತಿಕಾರಕವಾದಂಥ ವಿಧೇಯಕವನ್ನು ಮಂಡಿಸತಕ್ಕಂಥ ಅವಕಾಶ ಬಂದಿದೆಯೆಲ್ಲ ಇದರಿಂದ ನಿಜವಾಗಿಯೂ ನನಗೆ ಬಹಳ ಸಂತೋಷವಾಗಿದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಕಾನೂನು ಮತ್ತು ಕಂದಾಯ ಸಚಿವರುಗಳಿಗೆ, ವಿರೋಧ ಪಕ್ಷದ ನಾಯಕರು ಮತ್ತು ಎಲ್ಲ ಸದಸ್ಯರಿಗೂ ಹೃದಯಪೂರ್ವಕವಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಈಗ ಬಜೆಟ್ ಮೇಲೆ ಚರ್ಚೆ ಆಗುತ್ತದೆ. ನಿನ್ನೆ ಮಾನ್ಯ ಸದಸ್ಯರಾದ ಖಮರುಲ್ ಇಸ್ಲಾಂರವರು ಅರ್ಧ ಮಾತನಾಡಿದ್ದಾರೆ. ಅವರು ಮುಗಿಸಿದ ಮೇಲೆ ಅವಕಾಶ ಕೊಡುತ್ತೇನೆ. ಈಗ ಖಮರುಲ್ ಇಸ್ಲಾಂರವರು ಬಜೆಟ್ ಮೇಲೆ ಮಾತನಾಡಬಹುದು.

ಡಾ. ಖಮರುಲ್ ಇಸ್ಲಾಂ (ಕಲಬುರಗಿ ಉತ್ತರ) : ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಬಜೆಟ್ ಮೇಲೆ ಪ್ರಾರಂಭಿಸಿದ ಭಾಷಣವನ್ನು ಇನ್ನೂ ಮುಕ್ತಾಯಗೊಳಿಸಿಲ್ಲ. ಈಗ ನನಗೆ ತಾವು ಬಜೆಟ್ ಮೇಲೆ ಭಾಷಣವನ್ನು continue ಮಾಡುವುದಕ್ಕೆ ಆದೇಶವನ್ನು ಕೊಟ್ಟಿದ್ದೀರಿ. ಅದಕ್ಕೆ ನಾನು ತಮಗೆ thanks ಹೇಳಬಯಸುತ್ತೇನೆ. ನಮ್ಮ ಕುಡಚಿ ಸದಸ್ಯರು ನಿನ್ನೆ ನಾನು minority ಬಗ್ಗೆ ಮಾತನಾಡುವ time ನಲ್ಲಿ ವಕ್ಫ್ ಬಗ್ಗೆ ನೀವು ಹೇಳಿ ಎಂದರು. ಆಗ ನಾನು ಅವರಿಗೆ ಈಗ ಬೇಡ, ಆಮೇಲೆ ನಾನು HKRDB ಬಗ್ಗೆ ಮಾತನಾಡುವಾಗ ಹೇಳುತ್ತೇನೆಂದು ಅವರಿಗೆ ಹೇಳಿದೆ. ಅದು ಸದನಕ್ಕೆ ಗೊತ್ತಾಗಬೇಕು.

*(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)*

ಡಾ. ಖಮರುಲ್ ಇಸ್ಲಾಂ: After the independence, Wakf Act has come into existence by Parliament Act in 1954. ಆಮೇಲೆ 1995ನಲ್ಲಿ ಒಂದು amendment ಆಯಿತು. ಆಮೇಲೆ 2013ರಲ್ಲಿ ಪಾರ್ಲಿಮೆಂಟ್‌ನಲ್ಲಿ second amendment ಆಯಿತು. ಆ second amendment ಬಹಳ ಮಹತ್ವದ amendment ಆಗಿದೆ. ಪಾರ್ಲಿಮೆಂಟ್‌ನಲ್ಲಿ unanimously pass ಆಗಿದೆ. Two things are important. ಒಂದು second survey ಆಗಬೇಕು. Secondly, multiple tribunal ಆಗಬೇಕು. Three judges tribunal ಆಗಬೇಕು. ಪಾರ್ಲಿಮೆಂಟ್‌ನಲ್ಲಿ ಏಕೆ ಈ ಸಮಸ್ಯೆ ಬಂದಿದೆ? Sir, 1954 ಆದಮೇಲೆ ನಮ್ಮ Wakf property ಏನಿದೆ ಅದನ್ನು identify ಮಾಡಲಿಕ್ಕೆ ಒಂದು ಸರ್ವೆ ಆಯಿತು. ಆ ಸಮಯದಲ್ಲಿ ಆ Act ಪ್ರಕಾರ ಪ್ರತಿ 10 ವರ್ಷಗಳಾದ ನಂತರ ಸರ್ವೆ ಆಗಬೇಕು. Unfortunately, ನಮ್ಮ ಕರ್ನಾಟಕದಲ್ಲಿ 40 ವರ್ಷಗಳಾಗಿವೆ, first survey ಏನಾಗಿದೆ ಆ ಸರ್ವೆ under the Revenue Act ಆಗಿಲ್ಲ. ಕೇವಲ department ನಿಂದ ಆಗಿದೆ. ಆ ಸರ್ವೆ ಆದಮೇಲೆ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

departmentನಲ್ಲಿ ಒಂದು gazette ಮಾಡಿಬಿಟ್ಟಿದ್ದಾರೆ. ಆ gazette ನನ್ನ ಕಡೆ ಇದೆ. This is the wakf property. ಸಾಕಷ್ಟು cases ನಡೆಯುತ್ತಿವೆ. ಕೋರ್ಟ್‌ನಲ್ಲಿ ಸಾಕಷ್ಟು propertyನಲ್ಲಿ Government offices have illegally occupied and encroached. Local bodies, ಮುಸ್ಲಿಂ ಜನ, non ಮುಸ್ಲಿಂ ಜನರ ಒಂದು ಮಾಫಿಯಾ ನಡೆಯುತ್ತಿದೆ. ಇಡೀ ದೇಶದಲ್ಲಿ ಬಹಳ ದೊಡ್ಡ ಸಮಸ್ಯೆ ಬಂದ ಮೇಲೆ ಈ amendment 2013ರಲ್ಲಿ ಎಲ್ಲ parties ಸೇರಿ ಮಾಡಿದ್ದಾರೆ. ಅದರ ಪ್ರಕಾರ second survey ಮಾಡಬೇಕು. ಈಗ second survey under the Revenue Act ಮಾಡಬೇಕಾಗಿದೆ. Section 2, 3 4, Our IGR, survey Commissioner, Deputy Commissioner, A.C., Tahsildar ಇದ್ದಾರೆ. When I was the Minister for the Minorities I have taken seven meetings of the Divisional Commissioners. All the D.C.s were there. Because the Hon'ble Chief Minister was very particular. It was mandatory. Every State has to complete the survey in one year. That is the order from the Parliament. So, ಮಾನ್ಯ ಮುಖ್ಯಮಂತ್ರಿಗಳು ಖಮರುಲ್ಲಾರವರೇ ನಾನು ನಿಮಗೆ ಆದೇಶವನ್ನು ಕೊಡುತ್ತೇನೆ. ನೀವು ಎಲ್ಲ Divisional Commissioners, D.C.s ಕರೆಯಿರಿ, second survey ಪ್ರಾರಂಭಿಸುವುದಕ್ಕೆ ಹೇಳಿ. 176 ತಾಲ್ಲೂಕುಗಳಲ್ಲಿ ಆ ಕೆಲಸ ಪ್ರಾರಂಭವಾಯಿತು. ನಮ್ಮ manifesto ದಲ್ಲಿ 10 ಏನಿದೆ, ಅದನ್ನು ನಾನು ಹೇಳಿದ್ದೇನೆ, ಅದರಂತೆ ನಡೆಯುತ್ತಿದೆ. ಸ್ವಲ್ಪ notifications issue ಆಗಿದೆ. About 75% to 80% of survey is nearing completion. ಆ ಸರ್ವೆಯಲ್ಲಿ ಏನಾಗುತ್ತದೆ ಎಂದರೆ there are certain lands which have been vested to the Government. Just now you have passed amendment bill of Land Reforms Certain Inam Abolition and all those

things. So at that time in 1977 under the Certain Inam Abolition Act those who are tenants and the land which was even though as per the Gazette of that survey which was not under the Revenue Act has been vested. That means the institutions which are having more than 54 acres of land that land has been vested to the Government. At that time, Sri Devaraja Urs was the Hon'ble Chief Minister. Certain people of the institutions have gone and requested that Sir, the institution will loose everything. I can quote many examples. ನಮ್ಮ ಕಲಬುರಗಿಯಲ್ಲಿ ಫರ್ತಾಬಾದ್ ಇದೆ, ಬಂದೇನವಾಜ್ ಇದೆ, ಬೇರೆ ಬೇರೆ ಕಡೆ 400, 600, 700, 800, ಎಕರೆ land ಇದೆ. ಆ land ನಲ್ಲಿ Certain Inam Abolition ದಲ್ಲಿ ಎಲ್ಲ land vest ಆಗಿದೆ. ಆಮೇಲೆ Government has given two ceilings. 54 + 54 for the institutions. ಮುಸ್ಲಿಂ ಇರಲಿ, ದರ್ಗಾ ಇರಲಿ, ಮಂದಿರ ಇರಲಿ, ಎಲ್ಲ ಅದೇ same ಕಾನೂನು ಪ್ರಕಾರ. Then the notification was issued by the Government that this institution which is having 200, 400, 500 acres of land is vested and as per this notification they have got only 108 acre land. This is the notification. Then land Tribunal has come. In the Land Tribunals this vested land was given to the tenants. ಇಲ್ಲಿ Revenue Minister ಸಾಹೇಬರು ಇದ್ದಾರೆ. ಆ ಪ್ರಕಾರ the tenants have become the occupants. Then they have paid and the Wakf Board ನಾನು ಹೇಳಬಯಸುತ್ತೇನೆ ಸರ್, they were present in the

Tribunal. They have said Sir, we wanted the compensation of Act of that. Then 10% whatever is there that has been paid. ಎಲ್ಲ ಆದಮೇಲೆ they have become the registered occupant. Some people have sold out after the 15 years, some lands have become NA this thing and all. That is one portion. There are certain people where the Board has not represented. Where still occupancy is going on and in that land and the buildings Government buildings are there. Last time when I was there in the Assembly Sri Sadananda Gowda was the Hon'ble Chief Minister. ಆಗ ನಮ್ಮ ಮುಖ್ಯಮಂತ್ರಿಯವರು ವಿರೋಧ ಪಕ್ಷದ ನಾಯಕರಾಗಿದ್ದರು. ನಾನು 66 properties list ಮಾಡಿ ಕೊಟ್ಟಿದ್ದೆನು. ಅದಕ್ಕೆ ಸಾಕಷ್ಟು ಎಂ.ಎಲ್.ಎ.ಗಳು sign ಮಾಡಿ Sir, these are the lands, these are the properties on which the Government and the local bodies are occupants, why not it should be given back or leased or do something for that ಎಂದು ಹೇಳಿದೆವು. Then, ಸದಾನಂದಗೌಡರು ಹೇಳಿದ್ದಾರೆ, ಖಮರುಲ್ಲಾರವರೆ ಒಂದು ಇಂಚು land ಇದ್ದರೆ ಮುಖ್ಯಮಂತ್ರಿಯವರು ನಾವು 100% ವಾಪಸ್ ಕೊಡುತ್ತೇವೆ. ಅದಕ್ಕೆ ನಾವು thanks ಹೇಳಿದ್ದೇವೆ. ಈಗ ಆ ಸಮಯ ಬಂದಿತು. ಆ ಸಮಯದಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ಮೇಲೆ ಹೇಳಿದ್ದಾರೆ. ಖಮರುಲ್ಲಾರವರೇ ಈ ಸರ್ವೆಯನ್ನು ನೀವು ಮಾಡಿ.

(ಮುಂದು)

O24-03-2017/1.30/19/DL/VR



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

24-03-2017

SRI QAMAR UL ISLAM: (contd): ಖಮರುಲ್ಲಾರವರೇ ಈ surveyಯನ್ನು ಮಾಡಿ, ನೀವು Land Tribunal, multiple Land Tribunal ಮಾಡಿಬಿಡಿ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. I am very much thankful. Land tribunal consisting of three judges has been formed. So that Land Tribunal is the basis for taking any decision. No High Court, No Supreme Court can say that so and so is occupant. They have to only refer back the case to the Tribunal, the judgment of the Tribunal is final. ನಮ್ಮ ಮುಖ್ಯಮಂತ್ರಿಯವರಿಗೆ ಧನ್ಯವಾದ ಹೇಳಬಯಸುತ್ತೇನೆ. ಏಕೆಂದರೆ ನಮ್ಮ manifestoದಲ್ಲಿ ಏನು promise ಇತ್ತು, ಆಮೇಲೆ Parliament ನಲ್ಲಿ 2013ರಲ್ಲಿ ಏನು ಆದೇಶವನ್ನು ಕೊಟ್ಟಿದ್ದಾರೆ ಅದರಂತೆ ಒಂದು Land Tribunal ಅನ್ನು for South Karnataka ಬೆಂಗಳೂರಿನಲ್ಲಿ ಒಂದು ಮಾಡಿದ್ದಾರೆ, another tribunal ಅನ್ನು ಕಲಬುರ್ಗಿಯಲ್ಲಿ ಮಾಡಿದ್ದಾರೆ. Two judges, One person is Islamic Professor who knows Islamic law and another is from the official ಅನ್ನು ನೇಮ್ಮಕ ಮಾಡಲಾಗಿದೆ ಎಂದು ಹೇಳಬಯಸುತ್ತೇನೆ. ಈ ಒಂದು issue solve ಆಗಿದೆ. ಈಗ ನನಗೆ ಕುಡುಚಿ ಸದಸ್ಯರು Wakf ಎಂದರೆ ಏನು ಎಂದು ಕೇಳಿದರು. Wakf ಎಂದರೆ "Any Muslim who dedicated his property in the name of god, dedicated to the god in the name of god for some specific purpose. Suppose if 'X' has dedicated his building for the purpose of the income of that building should go to the scholarship of the medical and engineering students, that is his man-shahi-wakif. This property will remain in the sheriyat till the eternity.

Wakf is always wakf. Wakf cannot change, nobody can dispute. When the wakf Act 1954 came into existence Moulana Azad was the member, so many muslim scholars were members. They pass the wakf Act. What the wakf act says? Wakf is always wakf. Wakf means what? Is it building, No. The will given by that person is the wakf. For example: building can destroy. Do you think that Shariyat is over. ನಾನು ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ. ಹೊಸ ಬಾಗಲಕೋಟೆ ಆಗಿದೆ, old Bagalkotನಲ್ಲಿ some portion has been merged. Three mosques, Anjuman school, ITI and all that has been merged. Do you think that the Shariyat is over. No. Shariyat is not over. What the Wakf Board did? I was there. I represented. The land was given for three mosques in the new bagalkot, anjuman school, ITI ಸಲುವಾಗಿ, same body, same anjuman, same will, same thing is going on. That is called Wakf. Wakf is always a wakf. Don't confuse that. I can quote one of the example of the DC office of the Bijapur district. It is a property of the wakf. After the independence ನಮ್ಮ ಅಧಿಕಾರಿಗಳು ಅಲ್ಲಿ ಕೆಲಸ ಮಾಡುತ್ತಿದ್ದಾರೆ. There are so many examples. I am giving one example. ನಾನು ಏನು ಹೇಳಬಯಸುತ್ತೇನೆಂದರೆ ಸರ್ಕಾರ, Deputy Commisioners ಅಲ್ಲಿ ಕೆಲಸ ಮಾಡುತ್ತಿದ್ದಾರೆ. Is there any lease? Is that wakf property has



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

been leased. Wakf property can be wasted. Wakf property can be sold. But that amount is to be used for the same purpose of the wakf, so that wakf men should be continued. ಸಾಕಷ್ಟು ಇಡೀ ದೇಶದಲ್ಲಿ ನಮ್ಮ ಅಬ್ಬಾಸ್ ನಕ್ವಿ ಮಂತ್ರಿಗಳು Parliament ನಲ್ಲಿ ನಮ್ಮ ದೇಶದಲ್ಲಿ 50% of the properties are wakf properties. ಎಲ್ಲಾ ಜನರು ಹೇಳುತ್ತಿದ್ದಾರೆ. This is a very important question which Kuduchi MLA has told. ಈಗ ಸಮಯ ಬಂತು. Situation ಬಂತು. ಈ second survey final ಆದ ಮೇಲೆ ನಾನು ಕಾಗೋಡು ತಿಮ್ಮಪ್ಪನವರ ಜೊತೆ ಮಾತನಾಡಿದೆ. ತಾವು ಅಧಿಕಾರದಲ್ಲಿ ಇದ್ದೀರಿ. If they are the occupants, if compensation has to be given, that money should be given to the wakf, to the same institution. Board has no property. Only institutions are having properties. Board under the Act is a supervisory. Institutions are important. Committees are there. ನಾನು 3 ವರ್ಷಗಳ ಕಾಲ ಮಂತ್ರಿಯಾಗಿದ್ದೆ. ಇಡೀ ದೇಶದಲ್ಲಿ Wakf Department came in to existence in Karnataka in the year 1961. But, you will be surprised sir, that nowhere in India, no state in India there is no C & R rule to appoint for Wakf. ನಾನು ಬಂದ ಮೇಲೆ ಅಲ್ಲಿ C & R rule ಮಾಡಿದ್ದಾರೆ. This Act has come thrice and twice it has been amended. Even today I am telling in this House that Karnataka is the only state after 1961 in which C & R rule is amended. No state has done any C & R Rule. Just imagine the negligence. What has happened with the

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

minorities properties? Under the same act on which we are working ಲಕ್ಷಾಂತರ, ಕೋಟ್ಯಾಂತರ ಬೆಲೆ ಬಾಳುವ properties ಅಮಾರಾ ಬುರ್ಝುರ್ಗ್ ಲೋಗೋ ನೇ ಜೊ ಹಮ್ ಕೊ ಪ್ರಾಪರ್ಟಿಸ್ ದಿಯಾ ಹೈ if it has been utilized for education and developed for the purpose, we don't require any money from any government. That has been done by our predecessors. Unfortunately, we the muslim leaders have not done what has been expected by our community under the constitution. Definitely we are responsible. ನಾನು ನಮ್ಮ ಮುಖ್ಯಮಂತ್ರಿಗೆ ಅಭಿನಂದನೆ ಹೇಳಬಯಸುತ್ತೇನೆ. C & R rule ಆದ ಮೇಲೆ ನಾನು 243 C and D group employees appoint ಮಾಡಿದ್ದೇನೆ. ಯಾರನ್ನು appoint ಮಾಡಬೇಕು? 4% minorities to the appointed, which you know is the reservation. Then I have appointed all the 243 Muslims. You can ask a question. Somebody asked me that ಖಮರುಲ್ಲಾ ರವರೇ have you made Wakf Board as Pakistan. ಯಾರು ಹೇಳಿದ್ದಾರೆ ಎಂದು ನಾನು ಆಮೇಲೆ ಹೇಳುತ್ತೇನೆ. ನಾನು ಏನು ಹೇಳಿದೆ ಎಂದರೆ ನಮ್ಮ Endowment Act, Mujrai Act ಇದೆ. Mujrai Rules section 7 says that the Supervisor of the Mandir should have a faith of the same community, means if Hindu mandir is there he should be of the same faith. Otherwise, his services will be dismissed on the spot. I have requested our law department that ನಮ್ಮ ಮಸೀದಿ, ನಮ್ಮ ದರ್ಗ, ಇದು Muslim ಜನ, Muslim faith, ಅವರನ್ನೆ ಮಾಡಬೇಕು. Thankful to the Law department and Hon'ble Chief

Minister, he said that as far as wakf is concerned ಎಲ್ಲಾ employees ಅನ್ನು ನೀವು C & R rule ಪ್ರಕಾರ Muslims ಅನ್ನು ಮಾಡಿ. RSS ಯಿಂದ ಹೆಸರು ಹೇಳುವುದು ಬೇಡ ಎಂದು ನನಗೆ ಹೇಳಿದ್ದಾರೆ. First he met my OSD Sri Nissar Ahmed . ಆಮೇಲೆ ಖಮರುಲ್ಲಾ ಇಸ್ಲಾಂರವರು ಈ ತರಹ ಮಾಡುತ್ತಿದ್ದಾರೆ ಎಂದು ಕೇಳಿದ್ದಾರೆ. Already law department has given the permission. It is only for the Wakf and not for the other institutions ಎಂದು ಹೇಳಿದ್ದಾರೆ. Then he apologized. ಇದು ನಮ್ಮದು ಅಲ್ಲ. ಸರ್ಕಾರದ್ದು. ನಿಮ್ಮ ಮಂದಿರಗಳಲ್ಲಿ Whether any Muslim can go and do the service there. Can he be a supervisor there?

..contd..

24.03.2017 / 1.40 (20) / JB-VR

ಶ್ರೀ ಖಮರುಲ್ ಇಸ್ಲಾಂ (ಮುಂದು . . .): ಈ ತರಹ ಇದು ಒಂದು ಆಗಿದೆ. Why I did this? This is only to see that in the next future, whatever properties are under the occupation of the Government, the semi-Government or those mafias who are illegally occupant, we will see that the taskforce which has come will take action and we will give notice. Kindly have a lease and give us the lease amount? If you want to purchase it, we will use that that money. You give us another land, so that we can build, so that we can have money and utilized for that. This is the purpose. Now I will come to HKRDB. HKRDB is very very important.



ತಿದ್ದುಪಡಿಯಾಗದ Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಉಪಾಧ್ಯಕ್ಷರು: ಖಮರುಲ್ ಇಸ್ಲಾಂರವರೇ, ದಯವಿಟ್ಟು conclude ಮಾಡಿ. You speak on budget.

ಶ್ರೀ ಖಮರುಲ್ ಇಸ್ಲಾಂ: ಬಜೆಟ್ ಬಗ್ಗೆಯೇ ನಾನು ಮಾತನಾಡುತ್ತಿದ್ದೇನೆ. ಈಗ ಹೇಳುತ್ತಿದ್ದೇನೆ. ಇದು HKRDB budget. ನಾನು ಏಕೆ ಹೇಳುತ್ತಿದ್ದೇನೆಂದರೆ, HKRDB 2013ನೇ ಸಾಲಿನಲ್ಲಿ a very revolutionary amendment 371(J) ಆಗಿದೆ. ಆ 371(J) ಪಾರ್ಲಿಮೆಂಟ್‌ನಲ್ಲಿ ಯಾವರೀತಿಯಾಗಿ ಆಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. Who are all played the important role ಎಂದು ಗೊತ್ತಿದೆ. That was the dream of Hyderabad-Karnataka people who were suffering from last so many years. ಸೇರ್ಪಡೆಯಾದ ಮೇಲೆ we know what is the suffering of the Hyderabad-Karnataka people. ನಮ್ಮ UPA ಸರ್ಕಾರದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಚಿವರಾದ ಮೇಲೆ, ಮಾನ್ಯ ಧರ್ಮಸಿಂಗ್‌ರವರು ಸಹ he has taken a lot of pain and he did his best to all the HKRDB people, members, MLA's, even all the M.P.s of that area. Other parties also supported. It is not so easy to pass that bill. But we are thankful to Hon'ble the then Prime Minister Manmohan Singhji and our Home Minister and all the opposition leaders and all the parties and Mr. Mallikarjun Kharge and Mr.Dharam Singh for the role they played for that. But, responsibility lies on me. I am thankful to Hon'ble Chief Minister, he made me the first Chairman for the two years of HKRDB. I am thankful to our H.K.Patil and Law Minister who were in the sub-committee. ನಮ್ಮ District



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

Incharge Minister ನಾನೇ ಆಗಿದ್ದೇನೆ ಹಾಗೂ Chairman ನಾನೇ ಆಗಿದ್ದೇನೆ. ಆ time ನಲ್ಲಿ ರೂಲ್ಸ್ ಮಾಡಬೇಕು ಎಂದು day and night ಪ್ರಯತ್ನ ಮಾಡಿ we have prepared the rules within 6 months and ನಾನು as a Chairman 14 months ಕೆಲಸ ಮಾಡಿದ್ದೇವೆ. ಇದು ತಮಗೆ ಗೊತ್ತಾಗಬೇಕು ಸರ್. This year Hon'ble Chief Minister has announced Rs.1,500 crores for Hyderabad-Karnataka. During last 3 years Rs.2,500 crores has been given. What was our demand? Our demand was Rs.5,000 crores in 5 years. I am thankful. ನಾನು ಈಗ ಹೇಳಬಯಸುತ್ತೇನೆ. ನಮ್ಮ ವಿರೋಧ ಪಕ್ಷದ ನಾಯಕರು ಈಗ ಯಾರೂ ಇಲ್ಲ. (ಗೊಂದಲ) ಒಳಗಡೆ ನೋಡುತ್ತಾರೆ. ನಾನು ಈ ಸದನದಲ್ಲಿ ಹೇಳಬಯಸುತ್ತೇನೆ. ಸವದಿ ಸಾಹೇಬರೇ, 2008ರಿಂದ 2013ರವರೆಗೆ HKRDBಯಲ್ಲಿ ಎಷ್ಟು ಹಣವನ್ನು ಸರ್ಕಾರದಲ್ಲಿ ಹೈದರಾಬಾದ್-ಕರ್ನಾಟಕಕ್ಕೆ ಬಿಟ್ಟಿದ್ದಾರೆ, release ಮಾಡಿದ್ದಾರೆ, allot ಮಾಡಿದ್ದಾರೆ ಎಂದರೆ, ಕೇವಲ ರೂ.305 ಕೋಟಿಗಳು. ಯಾರಿಗೆ ಎಷ್ಟು ಕಾಳಜಿಯಿದೆ? ಅದು ತೋರಿಸಬೇಕು. ರೂ.305 ಕೋಟಿಗಳು, less than that expenditure was made. ಈಗ ನಮ್ಮ ಹೈದರಾಬಾದ್-ಕರ್ನಾಟಕದಲ್ಲಿ ರೂ.2,500 crore, Rs.1,000 crore, Rs.4,000 crore is for us. It is the responsibility. ಈಗ ಡಾ:ಶರಣಪ್ರಕಾಶ್‌ರವರು Chairman ಆಗಿದ್ದಾರೆ, ನಾವೂ ಸಹ Chairman ಇದ್ದೇವೆ, 1,200 k.m. road works have been completed there. 500 institutions have been already completed from Health department, Social welfare department, Women and Child welfare department, Education department. So many things we are doing. I do not want to go in to details. I am in this House for last 30-40 years. ಕಲಬುರ್ಗಿಯಲ್ಲಿ ಕ್ಯಾಬಿನೆಟ್ ಆಯಿತು. ಕ್ಯಾಬಿನೆಟ್‌ನಲ್ಲಿ

ಏನಾಗಿದೆ ಎಂದರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ನಾವೆಲ್ಲಾರೂ ಅಂದರೆ ಡಾ:ಶರಣಪ್ರಕಾಶ್‌ರವರು ಹಾಗೂ ಎಲ್ಲಾ ಮಂತ್ರಿಗಳು ಹೋಗಿ ಸಾಕಷ್ಟು ಜನರಿಗೆ jobs ಇಲ್ಲ, 371(J)ಅಡಿಯಲ್ಲಿ jobs fill up ಮಾಡಬೇಕೆಂದು ಕೇಳಿದೆವು. ಆ time ನಲ್ಲಿ ಸದನದಲ್ಲಿ ನಾನು ನೋಡಿದೆ. ನಾನು ಆ ರೆಕಾರ್ಡ್ಸ್ statement ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ ಎಂದರೆ, ಸ್ವಲ್ಪ ಜನರಿದ್ದಾರೆ, 50 ಸಾವಿರ posts vacant ಇದೆ. Somebody says 45 ಸಾವಿರ, somebody says 40 ಸಾವಿರ ಅಲ್ಲ. ಮಾನ್ಯ ಮುಖ್ಯಮಂತ್ರಿಯವರು R.C ನೇತೃತ್ವದಲ್ಲಿ ಒಂದು ಸಮಿತಿ ಮಾಡಿ, within two months ನನಗೆ identify ಮಾಡಿ ಹೇಳಿ ಎಂದಿದ್ದರು. 30 ಸಾವಿರ posts were identified. That is the correct figure. ಅದನ್ನು ನಾನು ಈ ಸದನದಲ್ಲಿ ಹೇಳಬಯಸುತ್ತೇನೆ. Out of that 22,000 Government posts of all the departments. 8,000 vacant posts are from Universities, Local bodies and other posts. Out of 22,000 as on today, 12,000 posts have been filled up. Only 18,000 posts which are in progress. ನಾವೂ ಸಹ ಸದನದಲ್ಲಿದ್ದೇವೆ. 6 times ನಾನು ಎಂ.ಎಲ್.ಎ ಆಗಿದ್ದೇನೆ ಹಾಗೂ ಎಂ.ಪಿ. ಕೂಡ ಆಗಿದ್ದೇನೆ. ನಾನು ನೋಡಿದ್ದೇನೆ. ಇಲ್ಲಿ ಏನಾಗುತ್ತದೆ ಎಂದರೆ, ನಾವು ಇಷ್ಟೊಂದು employment ನೋಡಿಲ್ಲ. I am confident, Dr. Sharan Prakash is also here know? We are confident that within short time that posts will be filled up. Can we think of it sir? 6 medical colleges were given. ಹೈದರಾಬಾದ್-ಕರ್ನಾಟಕಕ್ಕೆ more medical colleges ಬಂತು. ಕಲಬುರ್ಗಿಯಲ್ಲಿ, ಬೀದರ್‌ನಲ್ಲಿ ಹಾಗೂ ಕೊಪ್ಪಳದಲ್ಲಿ. Now we are getting 19,000 candidates for medical and engineering colleges. It is not an ordinary thing. It is only because of the 371(J). It is because of the Hon'ble Chief Minister interest towards



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

Hyderabad-Karnataka area.ನಾನು ಅವರಿಗೆ ಅಭಿನಂದನೆ ಹೇಳಬಯಸುತ್ತೇನೆ. ಇದೇ ತರಹ ನಾನು ನಿಮಗೆ ಹೇಳಬಯಸುತ್ತೇನೆ. ನಮ್ಮ Police Commissionerateನಲ್ಲಿ ಇನ್ನೂ ಒಂದು decision ಆಯಿತು. I am very much thankful to the Hon'ble Chief Minister as well as our Home Minister. Promise had been made that there will be a Police Commissionerate in Belgaum as well as in Kalburgi. Last year ಬೆಳಗಾಂನಲ್ಲಿ ಆಗಿದೆ. ಈ ವರ್ಷ ಕಲಬುರ್ಗಿಯಲ್ಲಿ ಘೋಷಣೆಯಾಗಿದ್ದೆ. ಕಲಬುರ್ಗಿಯಲ್ಲಿ Commissionerate ಮಾಡುವುದಕ್ಕೆ I am very much thankful to him. There was demand for taluks. Such a big district was divided in to Yadgir and Kalburgi. When Belgaum is compared area wise with Kalburgi, Kalburgi is bigger than Belgaum. As per the population Belgaum is more. That was divided as the first district. ಈಗ ಕಲಬುರ್ಗಿಯಲ್ಲಿ 4 ತಾಲ್ಲೂಕುಗಳು declare ಮಾಡಿದ್ದಾರೆ. ಕಮಲಾಪುರ, ಕಾಳ್ಗಿ, ಎಡರಾಮಿ ಮತ್ತು ಶಹಾಬಾದ್. Hon'ble Chief Minister ಗೆ ನಾನು ಅಭಿನಂದನೆ ಹೇಳಬಯಸುತ್ತೇನೆ. ಇದೇ ರೀತಿ ನಮ್ಮ ಹೈದರಾಬಾದ್-ಕರ್ನಾಟಕದಲ್ಲಿ ಇನ್ನೂ ಒಂದು ತಮಗೆ ಹೇಳಬಯಸುತ್ತೇನೆ. There are so many issues. ನಾವು ಅಲ್ಲಿ ರೈಲ್ವೆ ಇರಲಿ, ಅದು ಇರಲಿ, ಇದು ಇರಲಿ... ಏಕೆಂದರೆ, detail ಆಗಿ ಹೋಗಬೇಕಾದರೆ ಸಾಕಷ್ಟು ಟೈಮ್ ಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳುತ್ತೇನೆ.

(ಮುಂದು . . .)

ದಿನಾಂಕ: 24-03-2017-1.50(21)-ಜೆ.ಎಲ್&ಪಿ.ಎಸ್

ಶ್ರೀ ಖಮರುಲ್ ಇಸ್ಲಾಂ (ಮುಂದುವರೆದುದು): ನಾವು ಸಂಕ್ಷಿಪ್ತವಾಗಿ, I know in the House certain records have to be set right. ಈಗಾಗಲೇ I am ready to talk on this issue. ಸುಮ್ಮನೆ ಈ ರೀತಿ ಹೇಳಿದರೆ ಒಳ್ಳೆಯದು



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಆಗುವುದಿಲ್ಲ. Sir, I do not have faith, See I am a man, I tell you, ಖಮರುಲ್ ಇಸ್ಲಾಂ ಅವರು ಮುಸ್ಲಿಂ ಲೀಗ್ ನಿಂದ 1978 ರಲ್ಲಿ ಗೆದ್ದಿದ್ದಾರೆ. ಆದರೆ ನಾನು ಈ ಸದನದಲ್ಲಿ ಹೇಳಬಯಸುತ್ತೇನೆ, ಕೇವಲ ಮುಸ್ಲಿಮರು ಮಾತ್ರ ನನಗೆ ವೋಟ್ ಕೊಟ್ಟಿಲ್ಲ. ನನಗೆ ಬ್ರಾಹ್ಮಣರು, ಲಿಂಗಾಯತರು, ಪರಿಶಿಷ್ಟ ಜಾತಿಯವರು ವೋಟ್ ಕೊಟ್ಟಿದ್ದಾರೆ. 18000 ವೋಟುಗಳಲ್ಲಿ ಕನಿಷ್ಟ 3500-4000 ಮುಸ್ಲಿಮೇತರ ಜನರು ನನಗೆ ವೋಟು ಹಾಕಿದ್ದಾರೆ. ಏಕೆ ಕೊಟ್ಟಿದ್ದಾರೆ. Because, I have faith in the communal harmony. I have faith in the humanity. I do not want that we should do the hatredness. I never hated with the humanity. I belong to a religion, my religion, my prophet says that; service to humanity is service to God. We have to sacrifice. ತಮಗೆ ಇನ್ನೊಂದು ಮಾತು ಹೇಳಬಯಸುತ್ತೇನೆ, ನಾವು district incharge minister ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷನಾದ ಮೇಲೆ ನಾನು ಕೇಳಿ ನಮ್ಮಲ್ಲಿ ಸಾಕಷ್ಟು ವೀರಶೈವ ಸಮುದಾಯದ ಶಾಸಕರಿದ್ದಾರೆ, ಯಾರೋ ನನಗೆ ಬಸವಣ್ಣನಿಗೆ 50 ಲಕ್ಷ ಅನುದಾನ ಕೊಡಿ ಎಂದು ಕೇಳಿದಾಗ ನಾನು 62 ಲಕ್ಷಗಳನ್ನು ಕೊಟ್ಟಿದ್ದೇನೆ. ಇದನ್ನು ನೋಡಿ ಜನರು ಆಶ್ಚರ್ಯಪಟ್ಟರು, ಏನ್ರೀ no lakhs capping ಎಂದು ಹೇಳಿದರು. We have done for Dr.Baba Saheb Ambedkar beautifully. Then, I have said let there should be library and all other things. I have sanctioned another 3-3.5 Crores for that. It is I, who gave the money for the......

ಅಧ್ಯಕ್ಷರು: ಬೇಗ conclude ಮಾಡಿ.

ಶ್ರೀ ಖಮರುಲ್ ಇಸ್ಲಾಂ: ನಮ್ಮ ಮಾನ್ಯ ಜಗಜೀವನರಾಮ್ ಅವರ Statue is ready. ಇದೇ ರೀತಿ ಸುಲಫುಲ ಮಠ. See, fortunately or unfortunately I belong to a constituency where all the

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

saints are there. ಎಲ್ಲ ಸಂತರುಗಳು, ಬಂದೇನವಾಜ್, ಕಬೂಲ್ ಉಲ್ಲಾ ಹುಸೇನಿ, ರುಕಮೂದ್ದೀನ್ ಉಲ್ಲಾ ರಾಣೇಜ್ ಪೀರ್, ಶೇಖ್ ಜುನೈದಿ, ತೇಗ್ ಬುನಾದಾ ದರ್ಗಾ ಇದೆ, ಅದೇ ರೀತಿ ನಮ್ಮಲ್ಲಿ ರೇವಣಸಿದ್ದೇಶ್ವರ ಮಠ, ಸುಲಫುಲ ಮಠ, ಕಡಗಂಜಿ ಮಠ ಎಲ್ಲವೂ ನನ್ನ ಕಡೆ ಇವೆ. ನಾನು ಎಲ್ಲರನ್ನೂ ಒಂದು ಕಡೆ ತೆಗೆದುಕೊಂಡು ಅಭಿವೃದ್ಧಿ ಮಾಡುತ್ತಿದ್ದೇನೆ. ಆದರೆ unfortunately ಏನಾಗಿದೆಯೆಂದರೆ; ಸ್ವಲ್ಪ ಜನ unnecessarily they divide the dharma in the name of the colours. ಅವರು ಭಗವಾನ್ ಇವರು ಗ್ರೀನ್, ಇದೇ ತರಹ. ಸುಮ್ಮನೆ ಒಂದು ಶಾಯರಿ ಹೇಳಬಯಸುತ್ತೇನೆ. "ಆಜ್ ಕಲ್ ದೇಶ್ ಮೇ ಜೋ ಯು.ಪಿ. ಎಲೆಕ್ಷನ್ ಜೋ ಹುವಾನಾ, I do not want to quote, ಏಕ್ ದೋ ಅಚ್ಚೇ ಶಾಯರಿ ಮೈ ಬೋಲತಾ ಹೂಂ. ಹಮಾರೆ ಕೃಷ್ಣಾ ಬೈರೇಗೌಡಾ ಸಾಹೇಬ್ you can enjoy the shayari.

(ಈ ಹಂತದಲ್ಲಿ ಮಾನ್ಯ ಸದಸ್ಯರು ಹಿಂದಿಯಲ್ಲಿ ಮಾತನಾಡಿದರು)

Sir, Where this country is going? Every Channel ನೋಡಿದರೆ ನನಗೆ ಬಹಳ ದುಃಖವಾಗುತ್ತದೆ. ಕೊನೆಯಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. For a period of 1 year 18 months I was the parliament member, thanks to the people of the Gulbarga. ಖಮರುಲ್ ರವರೆ ನಿಮ್ಮ ಟರ್ಮ್ ಬಹಳ ಕಡಿಮೆಯಿತ್ತೆಂದು ಜನರು ಹೇಳಿದರು. ಅದಕ್ಕೆ ನಾನು ಈ ಕಡಿಮೆ ಅವಧಿಯಲ್ಲಿ ನಾನು ಮೂರು ಜನ ಪ್ರಧಾನ ಮಂತ್ರಿಗಳನ್ನು ನೋಡಿದ್ದೇನೆಂದು ಹೇಳಿದೆ. ಅಟಲ್ ಬಿಹಾರಿ ವಾಜಪೇಯಿ, ಹೆಚ್.ಡಿ.ದೇವೆಗೌಡ ಮತ್ತು ಐ.ಕೆ.ಗುಜ್ರಾಲ್‌ರವರು. ಅಟಲ್ ಬಿಹಾರಿ ವಾಜಪೇಯಿರವರು ತಮಗೆ ಗೊತ್ತು. He was grate poet also. When Sri Devegowda was Prime Minister, I was his political secretary. I am the only man in this House, who spoke for 22 minutes on the occasion of the 50 years celebration in the Parliament. In that speech, when an opportunity was

given by the Hon'ble Speaker Mr.P.A.Sangma for ten minutes, he rang the bell after 20 minutes. At that time Atal Behari Vajpayeeji said, ಖಮರುಲ್ಲಾ ಮುಕರರ್ ಇರ್ಷಾದ್, ಮುಕರರ್ ಇರ್ಷಾದ್. Regarding the minority I have said. ಒಂದು ಶಾಯರಿ ಹೇಳಬಯಸುತ್ತೇನೆ, ಆ ಶಾಯರಿ ಹೇಳಿ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

(ಹಿಂದಿಯಲ್ಲಿ ಶಾಯರಿಯೊಂದನ್ನು ಹೇಳಿದರು)

If you show the video, the leader of the opposition in the Parliament Sri Atalji gave shake hand. I was the quoting the shayari. Why our muslims, they were educated. That boy was educated. He do not have the job and he was so poor and all. ಆಗ 1997 ರಲ್ಲಿ ಏನು ಮಾತನಾಡಿದ್ದೇನೆ, ಅದರಿಂದಾಗಿಯೇ ಈಗ ನನಗೆ opportunity ಸಿಕ್ಕಿದೆ. ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯರವರು ತಮ್ಮ ಮಂತ್ರಿ ಮಂಡಲದಲ್ಲಿ ನನ್ನನ್ನು ಮಂತ್ರಿ ಮಾಡಿ, ಅಲ್ಪಸಂಖ್ಯಾತರ ಕಲ್ಯಾಣ ಖಾತೆಯನ್ನು ಕೊಟ್ಟ ನಂತರ ನಾವು ಅಲ್ಪಸಂಖ್ಯಾತರಿಗೋಸ್ಕರ ಏನೇನು ಮಾಡಿದ್ದೇವೆನ್ನುವುದರ ಮೇಲೆ, It is that feeling of the Qumar Ul Islam which has come. Power will and power will go, House will be there, and history will be there. Now I will say 20 people were going to abroad with how much money, only Rs.5 lakhs. ನಾನು ಬಂದ ಮೇಲೆ 357 ಅಲ್ಪಸಂಖ್ಯಾತರರು they are going to the Abroad, as on today our government is giving Rs.20 lakhs to them.

(ಮುಂದುವರೆದಿದೆ)

ದಿನಾಂಕ:24.03.2017.02.00.(22).ಜಿಎಂ.ಪಿಎಸ್.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಖಮರುಲ್ ಇಸ್ಲಾಂ(ಮುಂದುವರೆದುದು):

We have established under one banner in our scheme. ಮತ್ತು ಈ ವರ್ಷ ಬೆಂಗಳೂರಿನಲ್ಲಿ ರೂ.20 ಕೋಟಿ ವೆಚ್ಚದಲ್ಲಿ ಒಂದು ಮೌಲಾನಾ ಆಝಾದ್ ಭವನ ನಿರ್ಮಾಣ ಮಾಡುವುದಕ್ಕೆ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. In six districts already started during my period. Bangalore Maulana Azad Minority Bhavan information centreಗೆ ಧನ್ಯವಾದಗಳನ್ನು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತಿದ್ದೇನೆ. ಜೈಹಿಂದ್, ಜೈ ಕರ್ನಾಟಕ ಮಾತೆ.

ಉಪಾಧ್ಯಕ್ಷರು: ಈಗ ಊಟಕ್ಕೆ ವಿರಾಮವಿಲ್ಲ. Discussions continue ಆಗುತ್ತದೆ. ಬೊಮ್ಮಾಯಿಯವರು ತಾವು ಮಾತನಾಡುತ್ತೀರಾ? ಊಟಕ್ಕೆ break ಇಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಉಪಾಧ್ಯಕ್ಷರೆ, ಮೊದಲು ಪ್ರಾರಂಭ ಮಾಡಿ ಮತ್ತೆ ಸೋಮವಾರ ದಿವಸ continue ಮಾಡುತ್ತೇನೆ. Just ಪ್ರಾರಂಭ ಮಾಡುತ್ತೇನೆ.

ಉಪಾಧ್ಯಕ್ಷರು: ಇಂದು ಸಂಜೆ 4 ರಿಂದ 5 ಗಂಟೆಗಳವರೆಗೆ ಸದನ ನಡೆಸಬೇಕೆಂದು ಇದೆ.

ಶ್ರೀ ಅಶೋಕ್ ಎಂ.ಪಟ್ಟಣ್: ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ, ಬೊಮ್ಮಾಯಿಯವರು ಸೋಮವಾರದಂದು ಆರಾಮವಾಗಿ ಮಾತನಾಡಲಿ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಆರಾಮಾಗೇ ಮಾತನಾಡುತ್ತೇನೆ.

ಶ್ರೀ ಅಶೋಕ್ ಎಂ.ಪಟ್ಟಣ್: ಈಗ preamble ಹಾಕಿದರೆ ಮರೆತು ಹೋಗಿ ಬಿಡುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಶ್ರೀ ಬಸವರಾಜ ಬೊಮ್ಮಾಯಿ(ಶಿಗ್ಗಾಂವ್): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಿದ್ಧರಾಮಣ್ಣನವರು 2017-18ನೇ ಸಾಲಿನ ತಮ್ಮ 12ನೇ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ. ಅದರ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟಿರುವುದಕ್ಕೆ ಧನ್ಯವಾದಗಳು. ನಾನು ವಿವರವಾಗಿ ಸೋಮವಾರದ ದಿವಸ ಈ ಬಗ್ಗೆ ನನ್ನ ಭಾಷಣವನ್ನು ಪ್ರಾರಂಭ ಮಾಡುತ್ತೇನೆ. ದಯವಿಟ್ಟು ಅನುಮತಿಯನ್ನು ಕೊಡಿ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

24-03-2017

ಶ್ರೀ ಅಶೋಕ್ ಎಂ.ಪಟ್ಟಣ್: ಮಾನ್ಯ ಅಧ್ಯಕ್ಷರೆ, ಬೊಮ್ಮಾಯಿಯವರು ಸೋಮವಾರ ಮಾತನಾಡುತ್ತಾರೆ.

ಅಧ್ಯಕ್ಷರು: ಒಂದು ನಿಮಿಷ, ಈಗ ಎಲ್ಲರೂ ಊರಿಗೆ ಹೋಗುವ ಮೂಡ್‌ನಲ್ಲಿದ್ದಾರೆ, ಕುಳಿತುಕೊಂಡು ಕೇಳುವುದಕ್ಕೂ ಆಗುವುದಿಲ್ಲ. ತಾವು ಬಹಳ ವಿವರವಾಗಿ ಮಾತನಾಡುತ್ತೀರಿ ನನಗೆ ಗೊತ್ತಿದೆ, ಕೇಳಬೇಕೆಂದು ನನಗೂ ಸಹ ಆಶಯವಿದೆ. ನಾನು ಸಹ ಊರಿಗೆ ಹೋಗಬೇಕೆನ್ನುವ ವಿಚಾರದಲ್ಲಿದ್ದೇನೆ. ಅದಕ್ಕಾಗಿ ಸೋಮವಾರ ಒಂದು ದಿನ ಸಂಪೂರ್ಣವಾಗಿ ಬಜೆಟ್ ಮೇಲೆ ಮಾತನಾಡೋಣ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ನಾನೀಗ ಪ್ರಾರಂಭ ಮಾಡಿದ್ದೇನೆ, ಸೋಮವಾರ continue ಮಾಡುತ್ತೇನೆ.

ಶ್ರೀ ಅಶೋಕ್ ಎಂ.ಪಟ್ಟಣ್: Preamble ಹಾಕಿದ್ದಾರೆ.

ಅಧ್ಯಕ್ಷರು: ನೀವು 5 ನಿಮಿಷದಲ್ಲಿ ನಿಮ್ಮ ಮಾತನ್ನು ಮುಗಿಸಿಬಿಡಿ.

ಶ್ರೀ ಅಶೋಕ್ ಎಂ.ಪಟ್ಟಣ್: ಮಾನ್ಯ ಅಧ್ಯಕ್ಷರೆ, Preamble ಮಾತನಾಡಿದ್ದಾರೆ.

ಅಧ್ಯಕ್ಷರು: 5 ನಿಮಿಷ ಮಾತನಾಡಲಿ, ಸೋಮವಾರವೂ ಸಹ question hour ಏನೂ ಇಲ್ಲ, ಬಜೆಟ್ ಬಗ್ಗೆಯೇ ಮಾತನಾಡುವುದು.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ಧರಾಮಣ್ಣನವರು ತಮ್ಮ 12ನೇ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ. ಇದರ ಹಿನ್ನೆಲೆಯಲ್ಲಿ ಕೆಲವು ಪ್ರಮುಖ ಅಂಶಗಳನ್ನು ನಾನು ಗಮನದಲ್ಲಿಟ್ಟುಕೊಂಡು ಇದರ ವಿಶ್ಲೇಷಣೆ ಮಾಡುವುದು ಬಹಳ ಅವಶ್ಯಕತೆಯಿದೆ. ಪ್ರತಿಯೊಂದು ಬಜೆಟ್ ಅದು ರಾಜ್ಯದ ಆರ್ಥಿಕ ಸ್ಥಿತಿ-ಗತಿಯನ್ನಷ್ಟೇ ಅಲ್ಲದೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಅದರ ಮೇಲೆ ಪ್ರಭಾವ ಬೀರುವಂಥದ್ದನ್ನು ನಾವು ನೋಡಿದ್ದೇವೆ. ಹೀಗಾಗಿ, ಈ ಒಂದು ಬಜೆಟ್‌ನ ಹಿನ್ನೆಲೆಯ ಪ್ರಮುಖ ಅಂಶಗಳು ಮೊದಲನೆಯದಾಗಿ 14ನೇ ಹಣಕಾಸಿನ ಆಯೋಗ ತನ್ನ ವರದಿಯನ್ನು ಕೊಟ್ಟು ಕೇಂದ್ರ ಸರ್ಕಾರ ಈಗ ಎರಡನೇ ವರ್ಷ ಅನುಷ್ಠಾನಕ್ಕೆ ತಂದಿದೆ. ಅದರ ಜೊತೆಗೆ ಈ ವರ್ಷ GST ಕಾನೂನಿಗೆ ಅನುಷ್ಠಾನ ಕೊಡುವ ಎಲ್ಲಾ ಲಕ್ಷಣಗಳನ್ನು ನೋಡುತ್ತಿದ್ದೇವೆ. ಅದರ ಜೊತೆಗೆ ಇಲ್ಲಿ ಹೊಸ Pay

Commission ನಾವು ತರುತ್ತೇವೆ, ಜಾರಿ ಮಾಡುತ್ತೇವೆಂದು ಬಜೆಟ್ ಪೂರ್ವದಲ್ಲಿಯೂ ಮುಖ್ಯಮಂತ್ರಿಗಳು ಹೇಳಿದ್ದರು, ಬಜೆಟ್‌ನಲ್ಲಿ ಸಹ ಹೇಳಿದ್ದಾರೆ. ಇದೆಲ್ಲಕ್ಕಿಂತ ಮುಖ್ಯವಾಗಿ ಈ ಸರ್ಕಾರದ 5ನೇ ವರ್ಷ ಇದು. 4 ವರ್ಷ ತಮ್ಮ ಆರ್ಥಿಕ ನಿರ್ವಹಣೆಯ ಹಿನ್ನೆಲೆಯಲ್ಲಿ 5ನೇ ವರ್ಷ ಅವರು ಬಜೆಟ್‌ನ್ನು ಮಂಡನೆ ಮಾಡಿದ್ದಾರೆ. ಇದು ರಾಜಕೀಯವಾಗಿ ಬಹಳ ಪ್ರಮುಖವಾಗಿರುವಂಥ ಅಂಶ. ರಾಜಕಾರಣ ಮತ್ತು ಬಜೆಟ್‌ನ್ನು ನಾವು ಬೇರೆ ಬೇರೆಯಾಗಿ ನೋಡುವುದಕ್ಕೆ ಸಾಧ್ಯವಿಲ್ಲ. ಹಲವಾರು ಸಂದರ್ಭಗಳಲ್ಲಿ ರಾಜಕೀಯ ಪರಿಸ್ಥಿತಿ ಬಜೆಟ್ ಮೇಲೆ ಬಹಳ ದೊಡ್ಡ ಪರಿಣಾಮ ಬೀರಿದೆ. ಕೆಲವು ಸಂದರ್ಭಗಳಲ್ಲಿ ಬಜೆಟ್ ರಾಜಕಾರಣದ ಮೇಲೆ ಸಹ ತನ್ನ ಪ್ರಭಾವ ಬೀರಿದೆ. ಹೀಗಾಗಿ, ರಾಜಕೀಯ ಹಿನ್ನೆಲೆಯಲ್ಲಿಯೂ ಇದನ್ನು ನೋಡಬೇಕಾಗಿದೆ. ಐದನೆಯದಾಗಿ, ಇಡೀ national economic scenario ಬದಲಾವಣೆಯಾಗುತ್ತಿದೆ. ಹಲವಾರು ವಿಚಾರಗಳಲ್ಲಿ, ಹಲವಾರು ವಿಧಾನಗಳಲ್ಲಿ ಇದು ಬದಲಾವಣೆಯಾಗುತ್ತಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ನಮ್ಮ ಬಜೆಟ್‌ನ ವಿಶ್ಲೇಷಣೆಯನ್ನು ಮಾಡಿದರೆ ಬಹುತೇಕವಾಗಿ, ಸಂಪೂರ್ಣವಾಗಿ, ಅರ್ಥಪೂರ್ಣವಾಗಿ ಇದನ್ನು ವಿಶ್ಲೇಷಣೆ ಮಾಡುವುದಕ್ಕೆ ಸಾಧ್ಯವೆಂದು ನಾನು ಭಾವಿಸುತ್ತೇನೆ. ಇನ್ನು ವಿವರವಾದ ವಿಚಾರಗಳನ್ನು ತಮ್ಮ ಅನುಮತಿ ಮೇರೆಗೆ ಸೋಮವಾರ ನಾನು ಮುಂದುವರೆಸುತ್ತೇನೆ. ದಯವಿಟ್ಟು ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು: ಈಗ ಸದನವನ್ನು ಮುಂದೂಡಿ ಸೋಮವಾರ ಮುಂಜಾನೆ 10.30ಕ್ಕೆ ಪುನ: ಸೇರೋಣ.

**(ಸದನವು ಮಧ್ಯಾಹ್ನ 02 ಗಂಟೆ 04 ನಿಮಿಷಕ್ಕೆ ಮುಕ್ತಾಯಗೊಂಡು, ಪುನ: ದಿನಾಂಕ:27.03.2017ರ ಸೋಮವಾರದಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳುವಂತೆ ನಿಶ್ಚಯಿಸಿತು.)**

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.